ಸಾಹಿತ್ಯ ದಾಸೋಹ – 223

ಸಂಚಿಕೆ 47 – ಏಪ್ರಿಲ್ 2024 09.03.2024ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ನಮ್ಮ 223ನೆಯ ಸಾಹಿತ್ಯ ದಾಸೋಹವು ಶ್ರೀ ಜಿ.ಎನ್. ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ 09.03.2024ರಂದು ಅಂತರ್ಜಾಲ ವೇದಿಕೆಯ ಮುಖೇನ ನಡೆದು, 18 ಜನ ದಾಸೋಹಿಗಳು ತಮ್ಮ ವಿವಿಧ ಪ್ರಸ್ತುತಿಗಳನ್ನು ಓದಿದರು.

30.04.2024ರಂದು ನಡೆದ 3ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಶ್ರೀ ಬಿ.ಆರ್. ರವೀಂದ್ರನಾಥ್ ಅವರು 'ಪ್ಯಾನ್ ಇಂಡಿಯಾ ಸಿನಿಮಾ – ಒಂದು ಅವಲೋಕನ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಈ ಎರಡೂ ಕಾರ್ಯಕ್ರಮ ವರದಿಗಳು, ದಾಸೋಹದ ಪ್ರಸ್ತುತಿಗಳನ್ನು ಒಳಗೊಂಡ 'ಸಾಹಿತ್ಯ ದಾಸೋಹ–223' ಸಂಚಿಕೆ ಇಲ್ಲಿದೆ. ಎಂದಿನಂತೆ ಕವಿ ಮನ' ಅಂಕಣದಲ್ಲಿ ಮೂಡಿಬಂದ ಕವನಗಳು ಹಾಗೂ ದಾಸೋಹದ ಪ್ರಸ್ತುತಿಗಳನ್ನು ಕುರಿತು ಅಧ್ಯಕ್ಷರ ಅನಿಸಿಕೆಗಳೂ ಇದರಲ್ಲಿವೆ.

ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಜಿ.ಎನ್. ನರಸಿಂಹ ಮೂರ್ತಿ ಯವರಿಗೂ, ಭಾಗವಹಿಸಿದ ಎಲ್ಲಾ ದಾಸೋಹಿಗಳಿಗೂ, ವೀಕ್ಷಕರಿಗೂ, ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ಸಜ್ಜುಗೊಳಿಸುವಲ್ಲಿ ಹಾಗೂ ಈ ಸಂಚಿಕೆಯನ್ನು ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು

14.04.2024

ದಾಸೋಹದ ಪುಟಗಳಲ್ಲಿ

ಮುಖಚಿತ್ರ: ಹಂಪೆಯ ಕಲ್ಲಿನ ರಥ (ಚಿತ್ರ ಕೃಪೆ: ಅಂತರ್ಜಾಲ)


ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 223

ಕಾರ್ಯಕ್ರಮ ವರದಿ – ರಾಧಿಕಾ ವಿ. ಗುಜ್ಜರ್

09.03.2024ರಂದು ಇಳ ಮಧ್ಯಾಹ್ನ 3.35ಕ್ಕೆ ಸರಿಯಾಗಿ 223ನೆಯ ಸಾಹಿತ್ಯ ದಾಸೋಹವು ಆರಂಭವಾಯಿತು. ಅಂತರ್ಜಾಲ ಗೂಗಲ್ ಮೀಟ್ ಮುಖೇನ ನಡೆದ ಈ ಕಾರ್ಯಕ್ರಮದ ಸಾರಥ್ಯ ವಹಿಸಿದ್ದ ಶ್ರೀ.ಕೆ.ಎನ್.ಮಹಾಬಲ ಅವರು ಸಾಹಿತ್ಯ ದಾಸೋಹದ ಅಧ್ಯಕ್ಷರಾದ ಶ್ರೀ. ಜಿ.ಎನ್. ನರಸಿಂಹಮೂರ್ತಿ ಅವರನ್ನು ಅಭಿನಂದಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೊದಲಿಗೆ ಶ್ರೀ ವಿಠ್ಠಲ್ ಇಜೇರಿ ಅವರು ಅಧ್ಯಕ್ಷರಾದ ಶ್ರೀ.ಜಿ.ಎನ್.ಎನ್. ಅವರೊಡನೆಯ ತಮ್ಮ ದೀರ್ಘಕಾಲದ ಸಾಹಿತ್ಯಕ ಒಡನಾಟವನ್ನು ನೆನೆದು, ಅವರ ಸರಳ ವ್ಯಕ್ತಿತ್ವ ಹಾಗೂ ಮಿತಭಾಷಿ ಸ್ವಭಾವವನ್ನು ಸಭೆಯ ಎಲ್ಲರಿಗೂ ಅರುಹಿ, ಮೆಚ್ಚಿ, ಸ್ವಾಗತ ನೆರವೇರಿಸಿದರು. ಅಲ್ಲದೆ, ಅಧ್ಯಕ್ಷರ ಕಾರ್ಯಬಾಹುಳ್ಯದ ಹಾಗೂ ಕನ್ನಡಮ್ಮನ ಸೇವಾ ಪಥದಲ್ಲಿಯ ಸಾಧನೆಗಳ ಕಿರು ಪರಿಚಯ ಸಹಾ ನೀಡಿದರು.



ನಂತರ ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಗುರುಗಳಾದ ಮಾನ್ಯ ಎಚ್ಚೆಸ್ಕೆ ಅವರ ಪ್ರಬಂಧಗಳನ್ನು ಧ್ವನಿಮುದ್ರಿಸಿ ವೇದಿಕೆಯ ಯುಟ್ಯೂಬ್‌ನಲ್ಲಿ ಹಂಚಿಕೊಳ್ಳುವ ಬಗ್ಗೆ ಎಚ್ಚೆಸ್ಕೆ ಅವರ ಮಗ ಶ್ರೀ _____ ಅವರು ತುಂಬು ಹೃದಯದಿಂದ ಒಪ್ಪಿಗೆ ನೀಡಿರುವುದರ ಬಗ್ಗೆ ತಮ್ಮ ಸಂತಸವನ್ನು ವ್ಯಕ್ತಪಡಿಸಿದರಲ್ಲದೆ, ಈ ನಿಟ್ಟಿನಲ್ಲಿ ಶ್ರೀ. ಪ್ರಧಾನ ಗುರುದತ್ತರ ಸಲಹೆ ಮತ್ತು ಪ್ರೋತ್ಸಾಹವನ್ನು ಸ್ಮರಿಸಿದರು. ಈ ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಶ್ರೀ. ಗುರುಪ್ರಸಾದ ಹಾಲ್ಕುರಿಕೆ ಅವರಿಗೆ ಹಾಗೂ ಧ್ವನಿಮುದ್ರಣ ಕಾರ್ಯದಲ್ಲಿ ಎಚ್ಚೆಸ್ಕೆಯವರ ಪ್ರಬಂಧಗಳನ್ನು ಓದುವುದರ ಮೂಲಕ ಸಹಕರಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ, ವೇದಿಕೆಯ ಬೃಹತ್ ಕನಸೊಂದನ್ನು ನನಸಾಗಿಸಿದ್ದಕ್ಕಾಗಿ ಅಭಿನಂದಿಸಿದರು.

30.03.2024ರಂದು ನೆರವೇರಲಿರುವ ತಿಂಗಳ ಬೆಳಕು ಕಾರ್ಯಕ್ರಮದಲ್ಲಿ ಶ್ರೀ ಬಿ.ಆರ್. ರವೀಂದ್ರನಾಥ್ ಅವರು 'ಪ್ಯಾನ್ ಇಂಡಿಯಾ ಸಿನಿಮಾ – ಒಂದು ಅವಲೋಕನ' ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ. ಇದು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲ ಮುಖೇನ

ನಡೆಯಲಿರುವ 100ನೆಯ ಕಾರ್ಯಕ್ರಮ ಎಂಬುದು ಸಂತೋಷದ ಸಂಗತಿ, ಈ ಕಾರ್ಯಕ್ರಮದಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀ ರವೀಂದ್ರ ಅವರು ಕರೆ ನೀಡಿದರು. ಇದಲ್ಲದೆ, ಸಣ್ಣ ಕಥಾ ಶ್ರಾವಣ ಅಭಿಯಾನದಲ್ಲಿ ರಚಿತವಾದ ಕಥೆಗಳನ್ನೊಳಗೊಂಡ ಕಥಾ ಗುಚ್ಛವನ್ನು ಹೊರತರುವ ಕೆಲಸದಲ್ಲಿ ನಡೆದಿರುವ ಬೆಳವಣಿಗೆಗಳ ರೂಪುರೇಷೆಗಳನ್ನು ನೀಡಿದರು. ವೇದಿಕೆಯು ತನ್ನದೇ ಆದ ಯುಟ್ಯೂಬ್ ಚಾನೆಲ್ ಹೊಂದಿದ್ದು, ಇದಕ್ಕೆ ವೇದಿಕೆಯ ಎಲ್ಲ ಸದಸ್ಯರೂ ಚಂದಾದಾರರಾಗಬೇಕೆಂದೂ (ಸಬ್‌ಸ್ಕ್ರೈಬರ್) ಕೋರಿದರು.

ನಂತರ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರು ಫೆಬ್ರುವರಿ 2024ರ ಸಾಹಿತ್ಯ ದಾಸೋಹ-222 ಇ-ಸಂಚಿಕೆ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಪತ್ರಿಕೆಯು ಶೃಂಗೇರಿಯ ಐತಿಹಾಸಿಕ ಶ್ರೀವಿದ್ಯಾಶಂಕರ ದೇವಸ್ಥಾನದ ಮುಖಪುಟ ಹೊಂದಿದ್ದು, ಸಂಚಿಕೆಯಲ್ಲಿ ವೇದಿಕೆಯ ಇನ್ನೊಂದು ನಿಯಮಿತ ಕಾರ್ಯಕ್ರಮವಾದ 'ತಿಂಗಳ ಬೆಳಕು' ಕಾರ್ಯಕ್ರಮದ ವರದಿ ಹಾಗೂ ಪ್ರತಿ ವಾರದ 'ಕವಿಮನ' ಅಂಕಣದ ಕವನಗಳು ಸೇರ್ಪಡೆಯಾಗಿವೆ ಎಂಬ ಮಾಹಿತಿ ನೀಡಿದರು.

ತದನಂತರ ಈ ಬಾರಿಯ ಸಾಹಿತ್ಯ ದಾಸೋಹಕ್ಕಾಗಿ ಹೆಸರು ನೋಂದಾಯಿಸಿದ 23 ಲೇಖಕರ ಪೈಕಿ 18 ಜನ ತಮ್ಮ ಬರಹಗಳನ್ನು ಪ್ರಸ್ತುತಪಡಿಸಿದರು. ಕೊನೆಯಲ್ಲಿ, ಈ ಎಲ್ಲಾ 18 ಪ್ರಸ್ತುತಿಗಳ ಬಗ್ಗೆ ಸಭೆಯ ಅಧ್ಯಕ್ಷರಾದ ಶ್ರೀ. ಜಿ.ಎನ್. ನರಸಿಂಹಮೂರ್ತಿ ಅವರು ತಮ್ಮ ವಿದ್ವತ್ಪೂರ್ಣ ಮೌಲಿಕ ಸ್ಪಂದನೆ ನೀಡಿದರು.

ಶ್ರೀ.ಕೆ.ಎನ್.ಮಹಾಬಲ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ 3 ಗಂಟೆಗಳ ಕಾಲ ನಡೆದ ಸಾಹಿತ್ಯ ದಾಸೋಹಕ್ಕೆ ಶುಭಂ ನುಡಿದರು.

ಸಾಹಿತ್ಯ ದಾಸೋಹ 222 – ಇತರ ಸಂಘಟಕರು :

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್.ಮಹಾಬಲ
ಸಾಹಿತ್ಯ ದಾಸೋಹದ ಈ-ಸಂಚಿಕೆ ಪಿಡಿಎಫ್ : ಶ್ರೀ ಎಸ್. ಶೃಂಗೇಶ್ವರ ಶರ್ಮ
ಗೂಗಲ್ ಮೀಟ್ ಆತಿಥ್ಯ: ಶ್ರೀಮತಿ ರಾಧಿಕಾ ವಿ. ಗುಜ್ಜರ್
ವಿಡಿಯೋ ರೆಕಾರ್ಡಿಂಗ್ : ಶ್ರೀಮತಿ ರೇಣುಕಾ ದೇಸಾಯಿ

ಇಡೀ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***

ತಿಂಗಳ ಬೆಳಕು - 3

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

'ಪ್ಯಾನ್ ಇಂಡಿಯಾ ಸಿನಿಮಾ – ಒಂದು ಅವಲೋಕನ'

ಉಪನ್ಯಾಸ : ಶ್ರೀ ಬಿ.ಆರ್. ರವೀಂದ್ರನಾಥ್

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್



ದಿನಾಂಕ 30.04.2024ರಂದು ಶನಿವಾರ ಸಂಜೆ 4.45ಕ್ಕೆ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲ ಮುಖೇನ ನಡೆದ ಮೂರನೇ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಶ್ರೀ ಬಿ.ಆರ್. ರವೀಂದ್ರನಾಥ್ ಅವರು 'ಪ್ಯಾನ್ ಇಂಡಿಯಾ ಸಿನಿಮಾ – ಒಂದು ಅವಲೋಕನ' ಕುರಿತು ಮಾತನಾಡಿದರು. ಆರಂಭದಲ್ಲಿ ತಿಂಗಳ ಬೆಳಕು ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಹಿಂದೆ ಸಿನಿಮಾ ನೋಡಿ ಬಂದರೆ ಮೂರು ನಾಲ್ಕು ದಿನ ತಲೆಯಲ್ಲಿ ಆ ಚಿತ್ರವೇ ಇರುತ್ತಿತ್ತು ಅದು ಕೇವಲ ಮನರಂಜನೆಯ ಸಾಧನವಷ್ಟೇ ಆಗಿರಲಿಲ್ಲ, ಬದುಕು ಬದಲಿಸುತ್ತಿತ್ತು. 1973ರಲ್ಲಿ ಬಿಡುಗಡೆಯಾದ 'ಬಂಗಾರದ ಮನುಷ್ಯ' ನೋಡಿ ಪ್ರಭಾವಿತರಾದ ಅನೇಕರು ನಗರವನ್ನು ಬಿಟ್ಟು ವ್ಯವಸಾಯಕ್ಕೆ ಮರಳಿದರು ಎಂಬುದನ್ನು ಕೇಳಿದ್ದೇನೆ ಹೀಗೆ ಸಿನಿಮಾ ಒಂದು ಪ್ರಭಾವಿ ಮಾದ್ಯಮವಾಗಿದೆ ಎಂದ ಅವರು, ಅತಿಥಿಗಳಾದ ಶ್ರೀ ಬಿ.ಆರ್. ರವೀಂದ್ರನಾಥ್ ಅವರನ್ನು ಪರಿಚಯಿಸಿದರು.

ನೋಡಿಯೋದ 100ನೆಯ ಕಾರ್ಯಕ್ರಮ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬಿ ಎಸ್ ರವೀಂದ್ರ ಮಾತನಾಡಿ, ಕೊರೋನಾ ಕಾಲಘಟ್ಟದಲ್ಲಿ ಅಂತರ್ಜಾಲ ಮುಖೇನ ಕಾರ್ಯಕ್ರಮಗಳನ್ನು ನಡೆಸಲು ಸ್ಥಾಪಿಸಿದ 'ನೋಡಿಯೋ ಸಾಹಿತ್ಯ ದಾಸೋಹ' ವೇದಿಕೆಯಲ್ಲಿ ಇದು 100ನೆಯ ಕಾರ್ಯಕ್ರಮ ಎಂಬುದು ಸಂತಸದ ಸಂಗತಿ. ಈ ವೇದಿಕೆಯ ಮೂಲಕ ಕೇವಲ ಸಾಹಿತ್ಯ ದಾಸೋಹ ಮಾತ್ರವಲ್ಲದೆ ಇತರ ವೈವಿಧ್ಯಮಯ ಕಾರ್ಯಕ್ರಮಗಳನ್ನೂ ನಡೆಸಲು ಅವಕಾಶ ದೊರೆಯಿತು. 100ರ ಸಾಧನೆ ಒಂದು ಮೈಲಿಗಲ್ಲು ಎಂದು ಹೇಳಿದರು

ನಂತರ ತಮ್ಮ ಉಪನ್ಯಾಸವನ್ನು ಆರಂಭಿಸಿದ ಶ್ರೀ ಬಿ.ಆರ್. ರವೀಂದ್ರನಾಥ್ ಅವರು, ಭಾರತೀಯ ಚಲನಚಿತ್ರೋದ್ಯಮ, ಆಧುನಿಕ ತಂತ್ರಜ್ಞಾನ, ಬದಲಾದ ನೋಡುಗರ ಅಭಿರುಚಿ, ಹಣಗಳಿಕೆ ಮುಂತಾದುವುಗಳ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದರು. ಅವರ ಉಪನ್ಯಾಸದ ಕೆಲವು ಮುಖ್ಯ ಅಂಶಗಳು ಹೀಗಿವೆ:

ಶ್ರೀ ಬಿ.ಆರ್. ರವೀಂದ್ರನಾಥ್

ಪ್ರಸಿದ್ಧ ಲೇಖಕಿ ಡಾ. ನಿರುಪಮಾ ಅವರ ಪುತ್ರ. ವಿದ್ಯಾರ್ಹತೆ- ಬಿ.ಎಸ್ಸಿ, ಎಲ್‌ಎಲ್‌ಬಿ. ಯುಕೊ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕುಗಳಲ್ಲಿ ಸೇವೆ. ಇಪ್ಪತ್ತು ವರ್ಷಗಳ ಕಾಲ ಹಲವಾರು ಸಹಕಾರ ಸಂಘಗಳು, ಸಹಕಾರಿ ಬ್ಯಾಂಕುಗಳು ಮತ್ತು ಸಾಫ್ಟ್‌ವೇರ್ ಕಂಪನಿಗಳ ಜೊತೆ ಒಡನಾಟ, ಆಡಳಿತ ನಿರ್ವಹಣೆಯಲ್ಲಿ ಯಶಸ್ವಿ. ತುರ್ತು ಪರಿಸ್ಥಿತಿಯಲ್ಲಿ ಸೆರೆಮನೆ ವಾಸದ ಅನುಭವ.

ಹಣಕಾಸು ಹೂಡಿಕೆ ಮತ್ತು ವೃದ್ಧಿ ಹೇಗೆ, ಹಣಕಾಸು ನಿರ್ವಹಣೆ ಹೇಗೆ, ಗೃಹಸಾಲ ಮಾಹಿತಿ ಕೈಪಿಡಿ, ಪುರಾಣಗಳಲ್ಲಿ ಮ್ಯಾನೇಜ್ಮೆಂಟ್ (ಅನುವಾದ) ಮೆಮೊರೀಸ್ ಆಫ್ ಟೈಗರ್-ಹಂಟಿಂಗ್ ವೀರಪ್ಪನ್ (ಅನುವಾದ) ಆಸ್ತಿ ಇದ್ದರೂ ನಾಸ್ತಿ (ಎರಡು ನಾಟಕಗಳು), ಸಹದೇವನ ಹತಾಶೆ (ಕಥಾ ಸಂಕಲನ) ಎಂಬ ಪುಸ್ತಕಗಳ ಪ್ರಕಟಣೆ.

ಆರು ವರ್ಷಗಳ ಕಾಲ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ. 80ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಿದ ಅನುಭವ; ಸ್ಥಾಪಕ ನಿರ್ದೇಶಕ-ಭಾಷಾಂತರ ಅಧ್ಯಯನ ಸಂಸ್ಥೆ, ಬೆಂಗಳೂರು; ಉಪಾಧ್ಯಕ್ಷ-ಅಖಿಲ ಭಾರತ ಅನುವಾದಕರ ಸಂಘ; ಪ್ರಾಯೋಜಿತ ಕಾರ್ಯಕ್ರಮಗಳ ಪರಿಶೀಲನಾ ಸಮಿತಿ ಸದಸ್ಯ-ಬೆಂಗಳೂರು ದೂರದರ್ಶನ ಕೇಂದ್ರ; ಸಂಪಾದಕ-ಹೊಂಗನಸು ಮಾಸಿಕ ವಾರ್ತಾಪತ್ರ; ಸಂಪಾದಕ-ಇಂಡಿಯನ್ ಟ್ರಾನ್ಸ್‌ಲೇಟರ್. ಅಲ್ಲದೆ, ಟೈಮ್ಸ್ ಆಫ್ ಇಂಡಿಯಾ, ದಿ ಎಕನಾಮಿಕ್ ಟೈಮ್ಸ್, ಹೊಸ ದಿಗಂತ, ವಿಜಯ ಕರ್ನಾಟಕ ಮುಂತಾದ ಪತ್ರಿಕೆಗಳ ಅಂಕಣಕಾರ. ಭಾಷಾಂತರ ತರಗತಿಗಳಲ್ಲಿ ತರಬೇತಿ ನೀಡಿಕೆ ಮತ್ತು ಹಣಕಾಸು ವಿಷಯಗಳ ಬಗ್ಗೆ ಉಪನ್ಯಾಸ ನೀಡಿಕೆ. ಬೆಂಗಳೂರು ನಾರ್ತ್ ಜೇಸೀಸ್ ಪದಾಧಿಕಾರಿಯಾಗಿ ಹಲವಾರು ರಕ್ತದಾನ ಶಿಬಿರಗಳನ್ನು ಸಂಘಟಿಸಿದ ಹೆಗ್ಗಳಿಕೆ.

ಸಮನ್ವಯ ಸಮಿತಿಯ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸದಾ ಭಾಗಿ.

ಪ್ಯಾನ್ ಇಂಡಿಯಾ ಸಿನಿಮಾ ಎಂಬುದು ಇತ್ತೀಚೆಗೆ ಭಾರತೀಯ ಚಿತ್ರರಂಗದಲ್ಲಿ ಕೇಳಬರುತ್ತಿರುವ ಸಾಮಾನ್ಯ ಪದವಾಗಿದೆ. ಪ್ಯಾನ್ ಇಂಡಿಯಾ ಎಂದರೆ ಅಖಿಲ ಭಾರತ ಮಟ್ಟ ಎನ್ನಬಹುದು. ಬಾಹುಬಲಿ, ಕೆಜಿಎಫ್, ಅನಿಮಲ್ ಇತ್ಯಾದಿ ಸಿನಿಮಾಗಳು ಬಿಡುಗಡೆ ಯಾದ ಕೆಲವೇ ದಿನಗಳಲ್ಲಿ ನೂರಾರು ಕೋಟಿ ಗಳಿಸಿ ಸುದ್ದಿ ಮಾಡಿವೆ. ಈ ಸಿನಿಮಾಗಳು ಯಾವುದೇ ಭಾಷೆಗೆ ಸೀಮಿತವಾಗಿರದೆ ಕ್ರೌರ್ಯ, ಅತಿ ಭಾವುಕತೆ ಮತ್ತು ಅತಿರಂಜಿತ ವಾಗಿರುವುದಲ್ಲದೆ ಭಾರತದ ಯಾವುದೇ ಪ್ರಮುಖ ಭಾಷೆಯಲ್ಲಿಯೂ ನೋಡಿ, ಕೇಳಬಹುದಾದ ಚಿತ್ರಗಳಾಗಿವೆ.

ಸಿನಿಮಾ ಅಂದರೆ ಚಲಿಸುವ ಚಿತ್ರಗಳ ಮೂಲಕ ಸೃಷ್ಟಿಸುವ ಕತೆ. ಒಂದು ಅತ್ಯಂತ ಪರಿಣಾಮಕಾರಿ ಕಲಾ ಪ್ರದರ್ಶನ. ವಿಶ್ವಾದ್ಯಂತ ಸಿನಿಮಾ ಒಂದು ಬೃಹತ್ ಉದ್ಯಮ. ಜಾಗತಿಕವಾಗಿ ಸಿನಿಮಾ ಉದ್ಯಮದ ಗಾತ್ರ ಸುಮಾರು 100 ಬಿಲಿಯನ್ ಡಾಲರ್ ಆಗಿದ್ದರೆ, ಭಾರತದ ಸಿನೆಮಾ ಗಾತ್ರ ಸುಮಾರು ಮೂರು ಬಿಲಿಯನ್ ಡಾಲರ್, ಅಂದರೆ ಸುಮಾರು 250 ಮಿಲಿಯ ರೂಪಾಯಿಗಳು ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ ಸುಮಾರು 9,000 ಚಿತ್ರಮಂದಿರಗಳಿದ್ದು ಪ್ರತಿವರ್ಷ ಅಂದಾಜು 350 ಕೋಟಿ ಟಿಕೆಟ್‌ಗಳು ಮಾರಾಟವಾಗುತ್ತವೆ. ಇಡೀ ವಿಶ್ವದಲ್ಲಿ ಭಾರತವು ಟಿಕೆಟ್ ಮಾರಾಟದಲ್ಲಿ ಮೊದಲ ಸ್ಥಾನ ಹೊಂದಿದ್ದು, ಭಾರತದಲ್ಲಿ ಪ್ರತಿದಿನ ಸುಮಾರು ಒಂದು ಕೋಟಿ ಜನ ಚಲನಚಿತ್ರ ವೀಕ್ಷಿಸುತ್ತಾರೆ.

ವಿಶ್ವದ ಮೊಟ್ಟಮೊದಲ ಸಿನಿಮಾ ಎಂದರೆ ಲುಮಿನಾರ್ ಸಹೋದರರು ನಿರ್ಮಿಸಿದ 20 ನಿಮಿಷ ಅವಧಿಯ ಹತ್ತು ಕಿರು ಚಿತ್ರಗಳು. ಇದನ್ನು 1895ರಲ್ಲಿ ಪ್ಯಾರಿಸ್‌ನಲ್ಲಿ

ಪ್ರದರ್ಶಿಸಲಾಯಿತು. 1913ರಲ್ಲಿ ದಾದಾ ಸಾಹೇಬ್ ಫಾಲ್ಕೆ ಅವರ ಮರಾಠಿ ಸಿನಿಮಾ 'ಹರಿಶ್ಚಂದ್ರ' ಭಾರತದ ಮೊದಲ ವಾಣಿಜ್ಯ ಸಿನಿಮಾ ಎಂದು ದಾಖಲಾಗಿದೆ. 1913ರಿಂದ 1931ರವರೆಗೆ ಬಂದ ಎಲ್ಲ ಸಿನಿಮಾಗಳು ಮೂಕಿ ಚಿತ್ರಗಳಾಗಿದ್ದವು. ಇವುಗಳಲ್ಲಿ ದೃಶ್ಯಗಳ ನಡುವೆ ಕಥೆಯನ್ನು ಪಟಗಳ ಮೂಲಕ ಪ್ರದರ್ಶಿಸಲಾಗುತ್ತಿತ್ತು. 1931ರಲ್ಲಿ ಬಿಡುಗಡೆಯಾದ 'ಅಲಂ ಅರಾ' ಎಂಬ ಚಿತ್ರ ಸಂಭಾಷಣೆಯನ್ನು ಹೊಂದಿದ್ದ ಮೊದಲ ಟಾಕೀ ಸಿನಿಮಾ. ನಂತರ ನಿರಂತರವಾಗಿ ಸಿನಿಮಾ ತಂತ್ರಜ್ಞಾನದಲ್ಲಿ ಪ್ರಗತಿ ಮತ್ತು ಹೊಸ ಅವಿಷ್ಕಾರಗಳು ಹೆಚ್ಚುತ್ತ ಬಂದವು.

1959ರಲ್ಲಿ ಕನ್ನಡ ಚಲನಚಿತ್ರ ನಿರ್ಮಾಪಕ ಟಿ.ಎಸ್.ರಂಗಾ ಅವರು ನಿರ್ಮಿಸಿ ನಿರ್ದೇಶಿಸಿದ 'ಮಹಿಷಾಸುರ ಮರ್ದಿನಿ' ಚಿತ್ರವನ್ನು ಮೊದಲ ಪ್ಯಾನ್ ಇಂಡಿಯಾ ಚಲನಚಿತ್ರ ಎಂದು ಹೇಳಬಹುದು. ಈ ಚಿತ್ರ ಏಳು ಭಾಷೆಗಳಲ್ಲಿ ಡಬ್ ಆಗಿ, ಹಿಂದಿಯಲ್ಲಿ 'ದುರ್ಗಾ ಮಾತಾ' ಎಂಬ ಪ್ರತ್ಯೇಕ ಶೀರ್ಷಿಕೆಯಿಂದ ತೆರೆ ಕಂಡಿರುತ್ತದೆ. ಆಗಿನ ಕಾಲದಲ್ಲಿ ಸಿನಿಮಾ ಪ್ರಿಂಟ್‌ಗಳ ಸೀಮಿತತೆಯಿಂದಾಗಿ ಈಗಿನಷ್ಟು ಯಶಸ್ಸು ಗಳಿಸಲು ಸಾಧ್ಯವಿರಲಿಲ್ಲ. ಆನಂತರ ಇತ್ತೀಚಿನವರೆಗೂ ಯಾವುದೇ ಚಿತ್ರ ನಾಲ್ಕು ಭಾಷೆಗಳಿಗಿಂತ ಹೆಚ್ಚು ಭಾಷೆಗಳಲ್ಲಿ ಬಂದಿಲ್ಲ.

ಪ್ರಸ್ತುತ ಸಿನಿಮಾ ಪ್ರದರ್ಶನದ ತಂತ್ರಜ್ಞಾನವು ಬಹಳ ವೇಗವಾಗಿ ಬೆಳೆಯುತ್ತಿದೆ. ತಂತ್ರಜ್ಞಾನ ಹಾಗೂ ಚಿತ್ರೋದ್ಯಮ ಒಂದಕ್ಕೊಂದು ಪೂರಕವಾಗಿ ನಿರಂತರವಾಗಿ ಪ್ರಗತಿಹೊಂದುತ್ತಿದೆ. ಚಿತ್ರೋದ್ಯಮದ ಮೂಲ ಆದಾಯ ಟಿಕೆಟ್ ಶುಲ್ಕ. ಆದ್ದರಿಂದ ಹೆಚ್ಚು ಹೆಚ್ಚು ಜನ ತಮ್ಮ ಅಮೂಲ್ಯ ಸಮಯ ಮತ್ತು ಹಣವನ್ನು ಮೀಸಲಿರಿಸಿ ಸಿನಿಮಾ ವೀಕ್ಷಿಸುವಂತೆ ಮಾಡುವುದೇ ಈ ಉದ್ಯಮದ ಗುರಿ. ಈ ಗುರಿಯನ್ನು ಸಾಧಿಸಲು ಪ್ರಪಂಚದಾದ್ಯಂತ ಚಿತ್ರೋದ್ಯಮ ನಿರಂತರ ಹೊಸ ಪ್ರಯತ್ನ, ಪ್ರಯೋಗಗಳನ್ನು ನಡೆಸಿಕೊಂಡು ಬರುತ್ತಿದೆ

ಸಿನಿಮಾ ಉದ್ಯಮದ ಉಗಮದಿಂದ 21ನೇ ಶತಮಾನದವರೆಗೂ ಸಿನಿಮಾ ಪ್ರಿಂಟ್‌ಗಳನ್ನು ಕಾಪಿಡಬೇಕಾದ ಅಗತ್ಯವಿತ್ತು. ಸಿನಿಮಾ ಪ್ರಿಂಟ್ ತಯಾರಿಸಲು ಬಹಳಷ್ಟು ವೆಚ್ಚವಾಗುತ್ತಿದ್ದ ಕಾರಣ ನಿರ್ಮಾಪಕರು ಸಿನಿಮಾ ಪ್ರಿಂಟ್ ಗಳನ್ನು ಮಿತವಾಗಿ ಬಳಸುತ್ತಿದ್ದರು. ಆಯಾ ಸಿನಿಮಾಗೆ ಇದ್ದ ಮಾರುಕಟ್ಟೆ ಆಧಾರಿಸಿ ಪ್ರಿಂಟ್‌ಗಳ ಸಂಖ್ಯೆ ನಿಗದಿ ಪಡಿಸಲಾಗುತ್ತಿತ್ತು. 70ರ ದಶಕದಲ್ಲಿ ಅತ್ಯಂತ ದೀರ್ಘಕಾಲ ಪ್ರದರ್ಶನಗೊಂಡ 'ಬಂಗಾರದ ಮನುಷ್ಯ' ಕನ್ನಡ ಚಿತ್ರದ ಪ್ರಿಂಟ್‌ಗಳ ಸಂಖ್ಯೆ ಕೇವಲ 22 ಮಾತ್ರ. ಸಿನಿಮಾ ಪ್ರಿಂಟ್‌ಗಳ ಅಲಭ್ಯತೆಯಿಂದ ಏಕಕಾಲದಲ್ಲಿ ಸಿನಿಮಾ ನೋಡುವವರ ಸಂಖ್ಯೆಯನ್ನು ಸೀಮಿತಗೊಳಿಸುವುದು ಅನಿವಾರ್ಯವಾಗಿತ್ತು. ಹೀಗಾಗಿ ಹೆಚ್ಚಿನ ಆದಾಯ ಗಳಿಸ ಬೇಕಿದ್ದರೆ ಸಿನಿಮಾಗಳು ಹೆಚ್ಚು ಕಾಲ ಪ್ರದರ್ಶಿತವಾಗಬೇಕಿತ್ತು. ಹಲವು ತೊಡಕುಗಳಿಂದಾಗಿ ಯಾವುದೇ ಸಿನಿಮಾವನ್ನು ಅಲ್ಪಾವಧಿಯಲ್ಲಿ ಅತಿ ಹೆಚ್ಚು ನೋಡುಗರಿಗೆ ತೋರಿಸುವುದೂ ಕಷ್ಟವಾಗಿತ್ತು

ಡಿಜಿಟಲ್ ಕ್ರಾಂತಿಯಿಂದ ಸಿನಿಮಾ ಉದ್ಯಮಕ್ಕೆ ಅಪಾರ ಲಾಭವಾಗಿದೆ. ಏಕ ಕಾಲದಲ್ಲಿ ಮಿತಿ ಇಲ್ಲದಷ್ಟು ಸ್ಥಳಗಳಲ್ಲಿ ಮಿತಿ ಇಲ್ಲದಷ್ಟು ನೋಡುಗರಿಗೆ ಚಿತ್ರವನ್ನು ತೋರಿಸಬಹುದಾಗಿದೆ ಈ ಕಾರಣದಿಂದಲೇ 'ಬಾಹುಬಲಿ' ಸಿನಿಮಾವನ್ನು ವಿಶ್ವಾದ್ಯಂತ ಏಕಕಾಲದಲ್ಲಿ ವೀಕ್ಷಿಸಲು ಸಾಧ್ಯವಾಯಿತು. ಡಿಜಿಟಲ್ ಕ್ರಾಂತಿಯಿಂದ ವೀಕ್ಷಕರಿಗೂ ಅನುಕೂಲ ವಾಗಿದ್ದು, ಸಿನಿಮಾವನ್ನು ನೋಡಲು ಈಗ ಚಿತ್ರಮಂದಿರಕ್ಕೇ ಹೋಗಬೇಕಾಗಿಲ್ಲ. ಓ ಟಿ ಟಿ ತಂತ್ರಜ್ಞಾನದಿಂದ ಮನೆಯಲ್ಲಿಯೇ ಕುಳಿತು ಯಾವುದೇ ಸಿನಿಮಾವನ್ನು ಇಂಟರ್‌ನೆಟ್ ಮೂಲಕ ನೋಡಬಹುದು. ಅಪಾರ ಹಣ ಖರ್ಚು ಮಾಡಿ ತೆಗೆದ ಅದ್ದೂರಿ ಚಿತ್ರಗಳನ್ನು ಐನಾಕ್ಸ್, ಪಿವಿಆರ್ ಮುಂತಾದ ಚಿತ್ರಮಂದಿರಗಳಲ್ಲಿ ನೋಡುವವರಿಗೆ ವಿಶೇಷ ಅನುಭವ ದಕ್ಕುತ್ತಿದೆ.

ಭಾರತೀಯರು ವಿಶ್ವದ ನಾನಾ ಭಾಗಗಳಿಗೆ ವಲಸೆ ಹೋಗುತ್ತಿದ್ದು, ಆಯಾ ದೇಶಗಳಲ್ಲಿ ಭಾರತೀಯ ಸಿನಿಮಾಗಳಿಗೆ ಬೇಡಿಕೆ ಉಂಟಾಗುತ್ತಿರುವುದು ಸಂತೋಷದ ವಿಚಾರ. ಚಿತ್ರೋದ್ಯಮದ ಶೇಕಡ 12ರಷ್ಟು ಆದಾಯ ಅನಿವಾಸಿ ಭಾರತೀಯರಿಂದ ಬರುತ್ತಿದೆ.

ಭಾರತದಲ್ಲಿ ಸುಮಾರು 15 ಪ್ರಾದೇಶಿಕ ಚಲನಚಿತ್ರ ಉದ್ಯಮಗಳಿಗವೆ. ಈ ಪೈಕಿ ಹಿಂದಿ, ತಮಿಳು, ತೆಲುಗು, ಮಲಯಾಳಂ, ಕನ್ನಡ ಹಾಗೂ ಬಂಗಾಳಿ ಚಿತ್ರೋದ್ಯಮಿಗಳು ಪ್ರಮುಖವಾಗಿವೆ. ಇಂದು ಒಂದು ಭಾಷೆಯಲ್ಲಿ ಯಶಸ್ವಿಯಾದ ಚಿತ್ರವನ್ನು ಇನ್ನೊಂದು ಭಾಷೆಯಲ್ಲಿ ಪುನರ್ ನಿರ್ಮಾಣ ಮಾಡುವುದು, ಯಥಾವತ್ತಾಗಿ ಡಬ್ ಮಾಡುವುದು, ಸಬ್‌ಟೈಟಲ್‌ಗಳನ್ನು ಅಳವಡಿಸುವುದು ಮುಂತಾದ ತಾಂತ್ರಿಕ ಸೌಲಭ್ಯಗಳನ್ನು ಬಳಸಿ ಆ ಚಿತ್ರವನ್ನು ಎಲ್ಲ ಭಾಷಿಕರಿಗೂ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಕನ್ನಡ, ಮಲಯಾಳಂ, ಬಂಗಾಳಿಯ ಪ್ರಯೋಗಾತ್ಮಕ ಚಿತ್ರಗಳನ್ನು ಭಾರತೀಯ ಹಾಗೂ ಕೆಲವು ವಿದೇಶಿ ಭಾಷೆಗಳಲ್ಲಿ ಸಬ್‌ಟೈಟಲ್‌ನೊಂದಿಗೆ ಪ್ರದರ್ಶಿಸಲಾಯಿತು ಈ ಪ್ರಯತ್ನಗಳೇ ಪ್ಯಾನ್ ಇಂಡಿಯಾ ಸಿನಿಮಾದ ಆರಂಭದ ಹೆಜ್ಜೆಗಳು.

ಕೆಲವು ಚಿತ್ರಗಳು ಮೂಲ ಭಾಷೆಯಲ್ಲಿ ಯಶಸ್ವಿಗೊಂಡ ನಂತರ ಹಿಂದಿ ಭಾಷೆಯಲ್ಲಿ ನಿರ್ಮಾಣಗೊಂಡವು. ಕಮಲ ಹಾಸನ್, ರಜನಿಕಾಂತ್, ಕೆ.ಬಾಲಚಂದರ್ ಮುಂತಾದವರ ಚಿತ್ರಗಳು ದೇಶಾದ್ಯಂತ ಪ್ರದರ್ಶನಗೊಂಡಿವೆ. ಹಿಂದಿ ಭಾಷೆಯಿಂದ ದಕ್ಷಿಣ ಭಾರತದ ಭಾಷೆಗಳಿಗೆ ಡಬ್ ಆದ ಚಿತ್ರಗಳು ಅಷ್ಟು ಯಶಸ್ವಿಯಾಗಿರುವುದಿಲ್ಲ ಇದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು.

ಭಾರತೀಯ ಸಿನಿಮಾಗಳಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ ಚಿತ್ರದ ಭಾವಪೂರ್ಣ ಕಥೆ ಮತ್ತು ಅದಕ್ಕೆ ಹೊಂದುವ ಸಂಗೀತ ಮತ್ತು ನೃತ್ಯ ಸಂಯೋಜನೆ. ಯಾವುದೇ ವಿಷಯವನ್ನೂ ಕಥೆಯಾಗಿ ಹೆಣೆದು ಮೆಲೋಡ್ರಾಮಾ ಅಳವಡಿಸಿ ನೋಡುಗರನ್ನು ಸೆಳೆಯಲಾಗುತ್ತದೆ. ಇದು ನಮ್ಮ ದೇಶದ ಎಲ್ಲ ಭಾಷಿಕರನ್ನು ತಲುಪುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಾಲಿವುಡ್ ಸಿನಿಮಾಗಳಲ್ಲಿ ಇವುಗಳ ಅನುಕರಣೆ ಮಾಡಲಾಗಿಲ್ಲ

ಭಾರತೀಯ ಚತ್ರೋದ್ಯಮದಲ್ಲಿ ಹಿಂದಿ ಸಿನಿಮಾ ಯಾವಾಗಲೂ ಮುಂಚೂಣಿಯಲ್ಲಿದೆ. ಹಿಂದಿ ಚಿತ್ರೋದ್ಯಮ ಬಹಳ ಎತ್ತರಕ್ಕೆ ಬೆಳೆಯಲು ಹಲವಾರು ಅಂಶಗಳು ಪೂರಕವಾಗಿವೆ. ಆದರೆ ಇತ್ತೀಚೆಗೆ ಸಿನಿಮಾ ಮಾರುಕಟ್ಟೆಯಲ್ಲಿ ಹೊಸ ಬೆಳವಣಿಗೆಗಳ ಕಾರಣದಿಂದ ಹಿಂದಿ ಚಿತ್ರೋದ್ಯಮದ ಪ್ರಭಾವ ಕಡಿಮೆಯಾಗುತ್ತಿದೆ. ಹಾಲಿವುಡ್ ಸಿನಿಮಾಗಳನ್ನು ಅನುಕರಿಸಿ ನಿರ್ಮಾಣಗೊಂಡ ಬಹಳಷ್ಟು ಹಿಂದಿ ಚಿತ್ರಗಳು ಜನಪ್ರಿಯಗೊಳ್ಳುತ್ತಿದ್ದವು. ಈಗ ಡಿಜಿಟಲ್ ಕ್ರಾಂತಿಯ ಫಲವಾಗಿ ಹಾಲಿವುಡ್ ಸಿನಿಮಾಗಳನ್ನು ನೇರವಾಗಿ ನೋಡುವ ಅವಕಾಶಗಳು ಎಲ್ಲರಿಗೂ ದೊರೆಯುತ್ತಿದ್ದು, ವಿದೇಶಿ ಸಿನಿಮಾಗಳು ಡಬ್ ಆಗಿ ಪ್ರದರ್ಶನಗೊಳ್ಳುತ್ತಿವೆ. ಅನುಕರಣೆ ಮಾಡಿ ಚಿತ್ರ ತೆಗೆಯುವ ಅವಶ್ಯಕತೆ ಕಡಿಮೆಯಾಗಿರುವುದಲ್ಲದೆ ಸಿನಿಮಾಗಳಲ್ಲಿ ಹೊಸ ನಾಯಕರಿಗೆ ಅವಕಾಶ ಕೊಡದೆ ಇರುವುದು ಮತ್ತು ಹೊಸತನದ ಅನುಷ್ಠಾನದಲ್ಲಿ ವಿಫಲಗೊಂಡಿರುವುದು ಹಿಂದಿ ಸಿನಿಮಾದ ಜನಪ್ರಿಯತೆ ಕುಗ್ಗಲು ಕಾರಣವಾಗಿದೆ. ಈಗ ತಮಿಳು, ತೆಲುಗು ಹಾಗೂ ಇತರ ದಕ್ಷಿಣ ಭಾರತದ ಭಾಷೆಗಳಿಂದ ಹಿಂದಿ ಭಾಷೆಗೆ ಡಬ್ ಮಾಡುವುದು ಸರ್ವೇಸಾಮಾನ್ಯ ವಾಗಿದ್ದು, ಬಹುಶಃ ಹಿಂದಿ ಚಿತ್ರೋದ್ಯಮವು ನೋಡುಗರ ಬದಲಾದ ಅಭಿರುಚಿಯನ್ನು ಗ್ರಹಿಸುವಲ್ಲಿ ವಿಫಲವಾಗಿ ತಮ್ಮ ಮಾರುಕಟ್ಟೆಯನ್ನು ಬಿಟ್ಟು ಕೊಡುತ್ತಿದೆ ಎಂದು ಹೇಳಬಹುದು.

ಹಿಂದಿ ಸಿನಿಮಾಗಳು ಬಾಲಿವುಡ್ ಸಿನಿಮಾಗಳನ್ನು ಅನುಕರಣೆ ಮಾಡುವ ಮನಸ್ಥಿತಿಯಲ್ಲಿ ಇರುವಾಗ, ದಕ್ಷಿಣ ಭಾರತದ ಸಿನಿಮಾ ನಿರ್ಮಾಪಕರು ದಕ್ಷಿಣ ಭಾರತದ ಸಂಸ್ಕೃತಿಯನ್ನು ನೋಡುಗರಿಗೆ ಪರಿಚಯಿಸುವ ಉದ್ದೇಶ

ಹೊಂದಿ ಚಿತ್ರ ನಿರ್ಮಿಸುತ್ತಿದ್ದಾರೆ. ಈ ಪ್ರಯತ್ನಕ್ಕೆ ರಾಷ್ಟ್ರ ಮಟ್ಟದಲ್ಲಿಯೂ ನೋಡುಗರು ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ. ಇತ್ತೀಚಿನ ಉದಾಹರಣೆ ಎಂದರೆ 'ಕಾಂತಾರ' ಮತ್ತು 'ಆರ್ ಆರ್ ಆರ್' ಸಿನಿಮಾಗಳು.

ಸಿನಿಮಾ ಪ್ರಿಂಟ್‌ಗಳ ಮೇಲಿನ ಅವಲಂಬನೆ ಕೊನೆಗೊಂಡ ನಂತರ ತಂತ್ರಜ್ಞಾನ ಹಾಗೂ ಉಪಗ್ರಹಗಳ ಮೂಲಕ ಪ್ರದರ್ಶನ ಮಾಡಬಹುದಾದ ಅನುಕೂಲತೆಗಳ ಕಾರಣದಿಂದ ಭಾರತದಲ್ಲಿ ಚಿತ್ರಗಳ ನಿರ್ಮಾಣ ಹೆಚ್ಚಾಗಿದೆ. ಇದೇ ಕಾರಣದಿಂದ ವಿಶ್ವಾದ್ಯಂತ ಭಾರತೀಯ ಚಿತ್ರಗಳಿಗೆ ಬೇಡಿಕೆ ಉಂಟಾಗಿದೆ. 2013ರಲ್ಲಿ ಇಡೀ ವಿಶ್ವದಲ್ಲಿ 7,610 ಸಿನಿಮಾಗಳು ನಿರ್ಮಾಣಗೊಂಡು, ಅದರಲ್ಲಿ ಭಾರತದ ಕೊಡುಗೆ ಶೇಕಡ 20ರಷ್ಟು ಇತ್ತು. ಆಗ ದಕ್ಷಿಣ ಭಾರತದ ಸಿನಿಮಾಗಳಿಗೆ ಅಷ್ಟು ಮನ್ನಣೆ ಇರಲಿಲ್ಲ.

ತೀರಾ ಇತ್ತೀಚಿನವರೆಗೂ ದಕ್ಷಿಣ ಭಾರತದ ತಾರೆಯರಿಗೆ ಉತ್ತರ ಭಾರತದಲ್ಲಿ ಅಷ್ಟೊಂದು ಜನಪ್ರಿಯತೆ ಇರಲಿಲ್ಲ ಪ್ರಾದೇಶಿಕ ಭಾಷೆಯ ಚಿತ್ರಗಳು ಆಯಾ ಪ್ರದೇಶದ ಸಿಂಗಲ್ ಸ್ಕ್ರೀನ್ ಎಂದು ಕರೆಯುವ ಸಿನಿಮಾ ಮಂದಿರಗಳಲ್ಲಿ ಪ್ರದರ್ಶಿತಗೊಳ್ಳುತ್ತಿದ್ದವು. ತಂತ್ರಜ್ಞಾನ ಮತ್ತಿತರ ಕಾರಣದಿಂದ ಹಲವಾರು ಸಿಂಗಲ್‌ಸ್ಕ್ರೀನ್ ಚಿತ್ರಮಂದಿರಗಳನ್ನು ಈಗ ಮುಚ್ಚಲಾಗುತ್ತಿದೆ. ಪ್ರಾದೇಶಿಕ ಭಾಷೆ ಚಿತ್ರಗಳು ಹೆಚ್ಚು ಹೆಚ್ಚು ನೋಡುಗರನ್ನು ತಲುಪಲು ಭಾಷೆಯ ಎಲ್ಲೆಯನ್ನು ಮೀರಿ ಇತರ ಪ್ರದೇಶಗಳಲ್ಲಿ ಪ್ರದರ್ಶನಗೊಳ್ಳಬೇಕಾದ ಅನಿವಾರ್ಯತೆ ಒದಗಿ ಬಂದಿದೆ .

ಪ್ಯಾನ್ ಇಂಡಿಯಾ ಸಿನಿಮಾದ ಲಕ್ಷಣಗಳು:

- ಒಂದು ಸಿನಿಮಾವನ್ನು ಏಕಕಾಲದಲ್ಲಿ ಹಲವು ಭಾಷೆಗಳಲ್ಲಿ ನಿರ್ಮಾಣ ಮಾಡುವುದು;
- ಅದ್ದೂರಿ ಚಿತ್ರ ನಿರ್ಮಿಸಲು ಅಪಾರವಾದ ಹಣ ಹೂಡಿಕೆ ಮಾಡುವುದು;
- ಬಹುಭಾಷಾ ಜನಪ್ರಿಯ ನಟ ನಟಿಯರನ್ನು ಸೇರಿಸಿಕೊಳ್ಳುವುದು;
- ಯುವಜನರನ್ನು ಸೆಳೆಯುವಂತಹ ಮೆಲೋಡ್ರಾಮ, ಕ್ರೌರ್ಯ, ಹೊಡೆದಾಟಗಳನ್ನು ಚಿತ್ರಕತೆಯಲ್ಲಿ ಧಾರಾಳವಾಗಿ ಸೇರಿಸುವುದು;
- ಹೊಸ ಚಲನಚಿತ್ರಗಳಿಗೆ ಗರಿಷ್ಠ ಮಟ್ಟದ ಪ್ರಚಾರ ನೀಡಿ, ವಿಶ್ವಾದ್ಯಂತ ಏಕಕಾಲದಲ್ಲಿ ಬಿಡುಗಡೆ ಮಾಡುವುದು;
- ಸಿನಿಮಾ ಬಿಡುಗಡೆಯಾದ ಅತ್ಯಲ್ಪ ಅವಧಿಯಲ್ಲಿ ಹೂಡಿಕೆ ಮಾಡಿದ ಹಣವನ್ನು ಹಿಂಪಡೆಯುವುದಲ್ಲದೆ ಅಪಾರ ಲಾಭ ಗಳಿಸುವುದು. ಉದಾಹರಣೆಗೆ 'ಕೆಜಿಎಫ್' ಚಲನಚಿತ್ರ ಎರಡನೇ ದಿನವೇ 1000 ಕೋಟಿ ಗಳಿಸಿದೆ.

ಪ್ಯಾನ್ ಇಂಡಿಯಾದ ಆರಂಭದ ಕೆಲವು ಯಶಸ್ವಿ ಚಲನಚಿತ್ರಗಳೆಂದರೆ– ಬಾಹುಬಲಿ ಭಾಗ ಒಂದು ಮತ್ತು ಎರಡು, ಕೆಜಿಎಫ್ ಭಾಗ ಒಂದು ಮತ್ತು ಎರಡು, ಸಾಹೋ, ಪುಷ್ಪ ಬ್ರಹ್ಮಾಸ್ತ್ರ, ಆದಿಪುರುಷ ಇತ್ಯಾದಿ. ಇದರಿಂದ ರಾಜಮೌಳಿ, ಪ್ರಶಾಂತ್ ನೀಲ್, ಯಶ್, ರಾಮಚಂದ್ರ. ಅಲ್ಲು ಅರ್ಜುನ್, ರಾಮ್ ಚರಣ್, ಅಜಿತ್ ಮುಂತಾದವರ ಹೆಸರು ಪ್ರಸಿದ್ಧಿಗೆ ಬಂತು.

ಕಳೆದ 25 ವರ್ಷಗಳಲ್ಲಿ ಯುವಕರನ್ನು ಬಡಿದೆಬ್ಬಿಸುವ ಯಾವುದೇ ಆರ್ಥಿಕ ಸಾಮಾಜಿಕ ಸಮಸ್ಯೆಗಳು ಎದುರಾಗಿಲ್ಲ. ಯುವಕರಿಗೆ ಇಂತಹ ಸಮಸ್ಯೆಗಳನ್ನು ಸಿನಿಮಾದಲ್ಲಿ ತೋರಿಸಿದಲ್ಲಿ ಇಷ್ಟವಾಗುವುದು ಸಹಜ. ಪ್ಯಾನ್ ಇಂಡಿಯಾ ಸಿನಿಮಾಗಳಲ್ಲಿ ನಕಾರಾತ್ಮಕ ಅಂಶಗಳನ್ನೂ ಗುರುತಿಸಲಾಗಿದೆ. ಪ್ರಾದೇಶಿಕ ಸಂಸ್ಕೃತಿ ಸೊಗಡು, ಎಲ್ಲರಿಗೂ ಅನ್ವಯಿಸುವ ಕಥಾ ಹಂದರ ಚಿತ್ರದಲ್ಲಿ ಇರಬೇಕಾದುದು ಅನಿವಾರ್ಯ.

ಪ್ಯಾನ್ ಇಂಡಿಯಾ ಸಿನಿಮಾಗಳಲ್ಲಿ ತುಟಿ ಚಲನೆಯು ನೋಡುಗರಿಗೆ ಗೊತ್ತಾಗದಂತೆ ಚಿತ್ರಿಸಲಾಗುತ್ತದೆ ಈಗ ಕೃತಕ ಬುದ್ಧಿಮತ್ತೆ ಮೂಲಕ ತುಟಿಚಲನೆ ಸಾಧಿಸಬಹುದಾಗಿದೆ. ಪ್ಯಾನ್ ಇಂಡಿಯಾ ಚಿತ್ರಗಳಲ್ಲಿ ಕಂಡುಬರುವ ಮತ್ತೊಂದು ಲಕ್ಷಣವೆಂದರೆ ಸೂಪರ್ ಹೀರೋ ಪಾತ್ರಗಳು. ಈ ಚಿತ್ರಗಳಲ್ಲಿ ಮಹಿಳೆಯರ ಪಾತ್ರ ಅಲಂಕಾರಿಕ ಮತ್ತು ಸಾಂದರ್ಭಿಕ ಮಾತ್ರ ಆಗಿರುತ್ತದೆ. ಪುರುಷರ ನಡುವಿನ ವಿರಸ ಮತ್ತು ಹೊಡೆದಾಟಗಳು ಮಿತಿಮೀರಿ ಕಾಣಿಸಿಕೊಳ್ಳುತ್ತಿವೆ. ಅತಿರೇಕವಾದ ಹಿಂಸೆಗಳು ಸಮಾಜದ ಮೇಲೆ ಏನು ಪರಿಣಾಮ ಬೀರಬಹುದೆಂಬ ಅರಿವು ನಿರ್ಮಾಪಕರಿಗೆ ಇದ್ದಂತಿಲ್ಲ. ದೆಹಲಿಯಲ್ಲಿ ಯುವಕರು ಗ್ಯಾಂಗ್‌ಸ್ಟರ್ ಆಗಬೇಕೆಂಬ ಬಯಕೆಯಿಂದ ಒಬ್ಬ ಅಮಾಯಕನನ್ನು ಸಾಯಿಸಿದ್ದಲ್ಲದೆ ಇಡೀ ಪ್ರಕರಣವನ್ನು ಮೊಬೈಲಲ್ಲಿ ಚಿತ್ರಿಸಿ ಸಾಮಾಜಿಕ ಮಾಧ್ಯಮದಲ್ಲಿ ಬಿಡುಗಡೆ ಮಾಡಿದ್ದರು. ಇದೊಂದು ಉದಾಹರಣೆ ಅಷ್ಟೆ.

ಎಲ್ಲಾ ಚಿತ್ರಗಳೂ ಸೆನ್ಸಾರ್ ಮಂಡಳಿಯಿಂದ ಪ್ರದರ್ಶನಯೋಗ್ಯ ಎಂದು ಪ್ರಮಾಣಪತ್ರ ಪಡೆದಿರುತ್ತವೆ. ಇಂತಹವನ್ನು ಹೇಗೆ ಒಪ್ಪಿಕೊಳ್ಳುತ್ತಾರೆಬ ಪ್ರಶ್ನೆಗಳು ಇವೆ. ನಿಯಮದ ಪ್ರಕಾರ ವಯಸ್ಕರ ಚಿತ್ರ ಎಂದು ಪ್ರಮಾಣಪತ್ರ ಪಡೆದ ಕೂಡಲೇ ಚಿತ್ರದಲ್ಲಿ ಹೆಚ್ಚಿನ ಕ್ರೌರ್ಯ ಮತ್ತು ಲೈಂಗಿಕತೆ ಸೇರಿಸಬಹುದು ಎಂಬ ಮಾತುಗಳು ಕೇಳಬರುತ್ತಿವೆ.

ಪ್ಯಾನ್ ಇಂಡಿಯಾ ಸಿನಿಮಾಗಳ ಯಶಸ್ಸಿಗೆ ಬಲಿಷ್ಠವಾದ ಡಿಸ್ಟ್ರಿಬ್ಯೂಟರ್ ಜೊತೆ ಸಂಬಂಧ ಅಗತ್ಯ. ಚಿತ್ರದ ಯಶಸ್ಸಿಗೆ ಓಟಿಟಿಗಳ ಪಾತ್ರವೂ ಬಹು ದೊಡ್ಡದು. ಇವು ಸಿನಿಮಾವನ್ನು ಭೌಗೋಳಿಕ ಸೀಮೆಗಳನ್ನು ಮೀರಿ ನೋಡುಗರಿಗೆ ತಲುಪಿಸಿ, ನೂರಾರು ಕೋಟಿ ರೂಪಾಯಿಗಳ ಆದಾಯವನ್ನೂ ಗಳಿಸಿಕೊಡುತ್ತವೆ. ಈಗ ಸಿನಿಮಾ ಬಿಡುಗಡೆಗೆ ಮುನ್ನವೇ ನಡೆಸುವ ವಿವಿಧ ಬಗೆಯ ಪ್ರಚಾರೋತ್ಸವಗಳು ನೋಡುಗರಲ್ಲಿ ಚಿತ್ರ ನೋಡಲೇಬೇಕೆಂಬ ತವಕ ಹೆಚ್ಚಿಸುವುದರಿಂದ ಬಿಡುಗಡೆಯಾದ ಒಂದೆರಡು ವಾರದಲ್ಲೇ ಕೋಟಿಗಟ್ಟಲೆ ಹಣ ಸಂಪಾದಿಸುತ್ತವೆ.

ಪ್ಯಾನ್ ಇಂಡಿಯಾ ಸಿನಿಮಾಗಳು ಅನೇಕರಿಗೆ ಉದ್ಯೋಗ ಒದಗಿಸಿರುವುದಲ್ಲದೆ, ರಾಜ್ಯ ಸರ್ಕಾರಗಳಿಗೆ ತೆರಿಗೆ ಮೂಲಕ ಅಪಾರ ಆದಾಯಕ್ಕೆ ಕಾರಣವಾಗಿದೆ. ಈಗೀಗ ಹೆಚ್ಚು ಹೆಚ್ಚು ಸಿನಿಮಾಗಳು ಪ್ಯಾನ್ ಇಂಡಿಯಾ ರೀತಿಯಲ್ಲಿ ನಿರ್ಮಾಣವಾಗುತ್ತಿರುವುರಿಂದ ಚಿತ್ರೋದ್ಯಮದ ಲೆಕ್ಕಾಚಾರಗಳು ಬದಲಾಗುತ್ತಿವೆ. ಇದರಿಂದ ಕೌರ್ಯ, ಹಿಂಸೆಗಳು ಅಧಿಕವಾಗಿ, ಚಲನಚಿತ್ರಗಳಲ್ಲಿ ನಿಜವಾದ ಸಾಂಸ್ಕೃತಿಕ ಅಂಶ ಮರೆಯಾಗುತ್ತಿದೆ. ಇದಲ್ಲದೆ, ಭವಿಷ್ಯದಲ್ಲಿ ಚಲನಚಿತ್ರ ಮಂದಿರಗಳು ಅಪಾರ ಹಣ ಗಳಿಸುವಂತಹ ಪ್ಯಾನ್ ಇಂಡಿಯಾ ಸಿನಿಮಾಗಳಿಗೆ ಮಾತ್ರ ಲಭ್ಯವಾಗುವ ಸಾಧ್ಯತೆಯಿದ್ದು, ಪ್ರಾದೇಶಿಕ ಚಲನಚಿತ್ರಗಳನ್ನು ಓಟಿಟಿಯಲ್ಲಿ ಮಾತ್ರ ನೋಡುವಂತಹ ಪರಿಸ್ಥಿತಿ ಉಂಟಾಗಬಹುದು.

ಹೀಗೆ ಆಧುನಿಕ ಭಾರತೀಯ ಚಲನಚಿತ್ರೋದ್ಯಮದ ಬಗ್ಗೆ ಹಲವು ಆಯಾಮಗಳಲ್ಲಿ ಸವಿಸ್ತಾರವಾಗಿ ವಿವರಿಸಿದ ಶ್ರೀ ಬಿ.ಆರ್. ರವೀಂದ್ರನಾಥ್ ಅವರು ವೀಕ್ಷಕರಲ್ಲಿ ಹೆಚ್ಚಿನ ಅರಿವು ಮೂಡಿಸಿದರು.

ನಂತರ ಸಂವಾದ ಕಾರ್ಯಕ್ರಮ ನಡೆಯಿತು. ಕೊನೆಯಲ್ಲಿ ಶ್ರೀಮತಿ ರೇಣುಕಾ ದೇಸಾಯಿಯವರು ವಂದನಾರ್ಪಣೆ ಮಾಡಿದರು.

(ಇಡೀ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು)

***

ಕವಿ ಮನ

ಪುರುಷನ ಯಶಸ್ಸಿನ ಹಿಂದೆ...

ಹೊಳೆ ಹೊಳೆವ ನತ್ತೆ! ಜಗಕೆ
ಒಂದು ಪುಣ್ಯದ ಬಿತ್ತನಿತ್ತೆ!
ಆ ಬಿತ್ತು ಕುಡಿಯೊಡೆದು
ಗಿಡವಾಗಿ ಮರವಾಗಿ ಹೂ ಹಣ್ಣು
ತುಂಬಿತು... ಎಲೆಯಲಿ, ಹೂವಿನಲಿ,
ಹಣ್ಣಿನಲಿ ಹರಿನಾಮ ಹೊಮ್ಮಿತು.
ಟೊಂಗೆ ಟೊಂಗೆಗೆ ಕುಳಿತ
ಖಗ ಸಂಕುಲ ರವಗೈದಿತು..

ದೇವನಿಲ್ಲಿ ಗರ್ಭಗುಡಿಯ ತೊರೆದ,
ಉತ್ಸವ ಮೂರ್ತಿಯಾದ
ಸಿರಿಮನೆಯ ಬಿಟ್ಟು ಬಯಲಿಗೆ ಬಂದ...
ಕುಳಿತು ತಿರುಗಲು ಮೇನೆಯಿಲ್ಲ
ಹೊತ್ತೊಯ್ಯುವ ಬೋಯಿಗಳಿಲ್ಲ

ತಿರುಕನಂತೆ ಮನೆಮನೆಯ ತಿರುಗಿದ,
ತಿತಿಕ್ಷೆಯಲಿ ಜನಮನವ ತಿದ್ದಿದ...
ಕಲ್ಲು ಸಕ್ಕರೆಯ ರುಚಿಯ ಹಿಡಿಸಿದ...

"ಪ್ರತಿಪುರುಷನುದ್ಧಾರದ ಹಿಂದೆ
ಇರುವಳೊಬ್ಬ ಹೆಣ್ಣು"
ಸತಿ ಸರಸ್ವತಿ, ಭಕ್ತಿ ರಸ ಹರಿವಂತೆ ಮಾಡಿದ
ಭಾಗೀರಥಿ, ಹೆಣ್ಣಿಲ್ಲಿ ಮಾಯೆಯಲ್ಲ,
ಪುಣ್ಯವೇ ರೂಪಾಗಿ ಬಂದ ಜಗದ ತಾಯಿ....

ಗುಲಾಮತನವನು ಸಹಿಸಿ ಸಹಿಸಿಯೇ
ಗುರುವಾದಳು, ಸೋತು
ಕಂಬನಿಯ ಸುರಿಸುತ್ತಲೇ ಒಮ್ಮೆ ಗೆದ್ದಳು,
ಕೈ ಹಿಡಿದವನ ದರ್ಪಕ್ಕೆ ಮುದುರಿ ಮುದುಡಿದ್ದವಳು...
ಮುದುಡುತ್ತ ಮುದುಡುತ್ತ
ಒಮ್ಮೆಲೇ ಅರಳಿದ್ದಳು,
ಹಸನಾದ ಹೃದಯ, ನಿಜದೊಲುಮೆ ಮೂರ್ತಿ

"ಮಡದಿ ಗುಡಿಸುವ ಹೆಣ್ಣು
ಗಂಡನ ಮನದ ಒಳಗಸವ
ಒಲ್ಮೆಯಲಿ ಗುಡಿಸಬೇಕು" ಎಂಬ ಸತ್ಯವ
ತೆರೆದು ತೋರಿದೆ...

ನಿನ್ನ ಸತ್ವ ಒರೆಗೆ ಹಚ್ಚಿ ಜಯಿಸಿದೆ,
ಮನೆಯ ಕಸವ ಹೊಡೆದು,
ಕಿಟಕಿಬಾಗಿಲು ತೆರೆದು ಹೊಸ ಬೆಳಕಿಗೆ
ಹೊಸ ಗಾಳಿಗೆ ಕರೆಯನಿತ್ತೆ....

ಲೋಭಿ ಶ್ರೀನಿವಾಸನಾಯಕ ಕೆಳಗೆ ಬಿದ್ದ,
ದಾನಿ ಪುರಂದರ ಮೇಲೆದ್ದ....
ಸತಿಯ ಮೂಗಿನ ನತ್ತು
ಹರಿಯ ಕಣ್ಣಿಗೆ ಬಿತ್ತು!
ನಾಯಕನ ಉದ್ಧಾರಕೆ ನೆಪವಾಯಿತು..
ಮುಕುರವೋ ಮುಕುತಿಯೋ
ಹೊರಗೆಲ್ಲ ಒಳಗೆಲ್ಲ ಬೆಳಕಾಯಿತು

ಆಧ್ಯಾತ್ಮ ಶರಧಿಯಲಿ ಜೀವ
ಮಿಂದಿತು!
ಹರಿಕೀರ್ತನ ಸರಮಾಲೆ
ಜಗದ ಕೊರಳಿಗೆ ಬಿತ್ತು!

– ಗಿರಿಜಾರಾಜ್
06.03.2024

ಕವಿ ಮನ

ಬಾಳ ದೋಣಿ

ಕಡಲ ಅಂಚಿಗೆ ನಿಂತ ದೋಣಿ ತಾ
ಬದುಕಿನ ಅಂಬುಧಿಯಲಿ ಒಬ್ಬಂಟಿ
ಸಾಗರದ ಅಲೆಗಳ ಏರಿಳಿತಗಳ ಸಾಗುತಲಿ
ಜೀವ ಬದುಕಿನ ಸಂಘರ್ಷದ ಸುಳಿಯಲಿ.

ನಿತ್ಯಕಾಯಕ ಮುಗಿಸಿ ನಾವಿಕನ
ಉದರಪೋಷಣೆಗೆ ನೆರವಾಗಿ
ತೇಲಿ ಮುಳುಗಿ ಬಾಳ ಪಯಣದಿ
ನಿತ್ಯ ಸತ್ಯ, ನಿಷ್ಠೆ ಸಾಕ್ಷಾತ್ಕಾರ.

ತಿರುತಿರುಗಿ ತೀರಿತ ದೋಣಿ ತಾ
ವಿರಮಿಸುವುದು ತೆರೆಯ ತೊರೆದು ಅಲೆಗೆ,
ದಡವ ಸೇರಿದೆ ನಿರ್ಜನ ಸಂಜೆಯಲಿ
ಭಾವರಾಗ ಕಳಚಿ ನಿರ್ಲಿಪ್ತತೆಯಲಿ//.

ಕೆಸರೋ ಕಷ್ಟಗಳೋ ಭರತವವೊ
ಸುಖ ಕಮಲ ಸೋಪಾನವೋ,
ಅಂಜದೆ ಅಳುಕದೆ ಮುನ್ನಡೆ
ಬೆಳಕಿನೆಡೆಗೆ ಬಾಳ ದೋಣಿಯಲಿ.

ಬಾಳಲಿ ನಾಳೆಯ ಬೆಳಗಿಗೆ
ತೀರಿದ ತಮದಾಚೆ ಹೊರಟು
ಸೂರ್ಯ ರಶ್ಮಿಯ ಕಾಣುವಾಸೆ,
ಕಾಣಬಲ್ಲೆನೆ ನಾ? ಹೇಳೆಲೆ ದೋಣಿ?

– ಎನ್ ಶಂಕರ್ ರಾವ್
13.03.2024

ಪುಟ್ಟ ಕವಿತೆ

ಪುಟ್ಟ ಕವಿತೆ ಪುಟ್ಟ ಹಕ್ಕಿಯ ಹಾಗೆ
ಅಲ್ಲಿ ಇಲ್ಲಿ ಎಗರಿ ಕುಪ್ಪಳಿಸಿ
ಬಳಿಯ ಹೂಗಳ ಮಧು ಹೀರಿ
ಕೊಂಬೆಗೆ ತೂಗಿ
ಯಾವುದೋ ರಾಗ ಸ್ವರದಲ್ಲಿ
ಎದೆಯ ಕರೆಯುತ್ತದೆ

ಪುಟ್ಟ ಕವಿತೆ ದೊಡ್ಡ ಹಕ್ಕಿಯಂತಲ್ಲ
ಗರುಡನಂತಹ ಗಮನವಿಲ್ಲ
ಹದ್ದಿನ ಕಣ್ಣು, ಡೇಗೆಯ ಆಕ್ರಮಣ
ಗೊತ್ತಿಲ್ಲ

ಪುಟ್ಟ ಕವಿತೆ ಪುಟ್ಟ ದೋಣಿಯ ಹಾಗೆ
ನದಿಯ ಈ ದಡದಿಂದ ಆ ದಡಕ್ಕೆ
ಕೆಲವೇ ಯಾತ್ರಿಕರ ತಲುಪಿಸಿ
ನಸುನಗುತ್ತದೆ

ಕಡಲ ಒಡಲ ಬಗೆವ ಹಡಗಲ್ಲ
ಪುಟ್ಟ ಕವಿತೆ

ಪುಟ್ಟ ಕವಿತೆ ಸರಳ ಸಾಲುಗಳ ಸಂಕೋಚದಲ್ಲಿ
ಕಣ್ಣು ಬಿಟ್ಟು
ಸಾರ್ಥಕ್ಯ ಕಾಣುತ್ತದೆ
ಗೂಡಿನ ಆಚೆಗಿನ
ಪುಟ್ಟ ನೆಗೆತಗಳಲ್ಲಿ

ತುಟಿಯ ಮೇಲಿನ ಕಿರುನಗೆ
ಕಣ್ಣಂಚಿನ ಕಂಡೂ ಕಾಣದ
ತೇವದಲ್ಲಿ
ಎದೆ ಅರಳಿಸಿ

ತಬ್ಬಿ ಕೊಳ್ಳುತ್ತದೆ

ಮುಗುಳ ಹಾಗೆ
ಮಗಳ ಹಾಗೆ

– ಡಾ ಗೋವಿಂದ ಹೆಗಡೆ
27.03.2024

ಕವಿ ಮನ

ಚಿತಾಗಾರದ ಪೋರ

ಅರೇ! ಚಿತಾಗಾರದಲ್ಲಿ ಪೋರ ಯಾರಿವ?
ಇನ್ನೂ ಅವನು ಹದಿಹರೆಯಕೂ ಕಾಲಿಡದವ
ಶವಗಳ ಸುಡುವ ಖಾನೆಯಲ್ಲಿ ಏನು ಮಾಡುತಿಹ?
ಏಕೆ ಆಟದ ಬಯಲಿನಂತೆ ಅಲ್ಲಿಲ್ಲಿ ಓಡಾಡುತಿಹ?

ಕಣ್ಣುಗಳು ಅವನನ್ನೇ ದಿಟ್ಟಿಸಿ ನೋಡುತಿರಲು
ಪೋರ ಚಿತೆಯ ಸುಡುವವನನು ಅಪ್ಪಾ ಎನಲು
ಅರೇ! ಈ ಮುಗ್ಧ ಬಾಲಕ ಚಿತಾಗಾರದಲ್ಲೇಕೆ?
ಅವನಪ್ಪ ಇವನನು ಮನೆಯಲ್ಲೇ ಇರಿಸಲಿಲ್ಲವೇಕೆ?

ಸಾವು ನೋವುಗಳ ಅರಿಯದ ಮನಸ್ಸಿಗೆ
ಇಂಥಾ ದಾರುಣ ಶಿಕ್ಷೆಯೇ ಈ ವಯಸ್ಸಿಗೆ
ಆದರೆ ಪೋರ ನಗುನಗುತ್ತಾ ಓಡಾಡುತಿಹನು
ಶವಾಗಾರದಿ ಇದ್ದೇನೆಂದು ಸುಳುಹು ಕೊಡದವನು

ಯುವಕನೊಬ್ಬನ ಪಕ್ಕ ಕುಳಿತು ಮೊಬೈಲ್ ನೋಡುತಿಹನು
ಅಲ್ಲಿ ಇಲ್ಲಿ ಓಡಾಡುತ ಕುಣಿದು ಕುಪ್ಪಳಿಸುತಿಹನು
ಅಲ್ಲಿರುವ ಮೆಟ್ಟಿಲುಗಳ ಹತ್ತಿ ಇಳಿದು ಮಾಡುತಿಹನು
ಚಿತಾಗಾರದ ಬಾಗಿಲು ತೆಗೆದೊಡನೆಯೇ ಒಳನುಗ್ಗುವನು

ಒಂದೆಡೆ ಅಪರ ಕರ್ಮಗಳ ಮಂತ್ರಘೋಷ
ಮತ್ತೊಂದೆಡೆ ತುತ್ತೂರಿ ತಮಟೆಗಳ ಕರ್ಕಶ
ಜೋರಾಗಿ ಅಳುತಿಹ ಶಬ್ದ ಒಂದು ಸಮೂಹದಿ
ಮೌನ ತಾಳಿಹರು ಇನ್ನೊಂದೆಡೆ ನಿರ್ಮೋಹದಿ

ಚಿತಾಗಾರದವನನು ಪ್ರಶ್ನೆ ಮಾಡಲೇಬೇಕೆನಿಸಿತು
ಎಡೆಬಿಡದೆ ಶವ ಸುಡುತಿರುವನಿಗೆ ಎಲ್ಲಿದೆ ಪುರುಸೊತ್ತು?
ಬರುತಿಹುದು ಒಂದಾದ ಮೇಲೊಂದು ವಾಹನಗಳು
ಮನದಲ್ಲೇ ಉಳಿಯಿತು ಕೇಳಬೇಕೆಂದಿದ್ದ ಪ್ರಶ್ನೆಗಳು

ಅಂದು ರಾತ್ರಿ ಕನಸಿನಲ್ಲಿ ಬಂದ ಚಿತಾಗಾರದವ
ಏನು ಪ್ರಶ್ನೆ ಕೇಳಬೇಕೋ ಕೇಳಿ ಎಂದನವ
ಪ್ರಶ್ನೆಗಳ ಸುರಿಮಳೆಯೇ ಆಯಿತು ಅವನ ಮೇಲೆ
ಸಾವಧಾನದಿಂದ ಕೇಳಿದ ಕುಳಿತು ಕುರ್ಚಿಯ ಮೇಲೆ

"ಸ್ವಾಮಿ ಅಲ್ಲಿ ಕೆಲಸ ಮಾಡಲು ಮನಸ್ಸು ಕಲ್ಲಿನಂತಿರಬೇಕು
ದಿನನಿತ್ಯವೂ ಶವಗಳ ಸುಡಲು ಗುಂಡಿಗೆ ಗಟ್ಟಿಯಾಗಿರಬೇಕು
ಹೊಸದರಲ್ಲಿ ತಳಮಳ, ಅಭ್ಯಾಸವಾದಂತೆ ಎಲ್ಲಾ ಯಾಂತ್ರಿಕ
ಈ ಬದುಕು ಸಾವುಗಳನೆಲ್ಲ ಬಲ್ಲವನು ಆ ಮೇಲಿನ ಮಾಂತ್ರಿಕ

ಸ್ವಾಮಿ, ಸಾವೇ ಬದುಕು ನಮಗೆ ಸಾವುಗಳಿಂದಲೇ ದುಡಿಮೆ
ಆಚೆ ದುಡಿಯಲಾಗದ್ದು ಇಲ್ಲಿ ದಕ್ಷಿಣೆಗಳಿಂದ ಲಕ್ಷ ದುಡಿಯುವೆ
ಪುಟ್ಟ ಮಗನಿಗೂ ಗಟ್ಟಿ ಮನದಿಂದ ಈ ಕಸುಬಿಗೇ ಹಾಕುವೆ
ಸಾವು ಇರುವವರೆಗೂ ಭವಿಷ್ಯ ಖಚಿತ, ದುಡಿದು ಚೆನ್ನಾಗಿರುವೆ

ಕೆ.ಆರ್.ವೆಂಕಟೇಶ್(ಮನು)
–ಮನೋಹಂಸ–
20.03.2024

ಕ್ಯಾಲೆಂಡರ್ ಕಲರವ

– ಸ್ನೇಹ ಶಶಿಧರ

ಹೊಸ ವರ್ಷ, ಹೊಸ ಹರ್ಷ, ಹೊಸ ಆಸೆ ಆಕಾಂಕ್ಷೆ...
ಇದು ಬರೀ ನಮ್ಮ ಮನಸ್ಥಿತಿ ಮಾತ್ರ. ಬೇರೇನೂ ಬದಲಾಗುವುದಿಲ್ಲ. ಬದಲಾಗೋದು ಗೋಡೆ ಮೇಲೆ ತೂಗು ಹಾಕಿರುವ ಕ್ಯಾಲೆಂಡರ್ ಮಾತ್ರ. ಎಂಥ ಆಧುನಿಕ ಉಪಕರಣಗಳು ಬಂದರೂ ನಮಗೆ ಗೋಡೆ ಮೇಲಿನ ಕ್ಯಾಲೆಂಡರ್ ಮೇಲೆಯೇ ಹೆಚ್ಚು ನಂಬಿಕೆ.

ಹೊಸ ಕ್ಯಾಲೆಂಡರ್ ಬಂದೊಡನೆ ನಾವೆಲ್ಲ ಮಾಡೋದು ಒಂದೇ ಕೆಲಸ – ಈ ವರ್ಷ ರಜಾ ಎಷ್ಟು? ಯಾವುದಾದರೂ ಹಬ್ಬ, ಭಾನುವಾರ ಬಂದರೆ ನಮಗೆ ಆಗುವ ದುಃಖ ಅಷ್ಟಿಷ್ಟಲ್ಲ. ನಮ್ಮ ಹಬ್ಬ ಆಚರಣೆ ನಮಗೆ ಸಂಭ್ರಮಕ್ಕಿಂತ ಒತ್ತಡವೇ ಹೆಚ್ಚು. ಆದ್ದರಿಂದ ಹಬ್ಬಗಳಿಲ್ಲದ ರಜೆ ಬಂದರೆ ಏನೋ ಖುಷಿ.

ನಮ್ಮ ಕರ್ನಾಟಕದ ಸರಕಾರಿ ರಜಾಗಳ ಪಟ್ಟಿಯಲ್ಲಿ ರಾಮನಿಗೂ, ಕೃಷ್ಣನಿಗೂ ಜಾಗವಿಲ್ಲ. ಆದರೆ ರಾಮಾಯಣ ಬರೆದ ವಾಲ್ಮೀಕಿಗೆ ಹಾಗೂ ಕೃಷ್ಣನ ಪೂಜಿಸಿದ ಕನಕದಾಸರಿಗೆ ವಿಶೇಷ ಸ್ಥಾನಮಾನ. ಎಂತಹ ವಿಪರ್ಯಾಸ! ನಾವು ಹಬ್ಬಗಳು ಅಥವಾ ನಮ್ಮ ಸಂಸ್ಕೃತಿಯಿಂದ ಓಡಿಹೋಗುವ ಪ್ರಯತ್ನದಲ್ಲಿ, ಆಚರಣೆಗಳ ಮಹತ್ವವನ್ನು ಮರೆಯುತ್ತಿದ್ದೇವೆ. ಭೀಮನ ಅಮಾವಾಸ್ಯೆ, ನಾಗರ ಪಂಚಮಿ, ಹೀಗೆ ಚಿಕ್ಕ ಪುಟ್ಟ ಹಬ್ಬಗಳಿಗೆ ರಜೆಯಿಲ್ಲ. ಬೆಳಗ್ಗೆ ಬೇಗ ಎದ್ದು ಕಾಟಾಚಾರದ ಪೂಜೆ ಅಂತ ಮಾಡಿ, ಕೆಲಸ ಕಾರ್ಯಗಳಲ್ಲಿ ತಲ್ಲೀನರಾ'ಗುತ್ತೇವೆ. ಅಣ್ಣತಂಗಿಯರ ಬಾಂಧವ್ಯವನ್ನು ಸಾರುವ ಈ ಹಬ್ಬಗಳಲ್ಲಿ ಸತ್ವವೆ ಕಳೆದುಹೋಗಿದೆ.

ಇನ್ನು ಗಣೇಶ ಹಬ್ಬದಂತಹ ದೊಡ್ಡ ಹಬ್ಬಕ್ಕೆ ರಜೆ ಉಂಟು. ವ್ರತ ಆಚರಿಸುವ ಗೌರಿ ಹಬ್ಬಕ್ಕಿಲ್ಲ. ಬ್ರಿಟಿಷರ ಅಟ್ಟಹಾಸ ಅಡಗಿಸಲು ತಿಲಕರು ಗಣೇಶ ಹಬ್ಬದ ಸಂಭ್ರಮವನ್ನು ಬೀದಿಬೀದಿಗಳಲ್ಲಿ ಆಚರಿಸಲು ಶುರುಮಾಡಿದರು. ಈಗಿನ ಬೀದಿ ಗಣಪ ಮುಂದಿನ ಭಾನುವಾರಕ್ಕೆ ಮೀಸಲು. ಎಷ್ಟೋಬಾರಿ ಪಿತೃಪಕ್ಷ ಶುರು ಆಗಿ ಹೋಗಿರುತ್ತೆ... ಪಾಪ ಗಣಪನಿಗೆ ಇನ್ನು ಬೀಳ್ಕೊಟ್ಟಿರೋಲ್ಲ. ಈ ಪದ್ಧತಿಯನ್ನು ಸರಿಪಡಿಸಲು ಆ ಲೋಕಮಾನ್ಯರೇ ಮತ್ತೆ ಹುಟ್ಟಿ ಬರಬೇಕು ಅನ್ಸತ್ತೆ.

ಮುಂದಿನ ಹಬ್ಬವೇ ದಸರಾ. ನಮ್ಮ ತಂದೆ ತಾಯಿ ಕಾಲದಲ್ಲಿ ಶಾಲೆಗೆ ದಸರೆ ರಜೆ ಎಂದು 10–15 ದಿನ ಕೊಡುತ್ತಿದ್ದರಂತೆ. ನಮ್ಮ ಮಕ್ಕಳಿಗೆ ಕೇವಲ 4–5 ದಿನ. ಕಾರಣ – ಕ್ರಿಸ್ಮಸ್‌ಗೆ ರಜೆ ಬೇಕಲ್ಲ. ಇಡೀ ದೇಶದಲ್ಲಿ ರಾಮಲೀಲಾ, ದುರ್ಗಾ ಪೂಜಾ, ನವರಾತ್ರಿ ಇನ್ನೂ ಅನೇಕ ಆಚರಣೆಗಳು ನಡೆಯುತ್ತವೆ. ಈ ಸಂಸ್ಕೃತಿ ಮುಂದಿನ ಪೀಳಿಗೆಗೆ ತಿಳಿ ಹೇಳಲು ಸಮಯವೇ ಸಾಲದು.

ಒಬ್ಬ ಹಿಂದೂಗೆ ಇನ್ನೊಬ್ಬ ಹಿಂದೂನೇ ಶತ್ರು. ದೀಪಾವಳಿ ತೊಗೊಳ್ಳಿ. ದಕ್ಷಿಣ ಭಾರತದಲ್ಲಿ ಅಮಾವಾಸ್ಯೆ ಪೂಜೆ ಪದ್ಧತಿ ಇರಲಿಲ್ಲ. ಈಗ ಉತ್ತರ ಭಾರತದವರು ವಲಸೆ ಬಂದ ಮೇಲೆ ನಮಗೆ ಅಮಾವಾಸ್ಯೆಗೂ ರಜೆ ಭಾಗ್ಯ. ಆದರೆ ನರಕ ಚತುರ್ದಶಿ ಅಭ್ಯಂಜನಕ್ಕೆ ಸಮಯವಿಲ್ಲ! ಕಾರ್ತಿಕ ದೀಪವನ್ನು ಕಾರ್ತಿಕ ಮಾಸ ಶುರುವಾಗುವ ಮೊದಲೇ ಹಚ್ಚುತ್ತೇವೆ!

ವರ್ಷದ ಅಂತ್ಯದಲ್ಲಿನ ಡಿಸೆಂಬರ್‌ನಲ್ಲಿ ಮಕ್ಕಳಿಗೂ ಕ್ರಿಸ್ಮಸ್ ರಜೆ, ನಮಗೂ ಎಕ್ಸ್ಟ್ರಾ ರಜೆ. ಸರಕಾರಿ ನೌಕರರಿಗೆ ರಜೆ ಲ್ಯಾಪ್ಸ್ ಆಗುತ್ತೆ ಅನ್ನೋಭೀತಿ. ಐಟಿ-ಬಿಟಿಯವರಿಗೆ ಹೊರ ದೇಶದಲ್ಲಿ ರಜೆಯ ಸೀಸನ್. ಆದರೆ ನಮಗೆ ಧನುರ್ಮಾಸ. ಯಾವ ಹಬ್ಬವೂ ಇಲ್ಲ, ಹರಿದಿನವು ಇಲ್ಲ. ಮದುವೆಯೂ ಇಲ್ಲ, ಮುಂಜಿಯು ಇಲ್ಲ!

ನನ್ನ ಜೊತೆ ಕೆಲಸ ಮಾಡುತ್ತಿರುವ ಒಬ್ಬ ಯುವಕ ಸಿಹಿ ಹಂಚುತ್ತಾ ಮ್ಯಾನೇಜರ್ ಬಳಿ ಹೇಳಿದ, "ನನ್ನ ಹೆಂಡತಿಗೆ ಹೆರಿಗೆಯಾಯಿತು. ಗಂಡು ಮಗು. ಅವಳ ಜೊತೆ ಸ್ವಲ್ಪ ಸಮಯ ಕಳೆಯಲು ಅವಕಾಶ ಕೊಡಿ." ಮ್ಯಾನೇಜರ್ "ಆಗಲ್ಲ, ಮುಂದಿನ ತಿಂಗಳು ಹೋಗು, ಈಗ ಆಡಿಟ್ ನಡೀತಾ ಇದೆ." ಎಂದರು. ಆಗ ಅವನು ಹೇಳಿದ, "ಮುಂದಿನ ಬಾರಿ ಆಡಿಟ್ ಯಾವಾಗ ಬರುತ್ತದೆ ಹೇಳಿ ಸರ್, ಎರಡನೇ ಮಗುವಿಗಾದರೂ ನಿಮಗೆ ತೊಂದರೆ ಆಗದ ಹಾಗೆ ಪ್ಲಾನ್ ಮಾಡುವೆ." ಎಂದು. ಹೀಗಾಯ್ತು ಡಿಸೆಂಬರ್ ರಜೆಯ ಕಥೆ. ಊಟಕ್ಕಿಲ್ಲದ ಉಪ್ಪಿನಕಾಯಿ ಹಾಗೆ.

ಹೀಗೊಂದು ಲೆಕ್ಕಾಚಾರದ ಪ್ರಕಾರ, ಶ್ರೀರಾಮ ಹುಟ್ಟಿದ್ದು ಕ್ರಿಸ್ತಪೂರ್ವ 5114, ಜನವರಿ 10ರಂದು. ನಮ್ಮ ಪಂಚಾಂಗದ ಪ್ರಕಾರ, ಚೈತ್ರ ಮಾಸದ ಶುಕ್ಲಪಕ್ಷದ ನವಮಿಯಂದು. ಅಂದರೆ ಹಿಂದೂ ಹೊಸ ವರ್ಷದ 9ನೆಯ ದಿನ. ಜನವರಿ 10 ಎಂದರೆ ಗ್ರೆಗೋರಿಯನ್ ಕ್ಯಾಲೆಂಡರ್‌ನ ಹೊಸ ವರ್ಷದ 10ನೆಯ ದಿನ. ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಯಿತು ಅಲ್ಲವೇ. ಇದರಿಂದ ಮತ್ತೊಮ್ಮೆ ಸಾಬೀತಾಗಿದೆ, ಎಲ್ಲ ಧರ್ಮಗಳ ಮೂಲ ಒಂದೇ. ದೇವನೊಬ್ಬ ನಾಮ ಹಲವು. ಈ ಸೂತ್ರವನ್ನು ಮನದಲ್ಲಿ ಜಪಿಸುತ್ತ ಹೊಸ ವರ್ಷವನ್ನು ಹೊಸ ಆಲೋಚನೆಗಳೊಂದಿಗೆ ಪ್ರಾರಂಭಿಸೋಣ.

***

ಡಿ.ವಿ.ಜಿ. ಜನ್ಮ ದಿನದ ನೆನಪು



ಅಕ್ಕಿಯೊಳಗನ್ನವನು ಮೊದಲಾರು ಕಂಡವರು
ಅಕ್ಕರದ ಬರಹಕ್ಕೆ ಮೊದಲಿಗದನಾರು
ಲೆಕ್ಕವಿಟ್ಟಿಲ್ಲ ಜಗ ತನ್ನಾದಿ ಬಂಧುಗಳ
ದಕ್ಕುವುದೆ ಜಸ ನಿನಗೆ ಮಂಕುತಿಮ್ಮ

ಇಳೆಯಿಂದ ಮೊಳಕೆಯೊಗೆವೊಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ

– ಡಿ.ವಿ.ಜಿ.

(ಜನನ ; 17.03.1887)

ಎಣ್ಣೆ ನಿಮ್ದು ಊಟ ನಮ್ದು

– ನಾಗರತ್ನ ಚಂದ್ರಶೇಖರ

ಪ್ರವಾಸ ಪ್ರಿಯರಾದ ನಾವಿಬ್ಬರು ಆಗಾಗ ದೇಶ, ವಿದೇಶಗಳ ಹಲವಾರು ಸ್ಥಳಗಳ ವೀಕ್ಷಣೆಗೆ ಹೋಗುತ್ತಲೇ ಇರುತ್ತೇವೆ. ಈಗೀಗ ಪ್ರವಾಸಗಳು ಪ್ರಯಾಸವಾಗುತ್ತಿದೆ ಎನಿಸಿದಾಗ ಮಗಳ ಒತ್ತಾಯಕ್ಕೆ ಒಂದು ಸಾರಿ ವೈದ್ಯರ ಬಳಿ ಹೋದೆವು ಪೂರ್ತಿ ಚೆಕಪ್ ಮಾಡಿಸಲು.

"ಮೇಡಂ, ನೀವು 10 ಕೆಜಿನಾದ್ರೂ ತೂಕ ಇಳಿಸಿಕೊಳ್ಳಬೇಕು. ನಿಮ್ಮ ಕಾಲು ನೋವು ಕೂಡ ಆಗ ತನ್ನಂತಾನೆ ಕಡಿಮೆಯಾಗುತ್ತೆ"

ಈ ಮಾತುಗಳು ಕಳೆದ ಹತ್ತು ವರ್ಷಗಳಿಂದ ಡಯಟೀಷಿಯನ್ ಹೇಳುತ್ತಲೇ ಇದ್ದಾರೆ. ತೂಕ ಮಾತ್ರ 100 ಗ್ರಾಂ ಹೆಚ್ಚೂ ಆಗಲ್ಲ. 100 ಗ್ರಾಂ ಕಡಿಮೆಯೂ ಆಗಲ್ಲ. ಜಾಸ್ತಿ ವಾಕಿಂಗ್, ರನ್ನಿಂಗ್, ಸ್ವಿಮ್ಮಿಂಗ್ ಇವೆಲ್ಲ ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾವೆ. ಹಾಗಾಗಿ ಎಲ್ಲಿಂದ 10 ಕೆಜಿಯನ್ನು ತೆಗೆದುಹಾಕುವುದು ಎನ್ನುವುದೇ ಯಕ್ಷಪ್ರಶ್ನೆ.

"ನಾನು ಎಣ್ಣೆ, ಬೆಣ್ಣೆ ಅಂತ ಏನೂ ತಿನ್ನೋದಿಲ್ಲ ಡಾಕ್ಟರ್. ನೆತ್ತಿಗೂ ಎಣ್ಣೆ ಹಾಕೋಲ್ಲ. ಅಮೆರಿಕದಲ್ಲಿ ಆರು ತಿಂಗಳಿದ್ದರೂ ನ್ಯೂ ಇಯರ್ ಪಾರ್ಟಿಗೂ ಹೋಗ್ಲಿಲ್ಲ ನಾವು. ಅಲ್ವೇನ್ರಿ?"

ಯಜಮಾನರು 'ಹೌದೌದು' ಎಂದು ತಲೆ ಆಡಿಸಿದರು. ಆ ಡಾಕ್ಟರಿಗೆ ಏನು ಗೊತ್ತು? ನಮ್ಮನೇಲಿ ಎಷ್ಟ್ ತರ ಎಣ್ಣೆ ಬಾಟಲ್‌ಗಳಿವೆ ಅಂತ! ನಾವು ಎಲ್ಲೇ ಪ್ರವಾಸ ಹೋದ್ರೂ ಗುಡಿ, ಗೋಪುರಗಳನ್ನೆಲ್ಲಾ ನೋಡಿ ಆದಮೇಲೆ ನಮ್ಮನೆಯವರು ನನಗೋಸ್ಕರ ಎಣ್ಣೆ ಬಾಟಲ್‌ಗಳನ್ನು ಹುಡುಕಾಡಿ ಖರೀದಿಸಿ ತರುತ್ತಾರೆ. "ಇದೇನ್ರಿ ನಾಗರತ್ನ, ನೀವು ಎಣ್ಣೆ ಹಾಕೋಕೆ ಯಾವಾಗ ಶುರು ಮಾಡ್ಕೊಂಡ್ರಿ? ಅದು ಪಾಪ ನಿಮ್ ಗಂಡ ಎಷ್ಟು ಒಳ್ಳೆಯವರು. ಹೆಂಡ್ತಿಗಾಗಿ ಎಣ್ಣೆ ಹುಡುಕಿಕೊಂಡು ಹೋಗಿ ತರ್ತಾರೆ ಅಂತೀರಾ"

"ಹ. ಹ. ಹ.ನೀವು ಈ ಪ್ರಶ್ನೆಯನ್ನು ನನಗೆ ಕೇಳಬಹುದು. ನಾವು ಆಸ್ಟ್ರೇಲಿಯಾಗೆ ಹೋದಾಗ ಆಸ್ಟ್ರಿಚ್ ಪಕ್ಷಿಯ ಎಣ್ಣೆ, ಅಸ್ಸಾಂ–ಮಧ್ಯಪ್ರದೇಶಗಳ ಪ್ರವಾಸಗಳಲ್ಲಿ ಅಲ್ಲಿಯ ವಿಶೇಷ ಆಯುರ್ವೇದಿಕ್ ನೋವಿನ ಎಣ್ಣೆ, ಇವನ್ನೆಲ್ಲ ತುಂಬಾ ಶ್ರದ್ಧೆ ಪ್ರೀತಿಯಿಂದ ಹುಡುಕಿ ನನ್ನ ಗಂಟು ನೋವಿನ ಸಂಧಿವಾತಕ್ಕೆ ತಂದು ಕೊಡುತ್ತಾರೆ." ಹೀಗಾಗಿ ಮನೆಯಲ್ಲಿರುವಾಗ ನನ್ನ ಕೈ ತುಂಬಾ ಎಣ್ಣೆ, ಕಾಲ್ ತುಂಬಾ ಎಣ್ಣೆ ಹಾಕಿ ಮಸಾಜ್ ಮಾಡಿ ಮಾಡಿ ಬಾಟಲ್ ಖಾಲಿ ಆದ್ರೂ ನೋವು ಮಾತ್ರ ಹಾಗೆ ಇರುತ್ತೆ. ಇರಲಿ, ನನ್ನ ಎಣೆ ಇಲ್ಲದ ಎಣ್ಣೆ ಕಥೆ.

ಒಮ್ಮೆ ನಮ್ಮ ಲೇಡೀಸ್ ಕ್ಲಬ್‌ನಲ್ಲಿ ಎಣ್ಣೆ ಕಂಪನಿಯ ಪ್ರಾಯೋಜಿತ ಕಾರ್ಯಕ್ರಮ ಇತ್ತು. ಶೇಕಡ 20 ಡಿಸ್ಕೌಂಟ್ ಬೇರೆ. ಬಂದಿದ್ದ ಎಲ್ಲಾ ಮಹಿಳಾಮಣಿಗಳು ಎರಡು ಮೂರು ಬಾಟಲ್ ಖರೀದಿಸಿದ್ದೇ ಖರೀದಿಸಿದ್ದು. ಆಟೋಗೆ ದುಡ್ಡು ಉಳಿಸಿಕೊಂಡು ನಾನು ಕೂಡ ಎರಡು ಎಣ್ಣೆ ಬಾಟಲ್ ತೆಗೆದುಕೊಂಡೆ ಅನ್ನಿ. ಬಿಟ್ಟಿ ಭಾಗ್ಯ ಬಂದಮೇಲೆ ಮಹಿಳೆಯರೆಲ್ಲ ತುಂಬಾ ಸಂತೋಷವಾಗಿದ್ದಾರಂತೆ. ಆದರೆ ತೀರ್ಥರೂಪರೆಲ್ಲ ವೈನ್ ಶಾಪ್ ಕಡೆ ಹೋಗಕ್ಕೆ ಹೆದರುತ್ತಾರಂತೆ. ಕೈಗೆ ಸಿಗದೇ ಆಕಾಶಕ್ಕೆ ಏರಿದ ಬೆಲೆಗಳಿಂದ.

"ತಿನ್ನೋಕು, ಕುಡಿಯೋಕು ಎರಡಕ್ಕೂ ಎಣ್ಣೆ ಹೊಂದಿಸದಿದ್ದರೆ ಸಂಸಾರದಲ್ಲಿ ಕಿರಿಕಿರಿ ಅಮ್ಮಾವ್ರೆ" ಅಂತಾಳೆ ತರಕಾರಿ ಮಾರೋ ಲಕ್ಷಮ್ಮ. ಅಡಿಗೆ ಎಣ್ಣೆಯಲ್ಲಿ ಉಳಿತಾಯ ಮಾಡಿದರೆ ಆರೋಗ್ಯ ಸುಧಾರಿಸುತ್ತೆ ಅಂತ ಎಣ್ಣೆ ಬೆಣ್ಣೆ ಇಲ್ಲದ ಮಸಾಲ ದೋಸೆಯ ಸ್ಥಿತಿ ನೆನೆಸಿಕೊಳ್ಳಿ. ಗಂಡ ಸಂಜೆ ಕೆಲಸ ಮುಗಿಸಿ ಮನೆಗೆ ಬರುವಾಗ ಶಾಲೆ ಮುಗಿಸಿ ಬರುವ ಮಕ್ಕಳಿಗೆ ಬಿಸಿಬಿಸಿ ವಡೆ, ಪಕೋಡ, ಬಜ್ಜಿ, ಬೋಂಡಾ ಅಂತ ಆಗಾಗ ಕೊಡ್ತಾ ಇದ್ರೆ ಪಿಜ್ಜ, ಬರ್ಗರ್, ಅಂತ ಜಮಾಟಾನೋ ಇನ್ನೊಂದು ಬಂದೆರಗುವ ಅಪಾಯ ಕೂಡ ಇರಲ್ಲ.

ಈ ಎಣ್ಣೆ ಸಮಾಚಾರ ಮುಗ್ಸೋಕೆ ಮುಂಚೆ ಒಂದು ವಿಶೇಷ ಸುದ್ದಿ ಹೇಳ್ಲೇ ಬೇಕು. ಕಳೆದ ವಾರ ಉಜ್ಜಯಿನಿ, ಇಂದೂರ, ಭೋಪಾಲ್ ಎಂದು ಮಧ್ಯಪ್ರದೇಶ ಪ್ರವಾಸ ಹೋಗಿದ್ದೆವು. ಹೂ, ಹಣ್ಣು ಕಾಯಿಗಳ ಬುಟ್ಟಿಯನ್ನು ಅರ್ಚನೆಗಾಗಿ ಮಹಾಕಾಳೇಶ್ವರ ಓಂಕಾರೇಶ್ವರ ಬಡ ಮಹಾದೇವ ಇತ್ಯಾದಿ ದೇವಸ್ಥಾನಗಳ ಮುಂದೆ ಮಾರಾಟ ಮಾಡುವುದು ಸಾಮಾನ್ಯ. ಆದರೆ ಉಜ್ಜಯಿನಿಯ ಕಾಲಭೈರವೇಶ್ವರನಿಗೆ ಮಾತ್ರ ಹೂವು ಹಣ್ಣುಗಳ ಮಧ್ಯೆ ಕ್ವಾಟರ್ ಬಾಟಲ್ ಮದ್ಯದ ಬಾಟಲಿಯನ್ನು ಬುಟ್ಟಿಯಲ್ಲಿ ಇಟ್ಟು ಭಕ್ತರು ದೇವರಿಗೆ ಅರ್ಪಿಸುತ್ತಾರೆ. ಬೇಡರ ಕಣ್ಣಪ್ಪ ಈಶ್ವರನಿಗೆ ಮಾಂಸವನ್ನೇ ನೈವೇದ್ಯ ಮಾಡಿದ್ದ ಎಂದು ಕೇಳಿರುವ ನಮಗೆ, ಇಲ್ಲಿ ಈ ಕಾಲಭೈರವ ರಮ್ಮು, ಜಿನ್ನು, ವೈನು, ವಿಸ್ಕಿ, ಓಡ್ಕ ಅಂತ ಮದ್ಯವನ್ನು ಭಕ್ತರು ನೀಡಿದರೆ ಯಾವ ಸಂಕೋಚವೂ ಇಲ್ಲದೆ ಗುಳುಂ ಮಾಡುತ್ತಾನೆ. ಮದ್ಯಪ್ರಿಯ ನಮ್ಮ ಈ ಪರಶಿವನ ಪ್ರೀತ್ಯಾರ್ಥ ದೇವಸ್ಥಾನದ ಸುತ್ತಲೂ ಹತ್ತಾರು ಲಿಕ್ಕರ್ ಶಾಪ್‌ಗಳು ಸದಾ ತೆರೆದಿರುತ್ತವೆ. ಗುಂಡುಪ್ರಿಯನ ಕೃಪೆಗಾಗಿ ಭಕ್ತರ ಬಾಟಲಿಯಿಂದ ಸ್ವಲ್ಪ ಭಾಗ ಪೂಜಾರಿಯವರ ಬಳಿ ಇರುವ ಚೊಂಬಿಗೆ ಸುರಿದುಕೊಂಡು ಉಳಿದದ್ದು ಪ್ರಸಾದವಾಗಿ ಭಕ್ತರಿಗೆ ವಾಪಸ್ಸು ಕೊಡುತ್ತಾರೆ. ಹಾಲು, ನೀರು, ಎಳನೀರುಗಳನ್ನು ಸಾಮಾನ್ಯವಾಗಿ ದೇವರಿಗೆ ಅಭಿಷೇಕ ಮಾಡುತ್ತಾರೆ. ಆದರೆ ಮದ್ಯವನ್ನು? ಈ ವಿಚಿತ್ರವಾದರೂ ನೂರಕ್ಕೆ ನೂರು ಸತ್ಯವಾದ ಸಂಗತಿಯನ್ನು ಕಣ್ಣಾರೆ ನಾನು ನೋಡ ಬಯಸಿ ಅದನ್ನು ವಿಡಿಯೋ ಕೂಡ ಮಾಡಿಕೊಂಡೆ. ನಮ್ಮ ಟ್ರಾವೆಲ್ಸ್ ಗುಂಪಿನಲ್ಲಿ ಇದ್ದವರು ಅರ್ಪಿಸಿದ ಮದ್ಯವನ್ನು ಪೂಜಾರಿ ಒಂದು ತಟ್ಟೆಗೆ ಸುರಿದುಕೊಂಡು ಕಾಲಭೈರವನ ತೆರೆದ ದೊಡ್ಡ ಬಾಯಿಗೆ ಸುರಿದಾಗ ಏನ್ ಆಶ್ಚರ್ಯ? ಆ ಸದಾಶಿವ ಗುಳುಂ ಎಂದು ತೃಪ್ತಿಯಿಂದ, ಸಂತೋಷದಿಂದ ನುಂಗೇ ಬಿಡುವುದೇ!

ಹೀಗೆ ಭಕ್ತರು ನೀಡುವ ಎಲ್ಲಾ ಬಗೆಯ ಕಾಕ್ಟೇಲ್ ಗುಂಡು, ಆಗಾಗ ಅವನ ಹೊಟ್ಟೆಗೆ ಸೇರಿದರೂ ಅವನು ಮಾತ್ರ ಸ್ಥಿತಪ್ರಜ್ಞನಂತೆ ತೂರಾಡದೇ, ವಾಕರಿಸದೆ, ಗಲಾಟೆಯೂ ಮಾಡದೆ ಸುಮ್ಮನೆ ಕುಳಿತಿರುತ್ತಾನೆ. ಹೀಗೆ ಕುಡಿದದ್ದೆಲ್ಲ ಎಲ್ಲಿ ಹೋಗುವುದೆಂಬ ರಹಸ್ಯವನ್ನು ಇದುವರೆಗೂ ಯಾರಿಗೂ ಭೇದಿಸಲಾಗಲಿಲ್ಲವೆಂದು ಹೇಳುತ್ತಾರೆ.

ಆ ನೀಲಕಂಠ, ವಿಷಕಂಠನ ಒಡಲಲ್ಲಿ ಮದ್ಯದ ಹೊಳೆಯೇ ಹರಿದರೂ ಭೂಕಂಪ, ಪ್ರವಾಹ ಆಗಿಲ್ಲದಿರುವುದು ಭಕ್ತರ ಪುಣ್ಯ. ಗುಂಡುಪ್ರಿಯರು ಇಲ್ಲಿ ಯಾವಾಗಲೂ ಈ ದೇವರ ಆಶೀರ್ವಾದಕ್ಕಾಗಿ ದೊಡ್ಡ ಸರತಿ ಸಾಲಿನಲ್ಲಿ ನಿಂತಿರುತ್ತಾರೆ.

ಪ್ರವಾಸ ಮುಗಿಸಿ ಬಂದ ಮೇಲೆ ಸಧ್ಯ ಯಾರೂ ಎಣ್ಣೆ ನಿಮ್ದು, ಊಟ ನಮ್ದು, ಅಂತ ಕೇಳಲಿಲ್ಲ!

***

ಭಾಗ–1

ವೆಂಕಿ ಅಂತಾಳ !!!!

– ರೇಣುಕಾ ದೇಸಾಯಿ

“ಬರ್ರಿ... ಬರ್ರೀ... ಸಂತೋಷ ಆಯ್ತು ನೋಡು, ನೀವೆಲ್ಲ ಬಂದಿದ್ದು” ಹೀಗಂತ ಮನೆ ಯಜಮಾನೀ ಖರೇನ ಸಂತೋಷದಿಂದ ಬರಮಾಡಿಕೊಂಡ್ರು, ಲಕ್ಷಣವಾದ ಮುತ್ತೈದೆ, ವಯಸ್ಸಾದರೂ ಮಾರಿ ಮ್ಯಾಲಿನ್ ಕಳೆ ಒಂಚೂರು ಕಡಿಮ್ಯಾಗಿಲ್ಲ ಅನ್ನಿಸ್ತು. ನಮಗರ ಖುಷಿ, ಈಗಿನ ದಿನ್ದಾಗ ಯಾರ್ ಕರೀತಾರ ಹಿಂಗ, ಎಲ್ಲರೂ ಮಾರಿ ಸೊಟ್ಟ ಮಾಡಹರ.

“ಸ್ವಲ್ಪ ಚಾ ಕುಡೀರಿ, ಚಾ ಕುಡಿತೀರ ಕಾಫಿ ಕುಡಿತಿರ? ಹಚ್ಚಿಟ್ಟಿದ್ದು ಅವಲಕ್ಕಿ ಅವ, ಸ್ವಲ್ಪ ಬಾಯಾಗ ಹೊಕ್ಕೊಳ್ರಲ”

“ಅಯ್ಯ, ಅವರು ಕೈಕಾಲ ಮಾರಿ ತೊಳಲೀ, ಅಷ್ಟ್ ಯಾಕ ಅವಸರಾ ಮಾಡ್ಲಿಕಹತ್ತಿರೀ” ಎಲ್ಲಾರ ಎದುರ ಯಜಮಾನನಿಗೆ ಯಜಮಾನಿ ಕುಟುಕಿದ್ರ.

ನಾವ್ ಇವ್ರನ ವೆಂಕಟೇಶ ಪದ್ಮಾವತಿ ಅನ್ನೋಣ. ಯಾಕಂದ್ರ ಮನಿ ಒಡ್ತಿ ಭಾಳ ಛಂದ, ತಿದ್ದಿದ ಗೌರಿ ತರ ಇದ್ದಾಳ. ಗಂಡ ನೋಡಿದ್ರ ಕರ್ರಗ ತಿರುಪತಿ ತಿಮ್ಮಪ್ಪನಂಗ ಇದ್ದಾನ.

ಇಬ್ರು ಮಕ್ಕಳು, ಇಬ್ರ ಸೋಸೇರು, ಇಬ್ರು ಮೊಮ್ಮಕ್ಕಳು. ಹಿಂಗಾಗಿ ಮನ್ಯಾಗ ಕೆಳಗ, ಮ್ಯಾಲ ಅವರ ಅದಾರ.

ನಾವು ಮಾರಿ ತೊಳ್ಕೊಂಡ್ ಫ್ರೆಷ್ ಆಗೋದರಲ್ಲೇ ಮ್ಯಾಲಿನ್ ಮನೆಯಿಂದ ರುಚಿ ರುಚಿ ಹಚ್ಚಿದ ಅವಲಕ್ಕಿ ಸೊಸೆ ತಂದುಕೊಟ್ಲ, ನಾವು ನಾಲ್ಕೂ ಜನಕ್ಕ, ಪ್ಲೇಟ್ನಾಗ ಅವಲಕ್ಕಿ ಹಾಕಿ, ‘ತಗೋರಿ, ಕಾಫಿ ತರ್ತೀನಿ’ ಅನ್ಕೊತ ನಮ್ಮ ಪದ್ಮಾವತಿ ಒಳಗ್ಹೋದ್ರಾ,

“ಏ.. ಇಕಿನ, ಅವರ್ಗೊಂದಿಷ್ಟು ಸೇವು ಹಾಕಲಾ ಬಾಳಾ ರುಚಿಯಾಗ್ತದ” ಕುಂತಲ್ಲಿಂದನ ಹೆಂಡ್ತಿಗೆ ಕೂಗ್ಯಾಕಿದ್ರ. ರುಚಿ ರುಚಿ ಅವಲಕ್ಕಿ ಸೇವು ಕಾಫಿ ಸೇವನೆ ಆಯ್ತಾ.

“ನೋಡಪಾ, ಸಾಡೆನೌವಿಗೆ ಇನ್ನೊಬ್ಬ ಆಟೊದೋನ್ ಜೊತೆ ಮನೆ ಹತ್ರ ಬಂದ್ಬಿಡು, ರಾಣಿ ಚೆನ್ನಮ್ಮ ಗಾಡಿಗೆ ಹೋಗದದ " ರಾತ್ರಿ ಹೋಗಾಕ ವ್ಯವಸ್ಥೆ ಮಾಡ್ಲಿಕ್ಕೆ ಹತ್ತಿದ್ರು ಪದ್ಮಕ್ಕ.

“ಏ ಪೂರ್ಣಿಮಾ ಲಘೂನ ನಡಿ, ನಿನ್ನ ಬಳ ಬದ್ಲು ಮಾಡ್ಕೊಂಡ್ ಬರೋಣ”

“ನೀವು ಟಿವಿ ನೋಡ್ಕೋಂತ ಕುಂತಿರ್ರಿ, ನಾವ್ಷಿಂಗ್ ಹೋಗಿ ಹಿಂಗ್ಬರ್ತೆವಿ. ಬೆಂಗಳೂರ್ದಾಗ ಗಟ್ಟಿ ಬಳ ಸಿಗಂಗಿಲ್ಲ, ಇಲ್ಲಿ ಬಳ ಕೊಂಡ್ಕಂಡರ ಎರಡ್ ವರ್ಷ ಚಿಂತಿರಾಂಗಿಲ್ಲ.” ಎಂದ ಹೇಳದೋರನ ಅತ್ತಿಗೆ ನಾದ್ನಿ ಬಳ ತರಾಕ ಹೊಂಟ್ರು.

ಪೂರ್ಣಿಮಾ, ಪದ್ಮಾವತಿ ಅತ್ತಿಗೆ ನಾದ್ನಿ, ನಾನು, ಪೂರ್ಣಿಮಾ, ಅನಸುಯಕ್ಕ, ವಸಂತಕ್ಕ ಬೆಂಗಳೂರಿಂದ ಹುಬ್ಬಳ್ಳಿಗೆ ಹೋಗಿದ್ವಿ, ಒಂದು ಕಾನ್ಫರೆನ್ಸ್‌ಗೆ, ಬರುವಾಗ ಪೂರ್ಣಿಮಾ ಹೇಳದ್ಲು, ‘ಬರೋ ದಿನಾ ನನ್ನ ಗಂಡನ ಅಕ್ಕನ ಮನೆಗೆ

ಹೋಗೋಣ. ರಾತ್ರಿ 10:30ಕ್ಕ ರಾಣಿ ಚೆನ್ನಮ್ಮ ಅದ, ಅಲ್ಲಿವರ್ಗು ಅವರ ಮನ್ಯಾಗ ಇದ್ದು ಊಟ ಮಾಡ್ಕೊಂಡು ಬರೋಣ' ಅಂತ.

ಈಗಿನ ಕಾಲ್ದಾಗ ನಾದಿನಿ ಜೊತೆ ಬರೋ ಮೂರು ಮಂದಿ ಗೆಳತ್ಯಾರ್ನ ಆದರ ಮಾಡೋರು ಯಾರಿರ್ತಾರ ಹೇಳ್ರಿ?

"ಬ್ಯಾಸ್ರ ಆಗ್ತದ, ಟಿವಿ ನೋಡ್ರಿ." ಅಂತ ಟಿವಿ ಹಚ್ಚಿ ಹೋದ್ರು ಅತ್ತಿಗೆ ನಾದ್ನಿ.

ಎಲ್‌ಕೆ ಅಡ್ವಾಣಿಯವರ್ಗೆ ಭಾರತ ರತ್ನ ಸಿಕ್ಕ ವಿಷಯ ಸಂಭ್ರಮದಿಂದ ಹೇಳ್ತಾ ಇದ್ರು ಟಿವಿಯೋರು. ನಮ್ಮೊಂದಿಗೆ ಕುಳಿತಿದ್ದ ವೆಂಕಟೇಶ, ಟಿವ್ಯಾಗ ಬರೋ ಒಂದೊಂದು ವಿಷಯಕ್ಕೂ ಒಂದೊಂದು ಇಷ್ಟು ಮಾತಾಡುತಿದ್ರು. ಅದೆಷ್ಟು ಅತಿಥಿಗಳೊಂದಿಗೆ ಮಾತಾಡೋ ಸಂಭ್ರಮ ಅವರ್ಗೆ!!!

ನನ್ನೊಂದಿಗೆ ಇದ್ದ ವಸಂತಕ್ಕನಿಗೆ ಧಾರ್ವಾಡದಾಗ ಇದ್ದು ರೂಢಿ ಇತ್ತು, ಹೀಗಾಗಿ ಅವರು ಈ ಮನಿ ಯಜಮಾನ ಮಾತಾಡೊ ಉತ್ತರ ಕನ್ನಡ್ ಮಾತು ತಿಳ್ಕೊಂಡು ತಮ್ಮೊವ ಒಂದಿಷ್ಟು ಮಾತು ಸೇರಿಸಿದ್ರು, ಆದ್ರ ಪಾಪ ಅನ್ಸುಯಕ್ಕಗ ನಮ್ಮ ಧಾರವಾಡ ಮಂದಿ ಫಾಸ್ಟ್ ಕನ್ನಡ ಅರ್ಥ ಆಗವಲ್ದು. ಆದರ, ರಿಟೈರ್ಡ್ ಪೋಸ್ಟ್ ಮಾಸ್ಟರ್ ಆದ ವೆಂಕಟೇಶ್ ತಮ್ಮ ಅಧ್ಯಯನ, ಅಡ್ಡಾಟದ ಅನುಭವದಿಂದ ಪ್ರತಿ ಮಾತಿಗೂ ಮಾತು ಸೇರಿಸೋರು. ನನಗರ ಆರ ವರ್ಷ ಕಾಲೇಜ್ ಕಲಿಯಾಕ ಹುಬ್ಬಳ್ಳಿಯಲ್ಲಿದ್ದು ಅನುಭವ ಇತ್ತ, ಹೀಗಾಗಿ ನಾನು ಅವರ ಸ್ಪೀಡ್ಗೆ ಮಾತಾಡ್ದೆ.

ಮಧ್ಯಕ್ಕ, ಅವ್ರ ಸೊಸೆ ಮ್ಯಾಲಿಂದ ಬಂದು, "ಅವರಿನ್ನು ಬರ್ಲಿಲ್ಲ ಏನ್? ಊಟ ರೆಡಿ ಅದ, ಅವರಿಬ್ಬರೂ ಬರೋ ಹೊತ್ತಿಗೆ ಮ್ಯಾಲ್ ಬರ್ರಿ, ಇವರಿದ್ರೆ ನಿಮಿಗ್ ಚಲೋ ಕಂಪನಿ ಕೊಡ್ತಾರ. ಬ್ಯಾಸರ ಆಗಂಗಿಲ್ ನೋಡ್ರಿ ನಿಮ್ಗ" ಎಂದು ಹೇಳಿದ್ದಕೀನ, ನಮ್ ಜೊತೆ ಎರಡು ಮಿನಿಟ್ ಹರಟಿ ಹೊಡೆದು ಹೋದ್ಲು.

ಅರ್ಧ ಗಂಟೆ ಆಗದ್ರಾಗ ಅತ್ತಿಗೆ ನಾದ್ನಿ ಸಂತೋಷದಾಗ್ ಬಂದ್ರು. ಅವ್ರ ಮಾರಿ ನೋಡಿದ್ರೆ ಗೊತ್ತಾಗ್ತಿತ್ತು ಅವರಿಗೆ ಚಂದದ ಬಳಿ ಸಿಕ್ಕಾವಂತ.

ಎಲ್ಲರೂ ಸೇರಿ ಮ್ಯಾಲೆ ಊಟಕ್ಕೋದ್ವಿ, ಸರಳ ಮಾತು ದೊಡ್ಡ ವಿಚಾರ ಅನ್ನೋ ಹಂಗಿತ್ತು ಊಟದ ತಯಾರಿ. ನೆಲದ ಮೇಲೆ ತಾಟ್ ಹಾಕಿ, "ಎಲ್ಲರೂ ನೆಲ್ದ ಮ್ಯಾಲ ಕೂತ್ಕೋತೀರೋ ಇಲ್ಲ?" ಅಂತ ಕೇಳಿದ್ರು ನಮ್ಮ ಪದ್ಮಕ್ಕ. ನೆಲ್ದ ಮ್ಯಾಲ ಚಕ್ಕಮಕ್ಕ ಹಾಕೊಂಡು ಕೂತು ಭಾಳಾ ದಿನ ಆಗಿತ್ತ.

ಸೊಸೆ ಒಂದೊಂದ ಅಡಗಿ ಇಟ್ಟಾಂಗ, ಅತ್ತಿ ಒಂದೊಂದ ಬಡ್ಸಾಕ ಹತ್ತಿದ್ರು ಟೊಮೆಟೊ, ಸೊಪ್ಪಿನ ಪಚ್ಚಿ, ಶೇಂಗಾ ಚಟ್ನಿ, ಮೊಸರು, ರಂಜಕ, ಜೋಳದ ಭಕ್ರಿ, ಚಪ್ಪರದವರಿ ಕಾಯಿ ಪಲ್ಯ ಜೊತೆ ಜೊತೆಗೆ ಹರಟಿ ನಡದ್ದ ಇತ್ತು.

"ನಿಮ್ಮನೇರ್ನ ಕರೀರಿ, ಅವರು ಒಬ್ಬರಾ ಇದ್ದಾರ ಕೆಳಗ" ನಾವ ಊಟಕ್ಕ ಕುಂತೀವಿ ಅನ್ನೋ ಮುಜುಗರ ನಮಗ.
"ಅಯ್ಯೋ ನಮ್ಮನೆ ಗಂಡಸರು ಹಂಗೆಲ್‌ಬರ್ತಾರ, ಹನ್ನೊಂದ್ ಹೊಡೆದ ಮ್ಯಾಲ ಬರ್ತಾರ, ಅವರಿಗೆ ಹೊತ್ತಿಲ್ಲ ಗೊತ್ತಿಲ್ಲ. ನನ್ ಮಗ ಅಂತೂ ಗೆಳ್ಯಾರು ಅಂತ ಈಗ ಹೊರಗ ಹೋಗ್ಯಾನ, ಅವನು ಬಂದಾಗ, ನಿಜ. ನಮ್ಮನೆ ಗಂಡಸರಿಗೆ ನಮ್ ಕಷ್ಟ ಒಂದಿಷ್ಟು ಅರ್ಥ ಆಗವಲ್ದಾಗೆದ ನೋಡ್ರಿ"

ಆಗ ನಂಗ ಮಾಸ್ಟರ್ ಹಿರಣ್ಣಯ್ಯ ಹೇಳೋ ಗಂಡನ್ನ ವಿವರ ನೆನಪಿಗೆ ಬಂತು. ಪಂಜಿ ಚುಂಗ ಹಿಡಿದು ದಾಪಗಾಲ ಹಾಕುತ್ತಾ ಗಂಭೀರವಾಗಿ ಮುಂದೆ ಮುಂದೆ ಹೋಗ್ತಿದ್ರ, ಹೆಂಡ್ತಿ ಕಂಕ್ಕಾಗ ಒಂದು ಮಗು ಕೈಯಾಗ್ ಒಂದ್ ಚೀಲ ಹಿಡ್ಕೊಂಡು ಹಿಂದ್ಗಿಂದ ಬರತಿದ್ರ ಅದು ಹೊಳ ಆಕಡಿ ಸಂಸಾರ. ಮುಂಗೈಲೊಂದ್ ಮಗು ಬಲಗೈಯಾಗ ಕಾಯಿಪಲ್ಯ ಚೀಲ ಹಿಡಿದು ನಡೆಯೊ ಗಂಡಸ ಜೋಡಿನ ಲಿಪ್‌ಸ್ಟಿಕ್ ಹಾಕಿ, ಒಂದೊಳ್ಳೆ ಚಂದನ ಡ್ರೆಸ್ ಮಾಡ್ಕೊಂಡು ಹೆಂಡ್ತಿ ಹೋಗ್ತಾ ಇದ್ರ, ಅದು ಹೊಳ ಇಕಡಿ ಸಂಸಾರ, ಅಂದದ್ಕ, ಅವರ ಸೊಸೆ ಗೊಳ್ ಅಂತ ದೊಡ್ಡಕ ನಕ್ಕು, 'ನಮಗೆಲ್ಲಿವ್ವಾ ಅಂತ ಭಾಗ್ಯ' ಅಂತಾಳ.

ಬಿವಿಬಿ ಕಾಲೇಜ್ನ್ಯಾಗ ಇಂಜಿನಿಯರಿಂಗ್ ಓದಿದ ಹುಡುಗಿ ಆದ್ರೂ ಪಾಪ ತನಗ ಅಂತಾ ಸೌಲತ್ತು ಇಲ್ಲಾಂತ ಬ್ಯಾಸರಾ ಮಾಡ್ಕೊಲ್ಲದ ನಕ್ಕೊಂತ ಅದಾಳ, ಜೊತೆಗೆ Successful Entrepreneur ಆಗ್ಯಾಳ.

(ಮುಂದುವರೆಯುವದು..)

***

ಪು.ತಿ.ನ. – ಜನ್ಮ ದಿನದ ನೆನಪು



ಕೃಷ್ಣನ ಕೊಳಲಿನ ಕರೆ

ಕೃಷ್ಣನ ಕೊಳಲಿನ ಕರೆ,
ಕೃಷ್ಣನ ಕೊಳಲಿನ ಕರೆ,
ಆಲಿಸು ಕೃಷ್ಣನ ಕೊಳಲಿನ ಕರೆ,
ಆಲಿಸು ಕೃಷ್ಣನ ಕೊಳಲಿನ ಕರೆ
ತ್ವರೆ, ತ್ವರೆ
ಕೃಷ್ಣನ ಕೊಳಲಿನ ಕರೆ

ತೊಟ್ಟಲಿನ ಹಸುಗೂಸ ಮರೆ, ಮರೆ
ಪಕ್ಕದ ಗಂಡನ ತೊರೆ, ತೊರೆ
ಬೃಂದಾವನಕೆ ತ್ವರೆ, ತ್ವರೆ
ಕೃಷ್ಣನ ಕೊಳಲಿನ ಕರೆ
ಆಲಿಸು, ಕೃಷ್ಣನ ಕೊಳಲಿನ ಕರೆ

ಮುತ್ತಿನ ಕುಪ್ಪುಸ ಹರಳೋಲೆ
ಮಲ್ಲಿಗೆ ಜಾಜಿ ಮುಡಿಮಾಲೆ
ಹೆಜ್ಜೆಯ ನೇವುರ ಗೆಜ್ಜೆಯ ಪಿಲ್ಲಿ
ಮರೆತೇ ಬಂದೆವೆ ಮನೆಯಲ್ಲೇ ಸಖಿ

ಕೃಷ್ಣನ ಕೊಳಲಿನ ಕರೆ
ಆಲಿಸು, ಕೃಷ್ಣನ ಕೊಳಲಿನ ಕರೆ

ಹೊತ್ತಾರೆ ಹೊರೆಗೆಲಸ, ಮಿಕ್ಕರೆ ಮಿಗಲಿ
ಪಕ್ಕದ ನೆರೆಹೊರೆ ನಕ್ಕರೆ ನಗಲಿ

ಬೃಂದಾವನದೋಳ್ ಆಲಿಸಿದೋ ಮುರಳೀ
ಕೃಷ್ಣನ ಕೊಳಲಿನ ಕರೆ
ಆಲಿಸು, ಕೃಷ್ಣನ ಕೊಳಲಿನ ಕರೆ

ನೇಸರ ಕಿರಣ ಆಗಸದಿರುಳ ಒರೆಯಿಸುವ ರೀತಿ
ಕೇಳೀಧರನ ಮುರಳೀಮಾಯೆಗೆ ಮನ ಭಿತ್ತಿತೆ ಭೀತಿ
ಇನ್ನಾಯಿತೆ ಪ್ರೀತಿ, ಇನ್ನಾಯಿತೆ ಪ್ರೀತಿ
ಕೃಷ್ಣನ ಕೊಳಲಿನ ಕರೆ
ಆಲಿಸು, ಕೃಷ್ಣನ ಕೊಳಲಿನ ಕರೆ

– ಪು.ತಿ.ನರಸಿಂಹಾಚಾರ್
(ಜನನ: 17.03.1905)

ಕಿಲಾಡಿ ಕತೆಗಳು

ಜಂಬೂನಾಗಯ್ಯನ ಸೊಸೆ

– ವಿಠ್ಠಲ ಇಜೇರಿ

ಮಾನವ ಬೆಳೆದು ಬಂದ ಸಂದರ್ಭ, ಸಮಾಜದ ಹಿನ್ನೆಲೆ, ಅವನ ನಡವಳಿಕೆ, ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿ, ಹಾಗೂ ಪ್ರಕೃತಿಯೊಂದಿಗೆ ಅವನು ಹೊಂದಿದ ಬುದ್ಧಿ ಭಾವಗಳ ಸಂಬಂಧ, ಇವೆಲ್ಲವುಗಳ ಛಾಪು ನಮಗೆ ಜಾನಪದ ಸಾಹಿತ್ಯದಲ್ಲಿ ಸಿಗುತ್ತದೆ. ಜಗತ್ತಿನ ಬಹುಪಾಲು ಸಾಹಿತ್ಯಕ್ಕೆ ಮೂಲ ಜಾನಪದವೇ ಆಗಿದೆ. ಅದರಲ್ಲೂ ಜಾನಪದದ ಒಂದೊಂದು ಕಥೆಯೂ ಒಂದೊಂದು ಕವನದಂತಿವೆ. ಓದುಗರನ್ನು ಸೆರೆ ಹಿಡಿಯಬಲ್ಲ ಸಾಹಿತ್ಯಕ ಮತ್ತು ಸಾಂಸ್ಕತಿಕ ಅಂಶಗಳನ್ನು ಹೊಂದಿವೆ. ಯಾವುದೇ ಪ್ರಬಲ ಮನೋರಂಜನೆ ಮಾರ್ಗಗಳು ಪರಿಚಯವಿಲ್ಲದ ಹಿಂದಿನ ದಿನಗಳಲ್ಲಿ ಅಂದವಾದ ಕತೆಗಳನ್ನು ಕಟ್ಟಿ, ಚಂದದಲ್ಲಿ ಪ್ರಸ್ತುತಪಡಿಸುವ ಕಲೆ ಜಾನಪದರಿಗೆ ಕರಗತವಾಗಿತ್ತು. ಕುತೂಹಲ ಹುಟ್ಟಿಸುವ ಪ್ರಸಂಗಗಳನ್ನು ಸೃಷ್ಟಿಸಿ, ಹಾಸ್ಯ ಮತ್ತು ಉತ್ತಮ ಸಂದೇಶವಿರುವ ಅನೇಕ ಕತೆಗಳು ಪ್ರಚಲಿತ ಇವೆ. ಅಂತಹ ಒಂದು ಕತೆಯನ್ನು ನೋಡೋಣ.

ಒಂದು ಪಟ್ಟಣದಲ್ಲಿ ಒಬ್ಬ ರಾಜ, ಅವನು ಬಲು ರಸಿಕ. ಚಂದ ಚಂದದ ರಾಣಿಯರಿದ್ದರೂ ಅವನಿಗೆ ಸ್ತ್ರೀಯರ ವ್ಯಾಮೋಹ. ಆ ಪಟ್ಟಣದಲ್ಲಿ ಜಂಬುನಾಗಯ್ಯನೆಂಬ ಶೆಟ್ಟಿ. ಅವನಿಗೆ ಏಳು ಜನ ಗಂಡಸು ಮಕ್ಕಳು ಮತ್ತು ಅವರಿಗೆ ಮುದ್ದಾದ ಏಳು ಜನ ಹೆಂಡಂದಿರು. ಒಂದು ದಿನ ಜಂಬೂನಾಗಯ್ಯನ ಮನೆ ಹಸುವಿನ ಕರು ಕತ್ತಿನ ಹಗ್ಗ ಕಳಚಿಕೊಂಡು ಅರಮನೆ ಮುಂದೆ ಓಡಿತು, ನಾಗಯ್ಯನ ಚಿಕ್ಕ ಸೊಸೆ ಓಡಿ ಹೋಗಿ ಅದನ್ನು ಹಿಡಿದು, ಅಲ್ಲೆಲ್ಲೂ ಹಗ್ಗ ಕಾಣದೆ ತನ್ನ ಉದ್ದದ ಜಡೆಯಿಂದ ಅದನ್ನು ಬಂಧಿಸಿ ಮನೆಯತ್ತ ಹೊರಟಳು. ಆ ವೇಳೆಯಲ್ಲಿ ಆಕೆಯ ಸುಂದರವಾದ ಮುಖವನ್ನು ಮತ್ತು ಮಾರುದ್ದದ ಜಡೆಯನ್ನು ಕಂಡ ರಾಜ, ತನ್ನ ಮಂತ್ರಿಗೆ ಆಕೆಯ ಬಗ್ಗೆ ವಿವರ ತಿಳಿದುಕೊಂಡು ಬರಲು ತಿಳಿಸಿದ. ಮಂತ್ರಿ ಆಕೆ ಇದೇ ಪಟ್ಟಣದ ಜಂಬುನಾಗಯ್ಯ ಎಂಬ ಶೆಟ್ಟಿಯ ಕಿರಿಯ ಸೊಸೆ ಎಂದು ಮಾಹಿತಿ ತಂದ.

ಮರುದಿನ ರಾಜ ಆ ಶೆಟ್ಟಿಯನ್ನು ಕರೆಸಿ, "ಶೆಟ್ಟಿಗಳೇ, ನನಗೆ ಕಾಯಿಲೆ. ಹುಲಿ ಹಾಲು ಬೇಕು, ಮೂರು ದಿನಗಳಲ್ಲಿ ಅದಕ್ಕೆ ವ್ಯವಸ್ಥೆ ಮಾಡಿ, ತಪ್ಪಿದಲ್ಲಿ ಶಿಕ್ಷೆ " ಎಂದು ಹೆದರಿಸಿ ಕಳುಹಿದ. ಜಂಬುನಾಗಯ್ಯ "ಮನೆಗೆ ಬಂದು ತಲೆಗೆ ಕೈ ಹೊತ್ತು ಕುಳಿತ. ಚಿಕ್ಕ ಸೊಸೆ ಮಾವನ ಚಿಂತೆ ಅರಿತು, "ಮಾವಯ್ಯ, ಏಳಿ, ನಿಶ್ಚಿಂತೆಯಿಂದ ಊಟ ಮಾಡಿ ಮಲಗಿ, ಬೆಳಗ್ಗೆ ನಾನೆಲ್ಲ ನೋಡಿಕೊಳ್ಳುತ್ತೇನೆ" ಎಂದು ಭರವಸೆ ನೀಡಿದಳು. ಮರುದಿನ ರಾಜಭಟರು ಜಂಬುನಾಗಯ್ಯನ ಮನೆಗೆ ಹುಲಿ ಹಾಲಿನ ವಿಚಾರವಾಗಿ ಕರೆಯಲು ಬಂದರು. ಚಿಕ್ಕ ಸೊಸೆ ಅವರಿಗೆ, "ಅವರು ಬರಲಿಕ್ಕೆ ಆಗಲ್ಲ, ಮೂರು ದಿನ ಕಳೆದು ತಲೆಗೆ ನೀರು ಹಾಕಿಕೊಂಡಿದ್ದಾರೆ" ಎಂದು ಹೇಳಿದಳು. ಬಂದವರು, "ಏಯ್, ಇದೇನು ನೀನು ಹೇಳೋದು, ಗಂಡಸರಿಗೆ ಮೂರು ದಿನದ ರಜೆ ಇರುತ್ತಾ" ಅಂದರು. ಸೊಸೆ "ಹಾಗಿದ್ದರೆ ನಿಮ್ಮ ಅರಸನಿಗೆ 'ಈ ಮುಂಚೆ ಹುಲಿ ಹಾಲು ಕುಡಿದು ಯಾರಾದ್ರೂ ಗುಣಮುಖರಾಗಿದ್ದಾರಾ' ಎಂದು ಕೇಳಿ" ಎಂದು ಹೇಳಿ ಕಳಿಸಿದಳು. ಅರಸನಿಗೆ ತನ್ನ ಆಕಾಂಕ್ಷೆ ಈಡೇರದ ಕಾರಣ ಬೇಸರವಾಯಿತು.

ಮತ್ತೆ ಎರಡು ದಿನ ಕಳೆದು ಜಂಬೂನಾಗಯ್ಯನಿಗೆ ಕರೆ ಕಳುಹಿಸಿ, "ನಮ್ಮ ಮನೆಯಲ್ಲಿ 15 ದಿನ ಕಳೆದು ಸಮಾರಾಧನೆ. ನಮಗೆ ಬಂಡಿ ಮೇಲಿನ ಅವರೆ, ಮಡಿಕೆಯೊಳಗಿನ ಕುಂಬಳಕಾಯಿ ತಂದು ಕೊಡಿ" ಅಂದ. ಮನೆಗೆ ಬಂದ ಶೆಟ್ಟಿ ಮತ್ತೆ ಚಿಂತಾಕ್ರಾಂತನಾಗಿ ಕುಳಿತ. ಚಿಂತೆಗೆ ಕಾರಣ ತಿಳಿದ ಚಿಕ್ಕ ಸೊಸೆ "ಮಾವಯ್ಯ, ಚಿಂತೆಗೆ

ಕಾರಣವಿಲ್ಲ, ಬನ್ನಿ ಊಟ ಮಾಡಿ ಮಲಗಿ" ಎಂದು ಹೇಳಿ ಧೈರ್ಯ ತುಂಬಿದಳು. ಅಂದು ರಾತ್ರಿಯೇ ಒಂದು ಚಕ್ಕಡಿಗೆ ಮಣ್ಣು ತುಂಬಿ ಅವರೆ ಚೆಲ್ಲಿ ನೀರುಣಿಸಿದಳು. ಹಾಗೆಯೇ ಮಡಕೆಯೊಂದರಲ್ಲಿ ಮಣ್ಣು ತುಂಬಿಸಿ ಕುಂಬಳ ಬೀಜ ಹಾಕಿ ನೀರು ಹಾಕಿದಳು. ಹತ್ತು ದಿನ ಕಳೆದು ರಾಜನ ಕಡೆಯವರು ಬಂದರು. ಆ ವೇಳೆಗೆ ಅವರೆ ಮತ್ತು ಕುಂಬಳ ಮೊಳಕೆ ಹೊಡೆದಿದ್ದವು. ಚಿಕ್ಕ ಸೊಸೆ "ಹೋಗಿ ರಾಜನಿಗೆ ಕೊಡಿ, ಇವೆರಡೂ ಫಲ ಕೊಟ್ಟಾಗ ಸಮಾರಾಧನೆ ಮಾಡಲು ಹೇಳಿ" ಎಂದು ಚಕ್ಕಡಿ ಮತ್ತು ಕುಂಬಳದ ಮಡಕೆ ಕಳುಹಿಸಿದಳು. ರಾಜನಿಗೆ ಏನೂ ತೋಚದಂತಾಯಿತು.

ಕೆಲವು ದಿನ ಕಳೆದು ರಾಜನ ಆಳು ಬಂದು "ಜಂಬುನಾಗಯ್ಯನವರೇ, ನಮ್ಮ ಅರಸರು ನಿಮ್ಮ ಮನೆ ಬಾವಿ ತೆಗೆದುಕೊಂಡು ಬಾ ಎಂದು ಕಳಿಸಿದ್ದಾರೆ" ಅಂದ. ನಾಗಯ್ಯ ಸೊಸೆಯತ್ತ ನೋಡಿದರು. ಸೊಸೆ "ಆಯಿತು, ನಾಳೆ ಬಂದು ತೆಗೆದುಕೊಂಡು ಹೋಗು " ಎಂದು ಹೇಳಿ ಕಳುಹಿಸಿದಳು. ಮರುದಿನ ಮತ್ತೆ ಆಳು ಬಂದು "ಅಮ್ಮ,, ನಿಮ್ಮ ಮನೆ ಬಾವಿ ತರಲು ಆಜ್ಞೆಯಾಗಿದೆ" ಅಂದ. ಚಿಕ್ಕ ಸೊಸೆ "ರಾತ್ರಿ ನಮ್ಮ ಬಾವಿ ವಿಚಾರಿಸಿದೆ, ರಾಜರ ಬಾವಿ ಬರಲಿ, ಇಬ್ಬರೂ ಜೊತೆಗೆ ಅರಮನೆಗೆ ಹೋಗ್ತೀವಿ ಅಂತಾ ಹೇಳಿತು" ಎಂದು ವಾಪಸ್ಸು ಕಳುಹಿಸಿದಳು.

ಪಟ್ಟುಬಿಡದ ಅರಸು ಕೆಲ ದಿನ ಕಳೆದು ಜಂಬುನಾಗಯ್ಯನ ಮನೆ ಮಂದಿಗೆಲ್ಲ ಸಮಾರಾಧನೆ, ಊಟಕ್ಕೆ ಬನ್ನಿ ಎಂದು ಅಹ್ವಾನ ಕಳುಹಿಸಿದ. ಎಲ್ಲ ಸೊಸೆಯಂದಿರು, ಮಕ್ಕಳು ಮತ್ತು ಜಂಬುನಾಗಯ್ಯ ಅರಮನೆಗೆ ಹೋದರು. ಚಿಕ್ಕ ಸೊಸೆಗೆ ಅರಸನ ಇಂಗಿತ ತಿಳಿದಿತ್ತು. ಒಂದರ ಮೇಲೊಂದು ಐದು ಸೀರೆ ಉಟ್ಟು ಅರಮನೆಗೆ ಹೋದಳು. ಅರಸು ಭರ್ಜರಿ ಊಟ ಹಾಕಿ ಬಾಗಿಲಲ್ಲಿ ತಾಂಬೂಲ ಕೊಟ್ಟು ಎಲ್ಲರನ್ನೂ ಬೀಳ್ಕೊಟ್ಟ, ಚಿಕ್ಕ ಸೊಸೆಗೆ "ನೀನು ಸ್ವಲ್ಪ ಇರು" ಅಂದ. ಮನೆಯವರಿಗೆ ಗಾಬರಿ, ಆದರೆ ಚಿಕ್ಕ ಸೊಸೆ "ನೀವೆಲ್ಲ ಹೋಗಿ, ಸಂಜೆ ನಾನೆಲ್ಲ ಬರ್ತೀನಿ" ಎಂದು ಹೇಳಿ ಓರಗಿತ್ತಿಯರಿಗೆ ಮತ್ತು ಉಳಿದವರಿಗೆ ಬೀಳ್ಕೊಟ್ಟಳು. ರಾಜ ತನ್ನ ಕೋಣೆಗೆ ಚಿಕ್ಕ ಸೊಸೆಯನ್ನು ಕರೆದುಕೊಂಡು ಹೋಗಿ "ನೀನು ನನ್ನವಳು" ಅಂದ. ಆಕೆ ನಗುತ್ತ "ಅಷ್ಟೇನಾ, ಅದಕ್ಕಾಗಿ ಇಷ್ಟೆಲ್ಲ ನಾಟಕ, ರಂಪಾಟ ಬೇಕಿತ್ತಾ?, ಇಗೋ ಬಂದೆ, ಸ್ವಲ್ಪ ಕಾಯಿರಿ" ಎಂದು ಅವನನ್ನು ಕಾಯಲು ಕೂಡಿಸಿ, ಹೊರಗೆ ಬಂದು ಒಂದೊಂದೇ ಸೀರೆ ಬಿಚ್ಚಿ ಒಂದಕ್ಕೊಂದು ಗಂಟು ಹಾಕಿ ಹಗ್ಗದ ಹಾಗೆ ಮಾಡಿ ಒಂದು ತುದಿ ಕುಣಿಕೆಯೊಂದಕ್ಕೆ ಬಿಗಿದು ಮೆಲ್ಲಗೆ ಇಳಿದು ಮನೆಗೆ ಹೋದಳು. ಎಷ್ಟೊತ್ತು ಕಾದರೂ ತನ್ನ ಚೆಲುವೆಯ ಸುಳಿವೇ ಇಲ್ಲ, ಎಂದು ಅರಸ ಹೊರಗೆ ಬಂದು ನೋಡಿದರೆ ಸಾಲು ಸಾಲು ಗೋಡೆಗುಂಟ ಸೀರೆ ಕಂಡು ಬೇಸರದಿಂದ "ಈಕೆ ತನಗೆ ದಕ್ಕಲಾರಳು" ಎಂದು ಚಿಕ್ಕ ಸೊಸೆ ಆಸೆ ಬಿಟ್ಟು ಬಿಟ್ಟ.

***

ಸಣ್ಣ ಕತೆ

ಆ ಕಿಟಕಿಯವ

– ಕಮಲಾಕ್ಷಿ ಸಿ ಆರ್.

ಇಂದೂ ಸಹ ಎದುರು ಮನೆಯ ಕಿಟಕಿಯತ್ತ ನನಗರಿಯದೆ ನನ್ನ ಕಣ್ಣುಗಳು ಹೊರಳಿದವು. ಎಂದಿನಂತೆ ಎರಡನೇ ಮಹಡಿಯಲ್ಲಿ ಆ ಯುವಕ ಕಿಟಕಿಯ ಬಳಿಯಿದ್ದ. ಬೆಳಗ್ಗೆ ಮನೆಯಿಂದ ಹೊರಬಂದು ಕಾಲೇಜಿಗೆ ಹೋಗುವಾಗ, ಪುನಃ ಸಂಜೆ ಮನೆ ಸೇರುವಾಗೆಲ್ಲ ಆ ಯುವಕ ಕಿಟಕಿಯ ಬಳಿ ನಿಂತು ದಾರಿಯ ಕಡೆ ನೋಟ ನೆಟ್ಟಿರುತ್ತಿದ್ದ. ಅವನಿಗೆ ಸುಮಾರು ಇಪ್ಪತ್ತೈದು ವಯಸ್ಸಿರಬಹುದು, ವಿದ್ಯಾವಂತನಾಗಿ ಕಾಣುವನು. ಈತ ಏನಾದರೂ ಕೆಲಸ ಮಾಡಬಾರದೆ? ಸುಮ್ಮನೆ ಸಮಯ ವ್ಯರ್ಥ ಮಾಡುವವರಲ್ಲ ಎನಿಸಿತು. ಆ ಯುವಕ ನನ್ನತ್ತ ಒಮ್ಮೆಯೂ ನೋಡಿ ಅನುಚಿತ ಸಂಕೇತ ಕಳುಹಿಸಿಲ್ಲ. ಆ ರೀತಿಯಲ್ಲಿ ಆತ ಸುಸಂಸ್ಕೃತನೇ ಇದ್ದಾನೆ. ಹಾಗಾಗಿಯೇ ಅಪ್ಪ, ಅಮ್ಮ, ಅಣ್ಣನ ಬಳಿ ಇವನ ಬಗ್ಗೆ ದೂರು ನೀಡಿಲ್ಲ. ಅವನ ಮನೆಯಲ್ಲಿ ಯಾರಾದ್ರೂ ನನ್ನ ವಯಸ್ಸಿನವನು ಇದ್ದರೆ, 'ಅವನೇಕೆ ಕಿಟಕಿಯ ಬಳಿ ನಿಂತು ಹೊರಗೆ ನೋಡುವನೋ?' ಎಂದು ವಿಚಾರಿಸಬೇಕು ಎಂದುಕೊಂಡೆ.

ಈ ಮನೆಗೆ ಬಂದು ನಾಲ್ಕು ತಿಂಗಳು ಕಳೆಯುವ ಹೊತ್ತಿಗೆ ನೆರೆಹೊರೆಯಲ್ಲಿರುವವರು ಹೊಂದಿಕೊಳ್ಳುವವರೇ ಎನಿಸಿತ್ತು. ಆದರೆ ಈ ಯುವಕನಿರುವ ಮನೆಯವರು ಯಾರೆಂದು ತಿಳಿದುಕೊಳ್ಳುವ ಕುತೂಹಲ ಮಾತ್ರ ತಣಿಯಲಿಲ್ಲ. ಕಿಟಕಿಯ ಬಳಿ ನಿಂತು ನೋಡುವುದೇನನ್ನು? ತಿಳಿಯಬೇಕೆಂಬ ತೀವ್ರತೆ ದಿನೇ ದಿನೇ ಹೆಚ್ಚಾಗುತ್ತಲೇ ಹೋಯಿತು.

ವರಮಹಾಲಕ್ಷ್ಮೀ ಹಬ್ಬದ ದಿನದಂದು ಅಮ್ಮ, ಪರಿಚಯವಾಗಿದ್ದ ಅಕ್ಕಪಕ್ಕದ ಮನೆಯ ಮಹಿಳೆಯರನ್ನು ಕುಂಕುಮಕ್ಕೆ ಕರೆದು ಬಾ ಎಂದರು. ಈ ನೆಪದಲ್ಲಿ ಆ ಮನೆಗೆ ಹೋಗಿ ಮನೆಯ ಮಹಿಳೆಯನ್ನು ಮಾತಾಡಿಸಿ ಬಿಡಲೆ ಎನಿಸಿತ್ತು. ಆದರೆ ಅ ಮನೆಯಲ್ಲಿ ಯಾವುದೇ ಮಹಿಳೆಯ ಪರಿಚಯ ನನಗಿಲ್ಲ. ಒಂದು ವೇಳೆ ಅಲ್ಲಿ ಮಹಿಳೆಯರು ಯಾರೂ ಇರದಿದ್ದರೆ? ತಪ್ಪು..ತಪ್ಪು.. ನನಗೇಕೆ ಅವನ ಉಸಾಬರಿ? ಅವನು ಎಲ್ಲಿ ನಿಂತರೇನು? ಅವನೇನು ನೋಡಿದರೆ ನನಗೇನು? ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡು ತೆಪ್ಪಗಾದೆ.

ಅಕ್ಕಪಕ್ಕದವರ ಮನೆಗೆ ಹೋಗಿ ಮಹಿಳೆಯರನ್ನು ಕರೆದು ಮನೆಯ ಒಳಗೆ ಬರುವಾಗ, ಸುಂದರ ಮಧ್ಯ ವಯಸ್ಕ ಮಹಿಳೆಯೋರ್ವರು ನಮ್ಮ ಮನೆಯಿಂದ ಹೊರಬರುತ್ತ ನನ್ನನ್ನು ನೋಡಿ ನಿಂತರು.

"ಅಮ್ಮನೊಡನೆ ನೀನೂ ನಮ್ಮನೆಗೆ ಬಾಮ್ಮ..." ಎಂದು ಸರಸರ ಹೊರಟರು. ನಾನು ಒಳಹೋಗಿ, "ಅದ್ಯಾರಮ್ಮ? ಯಾರ ಮನೆಯವರು ಆ ಆಂಟಿ..? ಅದೆಷ್ಟು ಕ್ಯೂಟ್ ಆಗಿದ್ದಾರೆ ಅಲ್ವಾ?" ಎಂದು ಅಮ್ಮನನ್ನು ಕೇಳಿದೆ.

"ಅವ್ರು ನಮ್ಮ ಎದುರಿಗಿರೋ ಅಪಾರ್ಟ್‌ಮೆಂಟ್‌ನ ಎರಡನೇ ಫ್ಲೋರ್‌ನವರಂತೆ. ಮನೆಗೆ ಬನ್ನಿ ಅಂತ ಕರೆದು ಹೋಗಿದ್ದಾರೆ. ಇಲ್ಲಿಗೆ ಬಂದವರನ್ನು ನಾನು ಅಟೆಂಡ್ ಮಾಡ್ತೀನಿ. ಒಂದ್ ಹೆಜ್ಜೆ ನೀನೆ ಹೋಗಿ ಬಂದು ಬಿಡು. ಈಗಿಲ್ಲಿ ಕೂತ್ಕೋಬೇಡ.. ನಡಿ ನಡಿ.." ಎಂದರು. .

ಓಹ್.. ಅಮ್ಮ ಹೇಳಿದ್ದು ಆ ಕಿಟಕಿ ಯುವಕನ ಮನೆಗಾ! ಅಮ್ಮ ಹೇಳಿದ್ದೇ ತಡ. ಅವರಿವರ ಮನೆಯವರು ಕೊಟ್ಟಿದ್ದ ಫಲ ತಾಂಬೂಲಗಳನ್ನು ಅಮ್ಮನ ಕೈಗಿತ್ತು.. "ಸರೀಮಾ.. ಅವರ ಮನೆಗೆ ಹೋಗಿ ಬರುವೆ" ಎಂದು ಕನ್ನಡಿಯಲ್ಲೊಮ್ಮೆ ಇಣುಕಿ ಮುಖ ನೋಡಿಕೊಂಡು ಅವರ ಮನೆಯತ್ತ ಹೊರಟೆ.

ಆ ಕಿಟಕಿ ಯುವಕನ ಮನೆ ಹೊಕ್ಕೊಡನೆ ಯಾವುದೋ ದೇಗುಲವನ್ನು ಪ್ರವೇಶಿಸಿದಂತಾಯಿತು. ಹಾಲಿನ ಮಧ್ಯೆ ಇದ್ದ ದೇವರ ಮನೆಯ ಮಂಟಪದಲ್ಲಿ ವರಮಹಾಲಕ್ಷ್ಮಿಯನ್ನು ಕೂರಿಸಲಾಗಿತ್ತು. ನನ್ನನ್ನು ನೋಡಿದೊಡನೆ ಆ ಮಹಿಳೆ ಚಿರಪರಿಚಿತರಂತೆ ಆಪ್ತತೆಯಿಂದ, "ಬಾಮ್ಮ.. ಬಾ.. ಬಾ.." ಎಂದು ಕೈ ಹಿಡಿದು ರತ್ನಗಂಬಳಿಯ ಮೇಲೆ ಕೂರಿಸಿಕೊಂಡರು. ನಾನು 'ಆ ಕಿಟಕಿ ಹುಡುಗ ಕಣ್ಣಿಗೆ ಬಿದ್ದಾನೆಯೇ' ಎಂದು ಆ ಕಡೆ ಈ ಕಡೆ ಕಣ್ಣಾಡಿಸಿದೆ. ಊಹು.. ಅವನ ಸುಳಿವೇ ಇಲ್ಲ.. ಅವನ ಬಗ್ಗೆ ಈಕೆಯ ಬಳಿ ವಿಚಾರಿಸಲೆ?. ಬೇಡ... ಬೇಡ.. ಅವನಿಗೆ ಈಕೆ ಏನಾಗಬೇಕೋ? ಎಂದು ಸುಮ್ಮನಾದೆ.

ಆ ಮಹಿಳೆ, "ನಿನಗೇನೋ ಚಮತ್ಕಾರ ತೋರಿಸಬೇಕು.. ಬಾಮ್ಮ" ಎದ್ದು ಒಂದು ಕೋಣೆಗೆ ಕರೆದೊಯ್ದರು. ಆ ಕೋಣೆಯಲ್ಲಿ ಅದೇ ಆ ಕಿಟಕಿಯ ಯುವಕ ಕಂಡ! ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರುತ್ತ, ಕೈಗೆ ಸಿಕ್ಕಿದಂತಾಯಿತು. ಈತ ಚಮತ್ಕಾರವೆ? ಎಂಬ ಪ್ರಶ್ನೆ ನನಗೆ ಎದುರಾಯಿತು. ಅದು ಆ ಮಹಿಳೆಗೆ ಅರಿವಾಯಿತು ಎಂದು ಕಾಣುತ್ತೆ.. ಆಕೆ ಆ ಯುವಕನ ಎದುರು ನಿಲ್ಲಿಸಿ.. ಕೈ ಬೆರಳುಗಳಲ್ಲಿ ಸನ್ನೆ ಮಾಡಿ ಏನನ್ನೋ ಸೂಚಿಸಿದರು. ಆತ ನಕ್ಕು.. ನನ್ನತ್ತ ಎರಡೂ ಕೈ ಮುಗಿದ. ಅವನು ಕ್ಯಾನ್‌ವಾಸ್‌ನಲ್ಲಿ ಏನನ್ನೋ ಚಿತ್ರಿಸಲು ನಿಂತಂತಿತ್ತು.

"ಈತ ನನ್ನ ಮಗ ಕಿರಣ್. ಇವನು ಹುಟ್ಟಿನಿಂದ ಕಿವುಡ.. ಮೂಕ. ಆದರೆ ಅಗಾಧ ಪ್ರತಿಭಾವಂತ. ಇವನ ಪ್ರಪಂಚವೇ ಕಿಟಕಿ.. ಕಿಟಕಿಯಿಂದ ಕಾಣುವ ನೋಟವೇ ಕಲಿಕೆಯ ವಿಷಯ" ಎಂದರು.

ಓಹ್.. ಇದೇನು ಕೇಳಿದೆ ಈ ಕಿಟಕಿ ಹುಡುಗನ ಬಗ್ಗೆ..! ಹೀಗಾಗಬಾರದಿತ್ತು ಇವನಿಗೆ. ನಾನೇನೋ ಭಾವಿಸಿದ್ದೆನಲ್ಲ.. ಛೇ.. ಎಂದು ನನ್ನನ್ನು ನಾನೇ ಹಳಿದುಕೊಂಡೆ.

"ಚಿತ್ರಕಲೆ ಅವನ ಜೀವ.. ಜೀವನ" ಎಂದವರು, ಪಕ್ಕದ ಇನ್ನೊಂದು ದೊಡ್ಡ ಹಾಲಿಗೆ ಕರೆದೊಯ್ದರು. ಅದೊಂದು ಕಲಾಮಂದಿರದಂತೆ ಭಾಸವಾಯಿತು. ನೂರಾರು ಚಿತ್ರಗಳನ್ನು ಗೋಡೆಗೆ ತೂಗುಹಾಕಲಾಗಿತ್ತು. ಮೊದಲೇ ಸಿದ್ಧಪಡಿಸಿ ಒಂದು ಸುರುಳಿ ಸುತ್ತಿ ಇಟ್ಟಿದ್ದ ಕ್ಯಾನ್‌ವಾಸ್ ಬಟ್ಟೆಯನ್ನು ಕೈಗಿತ್ತು, "ಇದು ನಿನಗೆ.. ತೆರೆದು ನೋಡಮ್ಮ" ಎಂದರು.

ಕುತೂಹಲದಿಂದ ತೆರೆದು ನೋಡಿದರೆ ನನ್ನ ಚಿತ್ರ! ಓಹ್ ಅಂದು ಪ್ರತಿಭಾ ದಿನದಂದು ನನಗೆ ಅಮ್ಮ ಮೈಸೂರು ಸಿಲ್ಕ್ ಸೀರೆ ಉಡಿಸಿ, ತಕ್ಕ ಒಡವೆ ಹಾಕಿ ಕಳುಹಿಸಿದ್ದರು. ನನ್ನನ್ನು ಕಿಟಕಿಯಲ್ಲಿ ನೋಡಿ ಅದೆಷ್ಟು ಚೆಂದವಾಗಿ ಚಿತ್ರಿಸಿದ್ದಾನೆ! ಹುಟ್ಟು ಕಲಾವಿದ ಇವನು. 'ಕಿವಿ, ಮಾತು ಕೊಡದೆ ದೇವರು ಮೋಸ ಮಾಡಿದರೂ ಇಷ್ಟು ಒಳ್ಳೆ ಕಲೆಯನ್ನು ನೀಡಿ ಸಮದೂಗಿಸಿದ್ದಾನೆ' ಎಂದುಕೊಂಡೆ.

ಅ ಕಿಟಕಿ ಯುವಕನನ್ನು ಶ್ಲಾಘಿಸಿ, ನಿಮ್ಮ ಕಲಾಸೇವೆ ನಿರಂತರವಾಗಿರಲಿ ಎಂದವನಿಗೆ ನಮಸ್ಕರಿಸಿ ಹೊರಟೆ. ಆ ಮಹಿಳೆ ಕುಂಕುಮ ಕೊಟ್ಟು, ಮಂಗಳದ್ರವ್ಯಗಳನ್ನು ಕೊಟ್ಟರು. ಕೆಳಗಿಳಿದು ಮನೆಯಿಂದ ಹೊರಡುವಾಗ ಮತ್ತೆ ಕಿಟಕಿಯತ್ತ ನೋಡಿದೆ. ಆ ಕಿಟಕಿ ಏನೇನೋ ಕಲ್ಪನೆಗಳನ್ನು ನನ್ನ ತಲೆಯಲ್ಲಿ ತುಂಬಿತ್ತಲ್ಲ. ಕಿಟಕಿ ಕುತೂಹಲದ ಗಣಿ ಎಂದು ಭಾರವಾದ ಮನಸಿನಿಂದ ನನ್ನ ಚಿತ್ರವಿದ್ದ ಕ್ಯಾನ್‌ವಾಸ್ ಸುರಳಿಯನ್ನು ಎದೆಗಪ್ಪಿಕೊಂಡು ನಮ್ಮ ಮನೆಯತ್ತ ಹೆಜ್ಜೆ ಹಾಕಿದೆ. ಮನೆಯೊಳಗೆ ಹೋಗುವಾಗ ಆ ಕಿಟಕಿಯತ್ತ ನನ್ನ ಕಣ್ಣುಗಳು ಹೊರಳಿದವು. ಎಂದಿನಂತೆ ಕಿಟಕಿಯ ಬಳಿ ಆ ಯುವಕ ಅಲ್ಲೇ ನಿಂತಿದ್ದ!

***

ಕಾವ್ಯಸ್ಯಾತ್ಮಾ ಧ್ವನಿಃ

– ಗಣಪತಿ ಹೆಗಡೆ

'ಸಾಗರಗಳೆಷ್ಟು ಹಾಗೂ ಯಾವವು?'

ವಿನೋದನ ಮಾತಿಗೆ 'ವಿನೋದ' ಅಂತ ಗಡಿಬಿಡಿಸಿ ಉತ್ತರಿಸುವ ಹಾಗಿಲ್ಲ. ಪರೀಕ್ಷೆಯಲ್ಲಿಯ ಪ್ರಶ್ನೆಯ ಹಾಗೇ ಅದು. ಒಂದು ಗುಂಜಿ ಹೆಚ್ಚೂ ಆಗಬಾರದು. ಕಡಿಮೆಯೂ ಆಗಬಾರದು ಅಂತ ಹೇಳುತ್ತಾರಲ್ಲ. ಹಾಗಿರಬೇಕು ಉತ್ತರ.

ಏಳು ಸಾಗರಗಳು. ಹೇಳಿಕೆ ಚಂದವಾಗಿರಬೇಕೆಂದು ಸಪ್ತ ಸಾಗರಗಳು ಎನ್ನುತ್ತೇವೆ. 'ಲವಣ, ಇಕ್ಷು, ಸುರಾ (ಮದ್ಯ), ಸರ್ಪಿಸ್ (ತುಪ್ಪ), ದಧಿ, ಜಲ, ಕ್ಷೀರ, ಸಾಗರಗಳು. ಆ ಆ ಸಾಗರಗಳಲ್ಲಿಯ ದ್ರವದ ಗುಣಗಳನ್ನು ಅವಲಂಬಿಸಿ ಆ ಆ ಸಾಗರ ಎನ್ನುತ್ತಾರಂತೆ.

'ಅದು ಹೌದು ನನಗೂ ಗುತ್ತು. ಆದರೆ ಈ ಜನಸಾಗರ ಅಂದರೆ ಯಾವುದು? ಸಾಗರಗಳು ಮೇರೆ ಮೀರಿ ಹರಿದುಬರುವದುಂಟು. ಜನಸಾಗರ ಹರಿದುಬರುವದು ಹೇಗೆ? ಇಲ್ಲಿ ಯಾವ ದ್ರವ ಇದೆ?'

ಇದು ವಿನೋದದ ಮಾತಂತೂ ಆಗಿರಲಿಲ್ಲ.

'ಅದು ಹಾಗಲ್ಲ. ಸಾಹಿತ್ಯದಲ್ಲಿ ಶಬ್ದಶಃ ಅರ್ಥ ಮಾಡಬಾರದು. ಎಷ್ಟೋ ಅರ್ಥಗಳನ್ನು ಶಬ್ದಕೋಶದಲ್ಲಿ ಹುಡುಕಿ ತಿಳಿಯಲು ಸಾಧ್ಯವಿಲ್ಲ' ಎಂದು ಹೇಳುತ್ತಾ ಸ್ವಲ್ಪ ವಿವರಣೆ ಕೊಟ್ಟೆ.

'ಹೆಣ್ಣಿನಲ್ಲಿ ದೃಗ್ಗೋಚರವಾದ ಸ್ಪುಟವಾದ ಅವಯವಗಳಿಗಿಂತ ಬೇರೆಯದೇ ಆದ, ಮನಸ್ಸಿಗೆ ಮುದ ಕೊಟ್ಟು ಆಸ್ವಾದಿಸಬಹುದಾದ 'ಲಾವಣ್ಯ' ಇರುವುದಿಲ್ಲವೇ? ಹಾಗೆ, ಕಾವ್ಯದಲ್ಲಿ, ನಿಘಂಟುವಿನಲ್ಲಿ ದೊರಕುವ ಶಬ್ದಶಃ ಅರ್ಥಗಳಿಗಿಂತ ಬೇರೆಯದೇ ಆದ ಮನಸ್ಸಿಗೆ ಸಂತೋಷವನ್ನು ಕೊಡುವ 'ಧ್ವನಿ' ಇರುತ್ತದೆ. ಇದೇ ಕಾವ್ಯದ ಲಾವಣ್ಯ ಅಥವಾ ಆತ್ಮ. 'ಕಾವ್ಯಸ್ಯಾತ್ಮಾ ಧ್ವನಿಃ' ಅಂತ ಹೇಳುವದು ಇದಕ್ಕೇ.'

'ವಾಚಕಃ ಲಕ್ಷ್ಯಕಸ್ತಥಾ ವ್ಯಂಜಕಸ್ತ್ರಿವಿಧ್ಮುತಾ।
ವಾಚ್ಯಾದಯಸ್ತದರ್ಥಾಸ್ಯುಃ ತಾತ್ವರ್ಯಾರ್ಥೇಷು ಕೇಷುಚಿತ್॥'

(ವಾಚಕ, ಲಕ್ಷ್ಯಕ ಹಾಗೂ ವ್ಯಂಜಕ ಎನ್ನುವ ಮೂರು ರೂಪಗಳಿಗೆ ವಾಚ್ಯಾರ್ಥ, ಲಕ್ಷ್ಯಾರ್ಥ ಹಾಗೂ ವ್ಯಂಗ್ಯಾರ್ಥ ಹೀಗೆ ಮೂರು ವೃತ್ತಿಗಳು. ಕೆಲವೊಮ್ಮೆ ತಾತ್ವರ್ಯಾರ್ಥ ಎನ್ನುವದೂ ಇದೆ.)

ಅಂತ ಸೂತ್ರರೂಪದಲ್ಲಿ ನಿರೂಪಿಸಿದ್ದಾನೆ ಆನಂದವರ್ಧನ.

ಪೂರ್ಣಾರ್ಥವನ್ನು ಕೊಡುವ ಅಕ್ಷರ ಸಮೂಹ ಶಬ್ದ ಎನ್ನುವದು ಗೊತ್ತು. ಹಾಗೆಯೇ ಅರ್ಥಪೂರ್ಣವಾದ ಶಬ್ದ ಸಮುಚ್ಚಯವನ್ನು ವಾಕ್ಯ ಎನ್ನುತ್ತಾರೆ. ಜ ಹಾಗೂ ನ ಸೇರಿ ಜನ ಆಗುತ್ತದೆ. ಹಾಗೆಯೇ ಸಾ ಗ ರ ಮೂರು ಅಕ್ಷರಗಳು ಸೇರಿ ಸಾಗರ ಅಂತಾಗುತ್ತದೆ. ಇವೆರಡೂ ಅರ್ಥಪೂರ್ಣವಾದ ಶಬ್ದಗಳೇ ಸರಿ. ಆದರೆ 'ಜನಸಾಗರ' ಇದಕ್ಕೆ

ರೂಢಿಯ ಶಬ್ದಕೋಶದ ಅರ್ಥ ಹೊಂದಿಕೆಯಾಗುವದಿಲ್ಲ. ಇದು ಇನ್ನು ಯಾವುದೋ ಅರ್ಥವನ್ನು ಲಕ್ಷ್ಯವನ್ನಾಗಿಸಿ ಹೇಳಿದ್ದು ಅಂತ ಗುರುತಿಸಬಹುದು. ಜಲಸಾಗರ ಅಂದರೆ 'ಅನೇಕ ನೀರಿನ ಬಿಂದುಗಳು ಸೇರಿ ಆದದ್ದು' ಅಂದ ಹಾಗೆ ಜನಸಾಗರ ಅಂದರೆ ಅನೇಕ ಜನರು ಸೇರಿದ ಜನರ ಗುಂಪು ಅಂತ ಅರ್ಥ. ಅದೇ ಲಕ್ಷ್ಯಾರ್ಥ.

'ಮುಖ್ಯಾರ್ಥಬಾಧೇ ತದ್ಯೋಗೇ ರೂಢಿತೋऽಥ ಪ್ರಯೋಜನಾತ್।
ಅನ್ಯಾರ್ಥೋ ಲಕ್ಷ್ಯತೇ ಯತ್ಸಾ ಲಕ್ಷಣಾऽऽರೋಪಿತಾ ಕ್ರಿಯಾ॥'

(ಶಬ್ದದ ರೂಢಿಯಲ್ಲಿ ಬಳಕೆಯಿದ್ದ ಮುಖ್ಯಾರ್ಥವು ಸರಿಹೊಂದದೇ ಇದ್ದಲ್ಲಿ ಬೇರೆ ಅರ್ಥಗಳು ಸೂಚ್ಯವಾಗಿ ಲಕ್ಷಿಸಲ್ಪಡುತ್ತದೆ. ಇದೇ ಲಕ್ಷ್ಯಾರ್ಥ).

ವಾಚ್ಯಾರ್ಥ ಲಕ್ಷ್ಯಾರ್ಥ ವ್ಯಂಗಾರ್ಥ(ಧ್ವನ್ಯರ್ಥ)

ಕಣ್ಣಿನಲ್ಲಿ ಬೆಂಕಿಯನ್ನುಗುಳಿದ ಎನ್ನುವದನ್ನು ಗಮನಿಸೋಣ. ಇಲ್ಲಿ ಕಣ್ಣು ಎನ್ನುವ ಶಬ್ದ, ಬೆಂಕಿ ಎನ್ನುವ ಶಬ್ದ ಹಾಗೂ ಉಗುಳಿದ ಎನ್ನುವ ಶಬ್ದ ಹೀಗೆ ಮೂರೂ ಶಬ್ದಗಳೂ ಅರ್ಥವತ್ ಶಬ್ದಗಳೇ ಸರಿ. ಪ್ರತಿ ಶಬ್ದಗಳ ವಾಚ್ಯಾರ್ಥಗಳು ಪೂರ್ಣಾರ್ಥವೇ. ಆದರೆ ಕಣ್ಣಿನಿಂದ ಶಬ್ದಗಳನ್ನು ಉಗುಳುವದು ಹೇಗೆ?. ಇಲ್ಲಿ ವಾಚ್ಯಾರ್ಥ ಸರಿಹೊಂದುವದಿಲ್ಲ. ಬೇರೆ ಯಾವುದೋ ಅರ್ಥ ಹೊಂದಿಕೆಯಾಗುವದೋ ಅಂತ ನೋಡಬೇಕು.

ಕಣ್ಣಿನಲ್ಲಿ ಬೆಂಕಿಯನ್ನುಗುಳಿದ ಎಂಬಲ್ಲಿ ಕಣ್ಣು ಕೆಂಪಾಗಿದೆ ಎನ್ನುವದು ಲಕ್ಷ್ಯಾರ್ಥ.

ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಕಣ್ಣು ಕೆಂಪಾಗಲು ಕಣ್ಣಿನ ಕಾಯಿಲೆಯೂ ಕಾರಣವಿರಬಹುದು. ಆದರೆ ಯಾರಾದರೂ 'ಕಣ್ಣಿನಲ್ಲಿ ಬೆಂಕಿಯನ್ನುಗುಳಿದ' ಅಂದಾಗ ವೈದ್ಯರಲ್ಲಿ ಹೋಗುವುದಿಲ್ಲ. ಬೆಂಕಿಯನ್ನುಗುಳಿದ ಎನ್ನುವಲ್ಲಿನ ಕಣ್ಣು ಕೆಂಪಾಗುವಿಕೆಗೆ 'ವಿಪರೀತ ಸಿಟ್ಟು ಬಂದಿದೆ' ಎನ್ನುವದೇ ಅರ್ಥ. ಅದೇ 'ವ್ಯಂಗ್ಯಾರ್ಥ' ಅಥವಾ 'ಧ್ವನ್ಯರ್ಥ'.

"ಓಹೋ", ವಿನೋದ ಸಮಾಧಾನವಾದ ಹಾಗೇ ನುಡಿದ.

ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ. ನೀನು ಹೇಳಿದ 'ಜನಸಾಗರ'ವೇ ಇರಲಿ. ಯಾವುದೋ ಒಂದು ಕೀರ್ತನೆ ಕಾರ್ಯಕ್ರಮ ನಡೆಯುತ್ತಿದೆ ಅಂದುಕೊಳ್ಳೋಣ. 'ಕೀರ್ತನೆಯನ್ನು ಕೇಳಲು ಜನಸಾಗರವೇ ಬಂದಿತ್ತು' ಅಂತ ಹೇಳಿದಾಗ ಕೀರ್ತನೆ ಕೇಳಲು ಬಹಳ ಜನ ಸೇರಿದ್ದರು ಎನ್ನುವದು ಲಕ್ಷ್ಯಾರ್ಥ.

ಅಷ್ಟು ಜನ ಸೇರಲು ಏನು ಕಾರಣ? ಕೀರ್ತನಾ ಕಾರ್ಯಕ್ರಮ ಚೆನ್ನಾಗಿರುವದೇ ಬಹಳ ಜನ ಬಂದು ಸೇರಲು ಕಾರಣವಲ್ಲವೇ?. ಅಂದರೆ ಜನಸಾಗರ ಸೇರಿತ್ತು ಎನ್ನುವದರ ಹಿಂದೆ ಕಾರ್ಯಕ್ರಮ ಚೆನ್ನಾಗಿತ್ತು ಎನ್ನುವದು ಧ್ವನ್ಯರ್ಥ ಅಥವಾ ವ್ಯಂಗ್ಯಾರ್ಥ. ಇನ್ನೂ ಮುಂದೆ ಹೋದರೆ, ಕಾರ್ಯಕ್ರಮ ಸಂಯೋಜಕರ ಪ್ರಯತ್ನ ಯಶಸ್ವಿಯಾಯಿತು ಎನ್ನುವದೇ ಮಾತಿನ ತಾತ್ಪರ್ಯ.

'ಅವನು ಶುದ್ಧ ಕತ್ತೆ' ಎನ್ನುತ್ತಾರೆ. ಇಲ್ಲಿಯ ಮೂರು ಶಬ್ದಗಳಿಗೂ ಇರುವ ಶಬ್ದಕೋಶದ ಅರ್ಥಗಳು ಸಮಂಜಸವಾಗಿಯೇ ಇದೆ. ಆದರೆ ಮೂರೂ ಶಬ್ದಗಳಿಂದ ಸಂಯೋಜಿಸಲ್ಪಟ್ಟ ವಾಕ್ಯಕ್ಕೆ ಸಮಂಜಸವಾದ ವಾಚ್ಯಾರ್ಥ ಇಲ್ಲ. ಮನುಷ್ಯ ಕತ್ತೆಯಾಗಲು ಹೇಗೆ ಸಾಧ್ಯ?

ಆದರೆ ಕತ್ತೆಯ ಗುಣವನ್ನು ಅವನಲ್ಲಿ ಲಕ್ಷ್ಯಿಸಿದಾಗ ವಾಕ್ಯ ಅರ್ಥಪೂರ್ಣವಾಗುತ್ತದೆ. ಆಗ ಅವನು ಬುದ್ಧಿಶೂನ್ಯ ಮನುಷ್ಯ ಅಂತ ನಿರ್ಣಯಿಸಿದ ಹಾಗಾಗುತ್ತದೆ.

ಆದರೆ ಅವನು ಬುದ್ಧಿಶೂನ್ಯ ಎನ್ನುವದು ಯಾವುದೋ ಒಂದು ಸನ್ನಿವೇಶಕ್ಕೆ ಸಂಬಂಧಿಸಿದ್ದಾಗಿರಬಹುದು. ಆ ಸನ್ನಿವೇಶಕ್ಕೆ ಸಂಬಂಧಿಸಿದ ಹಾಗೆ ಆ ಮನುಷ್ಯ ನಿಷ್ಪ್ರಯೋಜಕ ಎನ್ನುವದು 'ಅವನು ಶುದ್ಧ ಕತ್ತೆ' ಎನ್ನುವ ಮಾತಿನ ಧ್ವನ್ಯರ್ಥ ಅಥವಾ ವ್ಯಂಗ್ಯಾರ್ಥ.

'ಗಂಗೆಯಲ್ಲಿ ಅವನ ಮನೆಯಿದೆ' (ಗಂಗಾಯಾಂ ಘೋಷಃ) ಎನ್ನುವ ವಾಕ್ಯವನ್ನು ಗಮನಿಸೋಣ.

ಮೂರು ಶಬ್ದಗಳು ಕೂಡಿ ಆದ ವಾಕ್ಯ ಇದು. ಮೂರು ಶಬ್ದಗಳೂ ಕೂಡ ಪೂರ್ಣಾರ್ಥವನ್ನೇ ಹೊಂದಿವೆ. ಆದರೆ ವಾಕ್ಯ ರಚನೆಮಾಡಿದಾಗ ಗಂಗಾನದಿಯಲ್ಲಿ ಅವನ ಮನೆಯಿದೆ ಎನ್ನುವ ಅರ್ಥ ಸಮಂಜಸವೆನಿಸುವದಿಲ್ಲ. ಈ ವಾಕ್ಯದ ಅರ್ಥದ ಲಕ್ಷ್ಯವನ್ನು ಗಮನಿಸಿದರೆ 'ನದಿಯ ದಡದಲ್ಲಿ ಅವನ ಮನೆಯಿದೆ' ಎನ್ನುವದು ಲಕ್ಷ್ಯಾರ್ಥ.

ಇಷ್ಟನ್ನೇ ಹೇಳಿದರೆ ವಿಶೇಷವನ್ನೇನೂ ಹೇಳಿದ ಹಾಗಲ್ಲವಲ್ಲ?. ಗಂಗಾ ನದಿಯ ದಡದಲ್ಲಿಯೇ ಅವನ ಮನೆ ಇದೆಯೆಂದರೆ, ಫಲವತ್ತಾದ ಜಮೀನಿನಲ್ಲಿ ಅವನು ಮನೆ ಮಾಡಿಕೊಂಡಿದ್ದಾನೆಂದೂ, ಆ ಮಟ್ಟಿಗೆ ಅವನು ಭಾಗ್ಯವಂತನೆಂದೂ ಅರ್ಥೈಸಬಹುದು.

ಅಥವಾ ಪುಣ್ಯತಮೆಯಾದ ಗಂಗಾ ಮಾತೆಯ ಪಕ್ಕದಲ್ಲಿಯೇ ವಾಸಿಸುವ ಅವನು ಎಷ್ಟು ಪುಣ್ಯ ಸಂಪಾದನೆ ಮಾಡಬಹುದೆಂದೂ ಧ್ವನಿಸಬಹುದು.

ಹೀಗೆ ಕಾವ್ಯದಲ್ಲಿ ವಾಕ್ಯದ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥ ಅಥವಾ ಧ್ವನ್ಯರ್ಥವನ್ನು ಗಮನಿಸಿ ಅಭ್ಯಾಸ ಮಾಡಿದರೆ ರಸಸ್ಫುರಣೆಯಾಗುತ್ತದೆ. ವಾಕ್ಯದ ಕಟ್ಟಿಗೆಗೆ ಧ್ವನಿಯ ದೀಪವನ್ನು ಹಚ್ಚಿ ಬೆಳಗಿದರೆ ಸುಂದರ ಕಾವ್ಯವನ್ನು ಆಸ್ವಾದಿಸಬಹುದಲ್ಲವೇ?

***

ಸಣ್ಣ ಕತೆ (ಮಹಿಳಾ ದಿನಾಚರಣೆ ಸಂದರ್ಭ)

ಜ್ಯೋತಿ

– ಅನ್ನಪೂರ್ಣ ಸುಬ್ಬರಾವ್

ಇನ್ನೆಷ್ಟು ದಿನ ಈ ನರಳಾಟ.. ಬೇಗ ಮುಕ್ತಿ ಕೊಡು ತಂದೆ, ನನ್ನ ಮಗಳಗಾಗಿ ಇಷ್ಟು ದಿನ ಜೀವ ಹಿಡಿದಿದ್ದೆ. ಇನ್ನು ನನ್ನಿಂದಾಗದು, ಯಾಕೋ ಸಾವಿನ ಸಂಕಟ ಹೆಚ್ಚಾಗ್ತಿದೆ.. 'ಜ್ಯೋತಿ, ಎಲ್ಲಿದ್ದೀಯಮ್ಮ ಬಾಯಿ ಒಣಗ್ತಿದೆ ಕಣೆ. ಸ್ವಲ್ಪ ನೀರ್ ಕೊಡ್ತೀಯಾ..!!'

ಓಡಿಬಂದ ಜ್ಯೋತಿ ಅಮ್ಮನ ಸ್ಥಿತಿ ನೋಡಿ ಗಾಬರಿಯಾಗಿ, 'ಅಮ್ಮ ಏನಾಗ್ತಿದೆ ನಿಂಗೆ' ಎಂದು ಅಮ್ಮನ ತಲೆಯನ್ನು ಎದೆಗಾನಿಸಿಕೊಂಡು ನಿಧಾನವಾಗಿ ನೀರು ಕುಡಿಸಿ ಮಲಗಿಸಿದಳು.

ಎದುರು ಮನೆಗೆ ಓಡಿದವಳೆ, 'ಅತ್ತೆ, ಅತ್ತೆ, ಇದ್ದೀರಾ...!' ಎಂದು ಕೂಗಿದಳು.

'ಯಾಕೆ ಜ್ಯೋತಿ ಇಷ್ಟು ಗಾಬರಿ ಆಗಿದ್ದೀಯಾ.. ಅಮ್ಮ ಹುಷಾರಾಗಿದ್ದಾಳೆ ತಾನೆ...!!'

'ಅಮ್ಮ ಯಾಕೊ ತುಂಬ ಸಂಕಟ ಪಡ್ತಿದ್ದಾಳೆ ಅತ್ತೆ, ಏನೋ ಒಂಥರಾ ಆಡ್ತಿದ್ದಾಳೆ, ನನ್ ಕೈಲಿ ನೋಡಕ್ಕಾಗ್ತಿಲ್ಲ. ಅಪ್ಪನೂ ಮನೇಲಿಲ್ಲ, ಬರ್ತೀರ ಅತ್ತೆ ನಂಗ್ಯಾಕೊ ಭಯ ಆಗ್ತಿದೆ..'

'ಹೆದರಬೇಡ ಕಣೆ, ಏನೂ ಆಗಲ್ಲ, ಬಾ.. ನಾನಿರ್ತೀನಿ ಅಪ್ಪ ಬರೋವರ್ಗು..' ಬಾಗಿಲು ಮುಂದೆ ಮಾಡಿ ಇಬ್ಬರೂ ಬಂದಾಗ, ರಾಧಮ್ಮ ನೆಮ್ಮದಿಯಾಗಿ ನಿದ್ದೆ ಮಾಡಿದ್ದು ನೋಡಿ ಸಮಾಧಾನ ಆಯ್ತು.

ಪಕ್ಕದಲ್ಲಿ ಕೂತು ರಾಧಮ್ಮನ ಹಣೆ ನೇವರಿಸುತ್ತಾ, ಹೇಗಿದ್ದವಳು ಹೇಗಾಗೋದೆ ಎಂದು ಮನಸಲ್ಲಿ ಅಂದುಕೊಳ್ಳುತ್ತಾ ಕಣ್ಣು ತುಂಬಿಕೊಂಡರು ಶಾಂತಮ್ಮ. ಎಷ್ಟು ತಡೆ ಹಿಡಿದರೂ, ನಿಲ್ಲದ ಕಣ್ಣೀರ ಹನಿ ರಾಧಮ್ಮನ ಕೆನ್ನೆಮೇಲೆ ಜಾರಿ ಎಚ್ಚರಗೊಳಿಸಿತ್ತು.

ಗಟ್ಟಿಯಾಗಿ ಕೈ ಹಿಡಿದು, ನೀನ್ಯಾಕೇ ಅಳ್ತೀಯಾ.. ಸಮಾಧಾನ ಮಾಡ್ಕೋ. ನಿಂಗೂ ಗೊತ್ತು ನಂದು ವಾಸಿಯಾಗದ ಖಾಯಿಲೆ ಅಂತ. ಸಮಯ ಹತ್ರ ಬಂದಾಯ್ತು. ಇವಳ ಜವಾಬ್ಧಾರಿ ಒಂದು ಕಳೆದಿದ್ರೆ ಚೆನ್ನಾಗಿತ್ತು ನೋಡು, ನೆಮ್ಮದಿಯಾಗಿ ಕಣ್ಣು ಮುಚ್ತಿದ್ದೆ. ಎಲ್ಲ ಅವನಾಟ. ಚಿಕ್ಕ ಮಗೂನಿಂದ ನೋಡಿದ್ದೀಯಾ ಜ್ಯೋತಿನ, ಒಂದು ಒಳ್ಳೇ ಮನೆ ಸೇರಿಸ್ತೀಯ. ಇವರಿಗಂತೂ ಏನೂ ಗೊತ್ತಾ....ಗಲ್ಲ. ಹೇಗೆ ನಿಭಾಯಿ..ಸ್ತಾರೋ ಏನೋ.. ಕಣೆ. ಇದೊಂದು ಕೆ.. ಲ್ಸ ಮಾ.... ಮಾ... ಡ್ತೀಯಾ.. ಮಾತು ತೊದಲುತ್ತಾ ಹಿಡಿದ ಕೈ ಸಡಿಲಾಗುತ್ತ ಕೆಳಗೆ ಜಾರಿತ್ತು.

ಅಮ್ಮ ಸತ್ತ ಆರು ತಿಂಗಳಲ್ಲೇ ಜ್ಯೋತಿಗೆ ವರ ಹುಡುಕಿ ಬಂದ ಒಳ್ಳೆಯ ಜಾತಕ ಹೊಂದಿಕೊಂಡಿತು. ತಾಯಿ ಇಲ್ಲದ ಹುಡುಗಿ, ಖರ್ಚುವೆಚ್ಚವಿಲ್ಲದೆ ನಾವೇ ಮಾಡಿಕೊಳ್ಳುತ್ತೇವೆ ಎಂದು ಮುಂದೆ ಬಂದರು. ಹುಡುಗನು ಸುಂದರವಾಗಿದ್ದ. ಮನೆಯವರಂತಿದ್ದ ಶಾಂತಮ್ಮ ದಂಪತಿಗಳ ಸಹಕಾರದಿಂದ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಟ್ಟ ಅಪ್ಪ ಮಗಳನ್ನು ಕಳಸಿಕೊಟ್ಟರು. ಅಮ್ಮನಂತಿದ್ದ ಶಾಂತತ್ತೆ, "ಅತ್ತೆ ಮನೇಲಿ ಮುತ್ತಾಗಿರು" ಅಂತ ಹೇಳುವ ಬುದ್ಧಿಮಾತನ್ನೆಲ್ಲ ಹೇಳಿ ಕಳಸಿಕೊಟ್ಟಿದ್ದರು.

ಕೆಲವೇ ದಿನಗಳಲ್ಲಿ ಅತ್ತೆ ಮನೆಯ ನಿಜವಾದ ಬಣ್ಣ ಬಯಲಾಯ್ತು. ಹುಡುಗ ದುಶ್ಚಟಗಳ ದಾಸ ಎಂದು. ಮನೆಗೆ ಬರುವ ಹುಡುಗಿಯಾದರೂ ಇವನನ್ನು ಸರಿದಾರಿಗೆ ತರುತ್ತಾಳೆಂಬ ಭರವಸೆಯಿಂದ ನೊಂದ ತಂದೆ ತಾಯಿ ಮಗನ ಅವಗುಣಗಳನ್ನು ಮುಚ್ಚಿಟ್ಟು ಮದುವೆ ಮಾಡಿದ್ದರೂ, ಒಂದು ಹುಡುಗಿಗೆ ಮೋಸಮಾಡಿದ್ದು ತಪ್ಪು ಎಂದು ಅನ್ನಿಸಿದಾಗ ಪಶ್ಚಾತ್ತಾಪಪಟ್ಟು ನೊಂದುಕೊಂಡವರು ಸೊಸೆಯ ಕೈ ಹಿಡಿದು, ನಮ್ಮ ತಪ್ಪನ್ನು ಮನ್ನಿಸು ತಾಯಿ, ಮಗನನ್ನು ಸರಿದಾರಿಗೆ ತರಲಾರದೆ ಸೋತಿದ್ದೇವೆ. ನಿನಗೇ ಬಿಟ್ಟಿದ್ದೇವೆ. ಮಗನನ್ನೂ ಈ ಮನೆಯನ್ನು ಉಳಿಸಿಕೊಡು, ಎಲ್ಲ ನಿನ್ನ ಕೈಲಿದೆ ಎಂದು ಕಣ್ಣು ತುಂಬಿಕೊಂಡು, ಮನಸು ಹಿಡಿಮಾಡಿಕೊಂಡು, ಕೇಳಿಕೊಂಡಿದ್ದರು.

ಆ ಸಮಯದಲ್ಲಿ ಶಾಂತತ್ತೆಯ ಬುದ್ಧಿಮಾತುಗಳು ಅವಳ ಕೈ ಹಿಡಿಯಿತು. ಎಲ್ಲರ ಮನವೊಲಿಸಿತು. ಕಷ್ಟಗಳನ್ನು ನೋವುಗಳನ್ನು ಸಹಿಸಲು ಶಕ್ತಿ ತುಂಬಿತ್ತು. ಗಂಡನನ್ನು ಸರಿದಾರಿಗೆ ತರುವಲ್ಲಿ ಅವಳ ಬುದ್ಧಿ, ತಾಳ್ಮೆಯನ್ನೆಲ್ಲ ಖರ್ಚು ಮಾಡಿ ಯಶಸ್ವಿಯಾಗಿ ಅತ್ತೆಮಾವನ ನಂಬಿಕೆ ಗಳಿಸಿದ್ದಳು.

**

ಬಂಧುಬಳಗ ಅಲ್ಲದಿದ್ದರೂ ಅಮ್ಮನ ಎಲ್ಲ ಕಷ್ಟಸುಖಗಳಲ್ಲಿ ಜೊತೆಗಿದ್ದವರು. ಅವರನ್ನು ಚಿಕ್ಕಂದಿನಿಂದ ಅತ್ತೆ ಅತ್ತೆ ಅನ್ನುತ್ತಿದ್ದ ಶಾಂತತ್ತೆ ಕಣ್ಣೀರಿಡುತ್ತಾ, ಅಮ್ಮನಂತೆ ತಬ್ಬಿಕೊಂಡು ಬುದ್ಧಿ ಹೇಳಿದ್ದರು. 'ಅತ್ತೆ ಮಾವನೆ ಅಪ್ಪ ಅಮ್ಮ.. ಗಂಡನೇ ನಿನಗೆ ದೇವರು.. ಬೈದರೂ ಎದುರಾಡಬೇಡ. ಏನೇ ಕಷ್ಟ ಬಂದರೂ ಸಂಸಾರದ ಗುಟ್ಟನ್ನು ನೆರೆಹೊರೆಯವರಲ್ಲಿ ಹೇಳಿಕೊಳ್ಳಬೇಡ. ಸಹನೆಯೇ ನಿನಗೆ ಶಕ್ತಿ.. ಎಲ್ಲರಿಂದ ಒಳ್ಳೆಯವಳು ಅನ್ನಿಸಿಕೊ. ಹಾಗೆ ಅನ್ನಿಸಿಕೊಳ್ಳುವುದು ಸುಲಭದ ಮಾತಲ್ಲ. ಆ ಜಾಣ್ಮೆ ನಿನ್ನಲ್ಲಿದೆ. ನಿನ್ನ ಒಳ್ಳೆಯತನವೆ ನಿನ್ನನ್ನು ಕಾಯತ್ತೆ.. ಹೋಗಿ ಬಾ ಮಗಳೆ.., ಹುಟ್ಟಿದ ಮನೆಯಿಂದ ಹೋಗಿ ಮೆಟ್ಟಿದ ಮನೆಯ ಜ್ಯೋತಿ ಬೆಳಗು. ಮನೆ ಬೆಳಗುವ ದೀಪವಾಗು. ಸುಡುವ ಕಿಚ್ಚಾಗಬೇಡ. ಎಲ್ಲವೂ ನಿನ್ನ ಕೈಲಿದೆ. ಏನೇಬಂದರೂ ತಾಳ್ಮೆಯಿಂದ ಸಾಧಿಸು. ಆ ಮನೆ ಸದಾ ಬೆಳಕಾಗಿರಲಿ. ಆಮ್ಮನ ಆಶೀರ್ವಾದ ನಿನ್ನ ಜೊತೆ ಇದೆ. ಅಪ್ಪನನ್ನು ಮರಿಬೇಡ... ನಿನ್ನ ಒಳ್ಳೆಯತನದ ಮುಂದೆ ಯಾವ ದುಷ್ಟ ಮನಸುಗಳು ಬಾರದಿರಲಿ.. ಏನೇ ಬಂದರೂ ಈ ಶಾಂತತ್ತೆ ನಿನ್ನ ಜೊತೆಗಿರುತ್ತಾಳೆ..' ಎಂದು ಹೇಳಿ ಕಳಿಸಿದ್ದರು. ಅವರು ಹೇಳಿದಂತೆಯೇ ನಡೆದುಕೊಂಡಿದ್ದಳು. ಪ್ರತಿಹೆಜ್ಜೆಯಲ್ಲೂ ಅವರ ಮಾತು ನೆನಪಾಗುತ್ತಿತ್ತು. ಹಾಗೆಯೇ ಎಲ್ಲ ಕಷ್ಟಗಳನ್ನು ಸಹಿಸಿ, ಮನೆಯಲ್ಲಿ ಸಂತೋಷ ತುಂಬಿದ್ದಳು.

ಅಂದಿನಿಂದ ಇಂದಿನವರೆಗೂ ಅತ್ತೆಯ ಮಾತಿನಂತೆ ನಡೆದುಕೊಂಡು, ಗಂಡನನ್ನು ಸರಿದಾರಿಗೆ ತಂದು, ಅತ್ತೆ ಮಾವರನ್ನು ಅಪ್ಪ ಅಮ್ಮನಾಗಿ ಕಂಡಳು.

ನಮ್ಮ ಮನೆ ಮನ ಬೆಳಗಿದ ಜ್ಯೋತಿ ಇವಳು.. ಇವಳು ನನ್ನ ಸೊಸೆ ಅಲ್ಲ, ಮಗಳು. ಮನೆ ಬೆಳಗಿದವಳು ಎಂದು ಅತ್ತೆ ಮಾವ ಎಲ್ಲರಲ್ಲೂ ಹೇಳಿಕೊಂಡು ಆವರ ಕಣ್ಣುಗಳು ಮಿನುಗುವಾಗ, ಅವಳ ಮನಸು ಧನ್ಯತಾ ಭಾವದಿಂದ ಶಾಂತತ್ತೆಯನ್ನು ನೆನೆಯುತ್ತದೆ...!!

ಶಾಂತತ್ತೆಯಂತೆ ಬುದ್ಧಿ ಹೇಳುವ, ಎಲ್ಲ ಕಷ್ಟಗಳನ್ನೂ ತಾಳ್ಮೆಯಿಂದ ಸಹಿಸಿ ಮನೆ ಬೆಳಗಿದ ಜ್ಯೋತಿಯಂತಹ, ಎಲ್ಲಕ್ಕಿಂತ ಮುಖ್ಯವಾಗಿ ಮಗನ ಅವಗುಣಗಳನ್ನು ಮುಚ್ಚಿಟ್ಟು ಮದುವೆ ಮಾಡಿ, ಒಂದು ಹೆಣ್ಣಿಗೆ ಮೋಸ ಮಾಡಿದೆನಲ್ಲ ಎಂದು ಪಶ್ಚಾತ್ತಾಪ ಪಡುವಂತ ಅತ್ತೆ. ಇವರ ಸಂತತಿ ಸಾವಿರವಾಗಲಿ.

ಎಲ್ಲ ಮಹಿಳೆಯರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳು.


***

ಪುಸ್ತಕ ಪರಿಚಯ

‘ಕೊಳದ ಮೇಲಿನ ಗಾಳಿ’

(ಲೇಖಕಿ: ಡಾ.ಎಂ.ಆರ್.ಕಮಲ)

– ಕೆ.ಎನ್.ಭಗವಾನ್



ಪು.ತಿ.ನ. ಕಾವ್ಯಲೋಕದಲ್ಲಿ ಮಲೆದೇಗುಲ ಎಂಬ ಪದವನ್ನು ಕಂಡಾಕ್ಷಣ, ನಮ್ಮ ಕಣ್ಣೆದುರು ಮೇಲುಕೋಟೆಯ ನರಸಿಂಹ ಸ್ವಾಮಿಯ ದಿವ್ಯತೆ ಎದ್ದು ನಿಲ್ಲುತ್ತದೆ. ಅಲ್ಲಿನ ಅಕ್ಕತಂಗಿಯರ ಕೊಳ, ಆಕಾಶ ಗೋಪುರಗಳು ಹಲವಾರು ಚಲನಚಿತ್ರಗಳಲ್ಲಿ ಗೀತಚಿತ್ರಗಳು ಕಾವ್ಯವಾಗಿರುವುದನ್ನು ಕಂಡಿದ್ದೇವೆ. ಅಂಥ ಪರಿಸರದಿಂದ ತೇಲಿ ಬಂದ ಗಾಳಿಗೆ ಡಾ. ಎಂ.ಆರ್. ಕಮಲ ಅವರು ಪರಿಮಳಯುಕ್ತ ಲಹರಿಗಳನ್ನು ಈ ಕೃತಿಯಲ್ಲಿ ಹರಿಸಿದ್ದಾರೆ. ಅವರಂತೆ ನಾವೂ ಮೆಚ್ಚುವ ಇಪ್ಪತ್ತೈದು ಪು.ತಿ.ನ. ಕವನಗಳ ಪೂರಕ ವ್ಯಾಖ್ಯಾನ ಇಲ್ಲಿನ ನೂರಾಹತ್ತು ಪುಟಗಳಲ್ಲಿ ತೆರೆದುಕೊಂಡಿದೆ. ಅವರು ಸೃಜನಾತ್ಮಕವಾಗಿ ಬಿತ್ತಿರುವ ವಿಚಾರ ಲಹರಿಗಳು ಆಹ್ಲಾದಕರ ಗದ್ಯ ಕಾವ್ಯಗಳೇ ಎನಿಸಿಬಿಟ್ಟಿವೆ. ಒಟ್ಟಾರೆಯ ಪೂರಕ ವ್ಯಾಖ್ಯಾನ ಪು.ತಿ.ನ. ಕಾವ್ಯ ಸಂಪತ್ತಿನ ಮರು ಓದಿಗೂ ಸಹೃದಯರನ್ನು ತೊಡಗಿಸಬಹುದಾದ ಒಂದು ಪ್ರವೇಶಿಕೆಯಾಗಿದೆ.

‘ಕೊಳದ ಮೇಲಿನ ಗಾಳಿ’ ಪು.ತಿ.ನ. ಟ್ರಸ್ಟ್ ಮೂಲಕವೇ ಪ್ರಕಟವಾಗಿರುವುದು ಕೃತಿಯ ಗೌರವವನ್ನು ಹೆಚ್ಚಿಸಿದೆ. ಟ್ರಸ್ಟಿನ ಹಾಲಿ ಅಧ್ಯಕ್ಷರಾಗಿರುವ ಡಾ. ಹೆಚ್.ಎಸ್.ವೆಂಕಟೇಶ ಮೂರ್ತಿಯವರು ಈ ಕೃತಿಯನ್ನು ‘ಪು.ತಿ.ನ. ಅವರ ಇಪ್ಪತ್ತೈದು ಕವಿತೆಗಳ ಅನುಸಂಧಾನ’ ಎಂದಿರುವುದು ಔಚಿತ್ಯಪೂರ್ಣ. ಇಂಥ ಅನುಸಂಧಾನದ ಅನಾವರಣಕ್ಕೂ ಮೊದಲು ಲೇಖಕಿ, ‘ಪ್ರತಿಭಾ ವಿಲಾಸದಲ್ಲಿ ಮೆರೆಯುವ ಬಹು ದೊಡ್ಡ ಕವಿಗಳು ನಮ್ಮ ವೈಯಕ್ತಿಕ ಜೀವನದ ಮೇಲೆ ನಮಗರಿವಿಲ್ಲದಂತೆ ಬೀರುವ ಪ್ರಭಾವ ವಿವರಿಸಲಾಗದು’ ಎಂದಿರುವುದು ಗಮನಾರ್ಹ.

‘ಹೂಗಳೇತಕೆ?’ ಕವಿತೆಯ ವ್ಯಾಖ್ಯಾನ, ಅದು ಕೊನೆಯಲ್ಲಿ ಸ್ಫುರಿಸುವ ‘ಮತ್ತೊಬ್ಬರ ದೌರ್ಬಲ್ಯಗಳನ್ನು ಹಿಡಿದು ನೋಯಿಸುವ ಎಲ್ಲ ಸಂಬಂಧಗಳನ್ನೂ ಧಿಕ್ಕರಿಸಿ ಬದುಕುವುದು ನನ್ನ ಪಾಲಿಗೆ ಹೆಚ್ಚು ಅರ್ಥಪೂರ್ಣ’ ಎಂಬ ನಿರ್ಣಯವೂ, ’ಹೃದಯದ ಬೊಗಸೆಯಲ್ಲಿ ಹೂ ತುಂಬಿಕೊಂಡು ಪ್ರೀತಿಯಿಂದ ನಿಲ್ಲಲೇಬೇಕು. ಸ್ವೀಕರಿಸದೆ ಹೋದಲ್ಲಿ ಬಾಡಿದ ಹೂಗಳನ್ನು ಚೆಲ್ಲಿ ಹೊಸ ಹೊಸ ಹೂಗಳನ್ನು ತುಂಬಿಕೊಳ್ಳೋಣ’ ಎಂಬ ವಿವೇಕವೂ ಕವಯಿತ್ರಿಯ ಚಲನಶೀಲ ಪ್ರವೃತ್ತಿಯ ಮೂಲ ಆಶಯಗಳೇ ಆಗಿವೆ.

‘ಬಯಕೆ – ಕೂಡಿಕೆ ಎರಡೂ ಸೇರುವ ಅಚ್ಚರಿಯ ಘಳಿಗೆಯನ್ನು ತಿಳಿದೋ ತಿಳಿಯದೆಯೋ ನಿರ್ಲಕ್ಷಿಸಿ, ಅಪೂರ್ವವಾದುದನ್ನೇನೋ ಕಳೆದುಕೊಂಡು ಬಿಟ್ಟಿರುತ್ತಾರೆ’ (ಬಯಕೆ ಬಳ್ಳಿ ಚಿಗುರಿದಾಗ) ಎಂಬಲ್ಲಿ ಅನುಕಂಪವಿದೆ, ‘ಅದು ಚಂಡಮಾರುತವಾಗಿ ಮರ, ಮನೆಗಳನ್ನು ಬೀಳಿಸುವುದಿಲ್ಲ, ಸೌರಭವನ್ನು ಹೊತ್ತು ತರುವ ಹರಿಕಾರನಾಗುವುದು’ (ಗಾಳಿ ಹಾಡಾಗುವುದೇನು!) ಎಂಬಲ್ಲಿ ಇತ್ಯಾತ್ಮ್ಯಕತೆ ಇದೆ. ’ಒಂದು ಹಾಡು, ಒಂದು ಕೃತಿ, ಒಂದು ಚಿತ್ರ ಅದ್ಭುತ

ಅಪರೂಪ' ಎನಿಸುವುದು – ಅವು ನಿಜಕ್ಕೂ ಹಾಗಿರುವುದರಿಂದಲೋ? ಅಥವಾ ಅದಕ್ಕೊಂದು ಸೂಕ್ತ ಕಾಲ, ಸುಂದರ ಹಿನ್ನೆಲೆ ಒದಗಿರುವುದ ರಿಂದಲೋ ಎಂಬ ಜಿಜ್ಞಾಸೆ 'ಹಕ್ಕಿ ಹಾಡಿದುದು ಇಂಪೇ?' ಎಂಬ ಲೇಖನದಲ್ಲಿದೆ.

'ಸದಾಕಾಲ ಕೆಲಸದಲ್ಲೇ ಮುಳುಗಿ ತನ್ನನ್ನೇ ಮರೆತಿದ್ದ ಅಮ್ಮ ಕೊನೆಗೆ ನಮ್ಮನ್ನೂ ಮರೆತುಬಿಟ್ಟಳು' ಎಂಬ ವಿಷಾದವು 'ಚಿನ್ನ ನೆರೆಯಲ್ಲಿ ಕಾಣದು' ಎಂಬ ಲೇಖನದಲ್ಲಿ ಧ್ವನಿಸಿದೆ.

ಪುಸ್ತಕದ ವಿವರ:

'ಕೊಳದ ಮೇಲಿನ ಗಾಳಿ'

ಲೇಖಕಿ: ಎಂ.ಆರ್. ಕಮಲ

ಪ್ರಕಾಶನ:

ಡಾ. ಪು.ತಿ.ನ.ಟ್ರಸ್ಟ್, ಬೆಂಗಳೂರು.

ಮೊದಲ ಮುದ್ರಣ: 2019

ಪುಟಗಳು: 136 ಬೆಲೆ : ರೂ.200/–

ದಿನಪತ್ರಿಕೆಯೆಂಬ ಅಂಗೈಯಗಲದ ತೆರೆದ ಕನ್ನಡಿಯಲ್ಲಿ ಇಡೀ ಜಗತ್ತಿನ ನೆರಳು ಸುಳಿಯುತ್ತದೆ. ವಿಕೃತಿ, ವೈಪರೀತ್ಯಗಳೆಲ್ಲ ಮೆರೆಯುತ್ತವೆ. ಆದಾಗ್ಯೂ ಹಿತವೆನಿಸುವ ಕಿಂಚಿತ್ತೂ ಮಿಕ್ಕೆಲ್ಲ ಕಹಿಗಳನ್ನೂ ಮರೆಸುತ್ತೆ ಎಂಬ ಸಮಾಧಾನ 'ಆಯ್ಕೆಯೇ ಕೂಗುಮಾರಿಯಾದಾಗ!' ಲೇಖನದಲ್ಲಿದೆ.

'ಹೆಸರಿಲ್ಲದೆ ಬರೀ ಉಸಿರಾಡುತ್ತ–ಹದಗೆಟ್ಟಿರುವ ನೆಲ, ಬದುಕನ್ನು ಹಸನು ಮಾಡುತ್ತ, ಸಂಬಂಧಗಳನ್ನು ಬೆಸೆಯುತ್ತಾ ಹೋಗುವ ಈ ಜನಕ್ಕೆ ಹೆಸರು ಬೇಕಿಲ್ಲ. ಅಂಥವರೇ 'ಹೆಸರೇ ಇಲ್ಲದವರು'.

ಇಂತೆಲ್ಲ ವೈವಿಧ್ಯಮಯ ಚಿಂತನೆಗಳು ಮೂಲದ್ರವ್ಯಗಳಾಗಿ ಇಲ್ಲಿನ ಪ್ರಬಂಧಗಳಲ್ಲಿ ಲಹರಿಸಿವೆ. ಅನೇಕಾನೇಕರ ಮನ ಕಲಕುವ, ಭಕ್ತಿ ಪರಾಕಾಷ್ಠೆಯನ್ನು ಮೆರೆಸುವ ಪು.ತಿ.ನ. ಅವರ ಒಂದು ಗೀತೆ 'ರಂಗವಲ್ಲಿ'. ಮಲೆಯೊಡೆಯನು ಶುದ್ಧ ಮನಸ್ಸಿನ ಅರ್ಪಣಾಭಾವಕ್ಕೆ ಒಲಿದಾನೆಯೇ ಹೊರತು ಚಿನ್ನ, ರನ್ನ, ವಜ್ರಾಭರಣಗಳ ಅಲಂಕಾರಕ್ಕಲ್ಲ ಎಂಬುದನ್ನು ದೇಗುಲದ ಹಾದಿಯಲ್ಲಿ ನಿತ್ಯವೂ ರಂಗೋಲಿ ಬಿಡಿಸುವ ಬಡ ಮುದುಕಿಯ ಮೂಲಕ ಚಿತ್ರಿಸುತ್ತಾರೆ ಪು.ತಿ.ನ.

'ಎಲ್ಲ ಅಮ್ಮಂದಿರೂ ಕಾಶಿಗೆ ಹೋಗಬೇಕಿಲ್ಲ' ಎಂಬ ಶೀರ್ಷಿಕೆಯಡಿ ಮಹಾನಗರಗಳು ಕಾಂಕ್ರೀಟ್ ಕಾಡುಗಳಾಗುತ್ತಿರುವ ಕಾಳಜಿಯಿದೆ. ಜೊತೆಜೊತೆಗೆ, ಅದೇ ನಗರವನ್ನು 'ಅವಕಾಶಗಳ ಅಮರಾವತಿ' ಎಂದೂ ಬಣ್ಣಿಸುತ್ತಾರೆ. 'ವೃಕ್ಷೋ ರಕ್ಷತಿ ರಕ್ಷಿತಃ' ಎಂಬ ವನಮಹೋತ್ಸವ ಸಂದೇಶವನ್ನು ಈ ಲೇಖನ ಸಾರುತ್ತದೆ.

ಆನಂದ ತುಂದಿಲ ಮನೋಭೂಮಿಕೆಯಲ್ಲಿ ಅರಳಿ ನಿಂತ ಇಲ್ಲಿನ ವಿಚಾರಗಳು ಭಾಷ್ಯಗಳಾಗಿಯೂ, ಲಲಿತ ಪ್ರಬಂಧದ ಶುದ್ಧ ಮಾದರಿಗಳಾಗಿಯೂ ಒದುಗರ ಮನಸ್ಸನ್ನು ಸೆರೆ ಹಿಡಿಯುತ್ತವೆ. ನಾನಂತೂ 'ಕೊಳದ ಮೇಲಿನ ಗಾಳಿ'ಯನ್ನು ಆಗಿಷ್ಟು ಈಗಿಷ್ಟು ಆಘ್ರಾಣಿಸಿ ಹೃದಯ ತುಂಬಿಕೊಂಡಿದ್ದೇನೆ. ಇದರ ಶುದ್ಧ ತಂಬೆಲರಿನಿಂದ ಮನಸ್ಸು ಹಗುರಾಗಿದೆ.ಇಂಥ ಸೊಗಸಾದ ಕೃತಿಯ ರಚನಕಾರ್ತಿ ಡಾ. ಎಂ.ಆರ್.ಕಮಲ ಅವರಿಗಷ್ಟೇ ಅಲ್ಲದೆ, ಸುಂದರ ಮುಖಪುಟ, ಒಳಪುಟಗಳ ವಿಶಿಷ್ಟ ವಿನ್ಯಾಸ ಮತ್ತು ಮುದ್ರಣಕ್ಕಾಗಿ ಸ್ವಾನ್ ಪ್ರಿಂಟರ್ಸ್‌ನ ಶ್ರೀ ಕೃಷ್ಣಮೂರ್ತಿ ಅವರಿಗೂ ಧನ್ಯವಾದಗಳು.

***

ಜೀವ ಜಂತುಗಳ ಪಾಲು ಕಸಿದವರು ಯಾರು

– ಪೂರ್ಣಿಮ ಭಗವಾನ್

ಸಕಲ ಜೀವಿಗಳ ಸೃಷ್ಟಿಕರ್ತ ದೇವರು
ದೇವರು ಎಲ್ಲಿಹನೆಂದು ಯಾರೂ ಕಾಣರು
ಕಾಣದ ಶಕ್ತಿ ಚೈತನ್ಯವನು ನಂಬುವರು
ನಂಬಿ ಪೂಜೆ ಪ್ರಾರ್ಥನೆ ಸಲ್ಲಿಸುವರು

ಸಲ್ಲುವರು ಜಗದಲ್ಲಿ ಸತ್ಪಾತ್ರ ಜನರು
ಜನರು ಜೀವರಾಶಿಯಲ್ಲೆ ಬುದ್ಧಿವಂತರು
ಬುದ್ಧಿಬಲದಿ ಏನೆಲ್ಲಾ ಕಾರ್ಯವೆಸಗುವರು
ಎಸಗಿ ನಂತರ ಪಶ್ಚಾತ್ತಾಪ ಪಡುವರು

ಪಡುವ ಬವಣೆಗಳಗೆ ಅವರೇ ಕಾರಣರು
ಕಾರಣ ಏನೆಂದು ಬೇರೆಡೆ ಹುಡುಕುವರು
ಹುಡುಕಿ ಸಿಗದಿರೆ ನಿರಾಶೆ ಹೊಂದುವರು
ಹೊಂದಿಹ ಬಯಕೆಗಳಗೆ ಮಿತಿಯಿಡರು

ಮಿತಿಯಿರದ ಆಸೆಗಳಗೆ ದಾಸರವರು
ದಾಸರೆಂದರೆ ನಿಜ ಕನಕ ಪುರಂದರರು
ಪುರಂದರರ ಅನುಸರಿಸೆ ನ್ಯಾಯವಂತರು
ನ್ಯಾಯ ನೀತಿ ಪಾಲಸುವ ಘನವಂತರು

ಘನತೆ ಗೌರವ ಬರಹಕೆ ಮೀಸಲಡುವರು
ಮೀಸಲು ನಿಸರ್ಗ ಸಂಪತ್ತು ತಮ್ಮದೆಂಬರು
ತಮ್ಮತನವ ಮೆರೆಸುವ ಜೀವಿಗಳವರು
ಜೀವ ಜಂತುಗಳ ಪಾಲು ಕಸಿದವರು ಯಾರು?

***

ನನ್ನೊಳಗಿನ ನಾನು

– ಪೂರ್ಣಿಮ ಭಗವಾನ್

ನನ್ನೊಳಗಿಹ ನನ್ನನ್ನು ಅರಿಯದೇ
ಬನ್ನವದು ಬದುಕನ್ನು ಬಿಡುವುದೇ
ನನ್ನ ನಾನು ಮರೆತರೇನು ಸುಖವಿದೇ
ನನ್ನತನ ತೊರೆದರೇನು ಸೊಗವಿದೇ

ಶುಷ್ಕತೆಗೆ ಮರುಳಾದ ಮನುಜನೇ
ನಿಷ್ಠೆಯಿಂದ ಕೆಲಸವನು ಮಾಡುವನೇ
ನಿಷ್ಕವನು ಸುಲಭದಲ ಪಡೆಯುವನೆ
ಶಿಷ್ಟಜನರ ನಿಲುವೇನು ಅರಿಯನೇ

ಹೇಳಲೆಷ್ಟು ಚೆನ್ನ ನನ್ನೊಳಗಿನ ನಾನು
ಕೇಳಲೆಷ್ಟು ಸೊಗಸು ಸುಸ್ವರಾಗ ತಾನು
ನೋಡಲೆಷ್ಟು ಸುಂದರ ಬುವಿ ಬಾನು
ಕೂಡಿ ಬಾಳುತಿರೆ ಸುಮಧುರ ಜೇನು

ಮೊದಲಗೆ ಜೀವನ ನಿಯಮ ಬದ್ಧ
ಬದುಕು ಹಸನಾದ ಪಯಣ ಸಿದ್ಧ
ಬದಲಾವಣೆ ಜಗದ ನಿಯಮ ಬುದ್ಧ
ಅದನರಿತ ಬಾಳುವೆ ಇರಲ ಪರಿಶುದ್ಧ.

***

ಎಷ್ಟೊಂದು ಕಾಲದಿಂದ ಹಂಬಲಿಸಿದೆ...

– ಟಿ. ಎಸ್. ಶ್ರವಣಕುಮಾರಿ

ಕಾವ್ಯಶ್ರೀ ಅಜೇರುವಿನ ವಿಶಿಷ್ಟವಾದ ಕಂಠದಲ್ಲಿ "ಎಷ್ಟೊಂದು ಕಾಲದಿಂದ ಹಂಬಲಿಸಿದೆ" ಭಾವಗೀತೆಯನ್ನು ಕೇಳಿದಾಗ ಮಂತ್ರಮುಗ್ಧಳಾಗಿಬಿಟ್ಟಿದ್ದೆ. ಎಷ್ಟು ಸುಂದರವಾದ ಸಾಹಿತ್ಯ... ಅದೆಂಥ ಸಿರಿಕಂಠದ ಗಾಯನ... ಹಾಡು ಕೇಳುತ್ತಿರುವಷ್ಟು ಹೊತ್ತೂ ಯಾವುದೋ ಮಾಯದ ಲೋಕದಲ್ಲಿ ಪಯಣಿಸುತ್ತಿರುವಂತಿತ್ತು. ಇಷ್ಟು ಚಂದದ ಗೀತೆ ಯಾವ ಕವಿಯಿಂದ ಬರೆಯಿಸಿಕೊಂಡದ್ದು ಎಂದು ಹುಡುಕಿದರೆ ಅದು ಶ್ರೀಯುತ ಸುಬ್ರಾಯ ಚೊಕ್ಕಾಡಿಯವರದ್ದು. ನಂತರ ಅಲ್ಲಲ್ಲಿ ಅವರ ಬಗ್ಗೆ ಒಂದಷ್ಟು ವಿವರಗಳನ್ನು ಓದಿಕೊಂಡೆ. ಎಂದಾದರೊಮ್ಮೆ ಅವರನ್ನು ಕಾಣುವ ಭಾಗ್ಯ ನನಗೆ ದೊರೆತದ್ದೇ ಆದರೆ ಅವರನ್ನು ಮಾತನಾಡಿಸಬೇಕು; ನನ್ನ ಸಂತೋಷವನ್ನು ಅವರೊಂದಿಗೆ ಹೇಳಿ ಪುನೀತಳಾಗಬೇಕು ಎಂದೆನ್ನಿಸಿಬಿಟ್ಟಿತು. ಅವರು ಬಿಗುವಿನ ವ್ಯಕ್ತಿಯಾಗಿದ್ದರೆ...ರೆ...ರೆ_ ಎನ್ನುವ ಸಂಶಯ ಮನವನ್ನು ಕಾಡುತ್ತಿದ್ದರೂ, ಅಷ್ಟು ನವಿರಾದ ಭಾವವನ್ನು ಹೊಮ್ಮಿಸುವ ಕವಿತೆಯನ್ನು ಬರೆದವರು ಕಠಿಣ ಮನಸ್ಸಿನವರಾಗಲು ಸಾಧ್ಯವೇ ಇಲ್ಲ, ಸರಳ ಸ್ವಭಾವದವರೇ ಆಗಿರುತ್ತಾರೆ ಎನ್ನುವ ನಂಬಿಕೆಯೂ ಜೊತೆಜೊತೆಗೆ. ಅವರನ್ನು ನೋಡುವ, ಅವರೊಂದಿಗೆ ಮಾತನಾಡುವ ಸಮಯಕ್ಕಾಗಿ ಎಷ್ಟೋ ಕಾಲ ಹಂಬಲಿಸಿದೆ...

ದೇವರು ನಮ್ಮ ಯಾವ ಪ್ರಾಮಾಣಿಕವಾದ ಆಶಯಗಳಿಗೂ ಒಂದು ದಾರಿಯನ್ನು ಖಂಡಿತವಾಗಿಯೂ ತೋರಿಸುತ್ತಾನೆ ಎನ್ನುವುದು ಸತ್ಯಸ್ಯಸತ್ಯ! ನನ್ನ ಕಥಾ ಸಂಕಲನ "ಅಸ್ಪಷ್ಟ ತಲ್ಲಣಗಳು"ವನ್ನು ಓದಿದ ಶ್ರೀಮತಿ ಗಿರಿಜಾ ಶಾಸ್ತ್ರಿ ಆ ಪುಸ್ತಕದ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಫೇಸ್ಬುಕ್‌ನಲ್ಲಿ ಬರೆದಿದ್ದರು. ಅದನ್ನು ನೋಡಿದ ಶ್ರೀಯುತ ಸುಬ್ರಾಯ ಚೊಕ್ಕಾಡಿಯವರು "ಈ ಪುಸ್ತಕ ಎಲ್ಲಿ ಸಿಗುತ್ತೆ? ನಿಮ್ಮ ವಿಮರ್ಶೆಯನ್ನು ಓದಿ ನನಗೂ ಓದುವ



ಕುತೂಹಲವಾಗಿದೆ, ತರಿಸಿಕೊಳ್ಳುವೆ" ಎಂದು ಬರೆದಿದ್ದರು. ಅಬ್ಬಾ ಪುಣ್ಯವೇ ಪಣ್ಣಾದಂತೆ ಎಂದರೆ ಇದೇ ಅಲ್ಲವೇ! ತಕ್ಷಣವೇ ನಾನೇ ಪುಸ್ತಕವನ್ನು ಕಳಿಸುವೆನೆಂದು ಹೇಳಿ ವಿಳಾಸವನ್ನು ನೀಡಲು ಕೇಳಿಕೊಂಡೆ. ಮರು ಟಪಾಲಿನಲ್ಲೇ ಅವರಿಗೆ ಪುಸ್ತಕವನ್ನು ಕಳುಹಿಸಿದ್ದೂ ಆಯಿತು.

ದಿನದಿನವೂ ನನ್ನ ನಿರೀಕ್ಷೆ "ಅಷ್ಟು ದೊಡ್ಡ ಸಾಹಿತಿ ನನ್ನ ಪುಸ್ತಕವನ್ನು ನಿಜಕ್ಕೂ ಓದುತ್ತಾರೆಯೇ? ಓದಿದರೂ ಅದೆಷ್ಟು ಕಾಲ ತೆಗೆದುಕೊಳ್ಳುತ್ತಾರೋ? ಓದಿದ ಮೇಲೆ ತಮ್ಮ ಅಭಿಪ್ರಾಯ ವನ್ನೇನಾದರೂ ತಿಳಿಸಬಹುದೆ?" ಹೀಗೆ. ಆದರೆ ಚೊಕ್ಕಾಡಿಯವರು ಹೆಚ್ಚು ಕಾಯಿಸಲಿಲ್ಲ; ಒಂದು ವಾರದೊಳಗೇ ಅವರಿಂದ ವಾಟ್ಸಾಪ್ ಸಂದೇಶ ಬಂತು. ಸಂಕಲನದ ಬಗ್ಗೆ ಬಲು ಮೆಚ್ಚುಗೆಯ ನುಡಿಗಳನ್ನಾಡಿದ್ದರು. ನನ್ನ ಬರವಣಿಗೆಯಲ್ಲಿರುವ ಮಿತಿಯನ್ನು ಗುರುತಿಸಿದ್ದರು. ಅದರಿಂದ ಹೊರಬರುವ ಬಗ್ಗೆಯೂ ಹಲವು ಸಲಹೆಗಳನ್ನು ನೀಡಿದ್ದರು. ಒಬ್ಬ ಹಿರಿಯ ಸಾಹಿತಿ ಈಗಿನ್ನೂ ಆ ಕ್ಷೇತ್ರದಲ್ಲಿ ಕಾಲಿಡುತ್ತಿರುವ ಕಿರಿಯರಿಗೆ ಏನನ್ನು ಹೇಳಬೇಕೋ

ಅದಕ್ಕೊಂದು ಮಾದರಿಯಂತಿತ್ತು ಅವರ ಅಭಿಪ್ರಾಯ. ಅದನ್ನೋದಿ ನಾನಂತೂ ಭೂಮಿಯಿಂದ ನಾಲ್ಕು ಇಂಚಿನ ಮೇಲೇ ಓಡಾಡಿದೆ. ಅದೆಷ್ಟು ಸಂಭ್ರಮ!! ಅವರು ಬರೆದದ್ದನ್ನು ಫೇಸ್ಬುಕ್‌ನಲ್ಲಿ, ವಾಟ್ಸಾಪಿನಲ್ಲಿ ಹಂಚಿಕೊಂಡು ನನ್ನ ಆನಂದವನ್ನು ಲೋಕಕ್ಕೆಲ್ಲಾ ತಿಳಿಸಿಬಿಟ್ಟೆ. ಕರೆಮಾಡಿ ಅದೆಷ್ಟು ವಂದನೆಗಳನ್ನು ಸಲ್ಲಿಸಿದರೂ ಸಾಕೆನಿಸುತ್ತಿಲ್ಲ.

ನಂತರ ಮೂರು ವರ್ಷಗಳ ಹಿಂದೆ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗುವ ಸಂದರ್ಭ ಒದಗಿಬಂತು. 'ಹೇಗೂ ಅಷ್ಟು ದೂರ ಹೋಗಿರುತ್ತೇವೆ. ಚೊಕ್ಕಾಡಿಯವರನ್ನು ಒಮ್ಮೆ ನೋಡಿ ಬಂದರೆ ಹೇಗೆ' ಎನ್ನುವ ಆಸೆ ಗರಿಗೆದರಿತು. ಹೊರಡುವ ಮುಂಚಿತವಾಗಿ ಅವರಿಗೊಮ್ಮೆ ಕರೆಮಾಡಿ ಕೇಳೋಣವೆಂದುಕೊಂಡರೂ ದೇಗುಲದ ನಮ್ಮ ಕಾರ್ಯಕ್ರಮ ಎಷ್ಟು ಹೊತ್ತಿಗೆ ಮುಗಿಯುವುದೋ ನೋಡಿಕೊಂಡು ನಂತರ ಕೇಳೋಣ, ಅಕಸ್ಮಾತ್ ದೇವಸ್ಥಾನದಲ್ಲೇ ಹೊತ್ತಾಗಿ, ಸಾಧ್ಯವಾಗದೇ ಹೋದರೆ? ಇನ್ನೂ ಕೊಲ್ಲೂರು, ಶೃಂಗೇರಿ ಕಾರ್ಯಕ್ರಮ ಗಳವೆಯಲ್ಲ ಎಂದುಕೊಂಡು ಸುಮ್ಮನಾದೆ. ಆದರೆ ಅಂದುಕೊಂಡಿದ್ದಕ್ಕೂ ತುಂಬಾ ಮುಂಚಿತವಾಗಿಯೇ ಪೂಜೆ, ದರ್ಶನ ಕಾರ್ಯಕ್ರಮಗಳು ಮುಗಿದ ನಂತರ "ಬರಬಹುದೇ" ಎಂದು ಕೇಳಲು ಅವರಿಗೆ ಫೋನಾಯಿಸಿದೆ. ತೆಗೆಯಲಿಲ್ಲ. ಮೊದಲೇ ಮಾಡಿದ್ದರೆ ಒಳ್ಳೆಯದಿತ್ತೇನೋ ಎನ್ನುವಾಗಲೇ ಅವರಿಂದಲೇ ಕರೆಬಂತು. 'ನೋಡಲು ಬರಬಹುದೇ' ಎಂದು ಕೇಳಿದೆ. ಅಂದು ಪಕ್ಕದ ಊರಿನ ಶಾಲೆಯಲ್ಲಿ ಏನೋ ಕಾರ್ಯಕ್ರಮವಿದ್ದು ಅದಕ್ಕೆ ಮುಖ್ಯ ಅತಿಥಿಗಳಾಗಲು ಒಪ್ಪಿಕೊಂಡಿದ್ದರು. ಹಾಗಾಗಿ 'ಮಧ್ಯಾಹ್ನದ ನಂತರ ಬರಬಹುದು' ಎಂದರು. ನಮಗೆ ಅಷ್ಟು ಸಮಯವಿರಲಿಲ್ಲ. ಮುಂದೆಂದಾದರೂ ಅವರು ಬೆಂಗಳೂರಿಗೆ ಬಂದಾಗಲಾಗಲೀ, ಇಲ್ಲವೇ ನಾವೇ ಮತ್ತೊಮ್ಮೆ ಈ ಕಡೆಯ ಪ್ರವಾಸಕ್ಕೆ ಬಂದಾಗಲಾಗಲೀ ಭೇಟಿಮಾಡುವ ಆಶಯವನ್ನು ವ್ಯಕ್ತಪಡಿಸಿದೆ. ಅವರೂ ಖುಷಿಪಟ್ಟರಲ್ಲದೆ ಹಾಗೆ ಬಂದಾಗ ಅವರ ಮನೆಯಲ್ಲೇ ಒಂದೆರಡು ದಿನ ಉಳಿದುಕೊಳ್ಳಬೇಕೆಂಬ ಆಗ್ರಹಪೂರ್ವಕ ಆಮಂತ್ರಣವನ್ನೂ ಇತ್ತರು. ಅಂತೂ ಆ ಪ್ರವಾಸದಲ್ಲಿ ನನ್ನ ಹಂಬಲ ಪೂರ್ಣವಾಗಲಿಲ್ಲ.

ಮುಂದೆ ನನ್ನ "ಅಮೇರಿಕಾ ಬೊಗಸೆಯಲ್ಲಿ ಕಂಡಷ್ಟು", "ಸಂಜೆಯ ಮಳೆ" ಮತ್ತು "ಬೆಳಕು ಹರಿವ ಮುನ್ನ" ಕೃತಿಗಳನ್ನು ಕಳುಹಿಸಿದಾಗಲೂ ಅವರು ಬರೆದ ಸಾಲುಗಳು ನನ್ನ ಭಾಗ್ಯದ ಅಕ್ಷರ ರೂಪವೆಂದೇ ತಿಳಿದಿದ್ದೇನೆ. ಫೇಸ್ಬುಕ್ಕಲ್ಲಿ ಜೀರಿಗೆ ಮಿಡಿ ಉಪ್ಪಿನಕಾಯಿಗೆ ಸಂಬಂಧಿಸಿದ ಲೇಖನವೊಂದಕ್ಕೆ ನನ್ನ ಪ್ರತಿಕ್ರಿಯೆ ನೋಡಿ ಆ ಸಲದ ಮಾವಿನಮಿಡಿ ಕಾಲದಲ್ಲಿ ತಮ್ಮ ಮನೆಯಲ್ಲೇ ಮಾಡುವ ಜೀರಿಗೆಮಿಡಿ ಉಪ್ಪಿನಕಾಯಿಯನ್ನು ನನಗೆ ಕಳುಹಿಸುವುದಾಗಿ ಹೇಳಿದಾಗ ಅದು ನನಗಾಗಲೇ ತಲುಪಿದಷ್ಟೇ ಖುಷಿಯಾಗಿಹೋಯಿತು. ಹೀಗೆಯೇ ಫೇಸ್ಬುಕ್ಕಿನಲ್ಲಿನ ಯಾವುದಾದರೊಂದು ವಿಷಯಕ್ಕೋ, ಮತ್ಯಾವುದಾದಕ್ಕೋ ನಮ್ಮಿಬ್ಬರ ಸಂಭಾಷಣೆ, ಕುಶಾಲು ನಡೆಯುತ್ತಿತ್ತಾದರೂ ನೋಡುವ ಹಂಬಲ ಆ ಸದ್ಯಕ್ಕೆ ಈಡೇರಲಿಲ್ಲ.

ಮೂರು ವರ್ಷಗಳ ನಂತರ, ಮೊನ್ನೆ ಫೆಬ್ರವರಿಯ ಕಡೆಯಲ್ಲಿ ಮತ್ತೆ ನಮ್ಮ ದಕ್ಷಿಣ ಕನ್ನಡದ ಪ್ರವಾಸದ ಯೋಜನೆ ಬಂದಾಗ "ಚೊಕ್ಕಾಡಿಯವರನ್ನು ತೋರಿಸಿಕೊಂಡು ಬಂದರೆ ಮಾತ್ರಾ ಬರುತ್ತೇನೆ" ಎಂದು ನನ್ನ ಷರತ್ತನ್ನು ಹಾಕಿದೆ. ನನ್ನವರೂ ಸಂತೋಷದಿಂದಲೇ ಒಪ್ಪಿಕೊಂಡರು. ಸರಿಯಾದ ದಿನಾಂಕ ನಿಗದಿ ಆಗದಿದ್ದರೂ ಹೊರಡುವ ಎರಡು ವಾರಗಳಿಗೂ ಮುಂಚಿತವಾಗಿಯೇ ಚೊಕ್ಕಾಡಿಯವರಿಗೆ ಕರೆಮಾಡಿ ಆ ದಿನಗಳಲ್ಲಿ ಊರಿನಲ್ಲಿರುತ್ತಾರೆಯೇ ಎಂದು ಕೇಳಿಟ್ಟುಕೊಂಡೆ. 'ಆರೋಗ್ಯದ ಕಾರಣದಿಂದಾಗಿ ಇತ್ತೀಚೆಗೆ ಊರಿನಿಂದಾಚೆಗೆ ಎಲ್ಲಿಗೂ ಹೋಗುತ್ತಿಲ್ಲ, ಯಾರಾದರೂ ಕರೆದುಕೊಂಡು ಹೋಗಿ, ವಾಪಸ್ಸು ಬಂದು ಬಿಡುವುದಾದರೆ ಮಾತ್ರಾ ಹತ್ತಿರದ ಸ್ಥಳಗಳಿಗೆ ಹೋಗಬಹುದು' ಎಂದರು.

ನಾನು ಬರಬೇಕೆಂದಿರುವ ವಿಷಯ ಕೇಳಿ ಸಂತಸಪಟ್ಟರು. 'ಬರುವ ಮುಂಚಿತವಾಗಿ ಒಮ್ಮೆ ಕರೆಮಾಡಿ' ಎಂದರು. 'ಸರಿ'ಯೆಂದೆ.

ಪ್ರವಾಸ ನಿಶ್ಚಿತವಾಗಿ ಫೆಬ್ರವರಿ 26ರಂದು ಮಧ್ಯಾಹ್ನ ಸುಬ್ರಹ್ಮಣ್ಯಕ್ಕೆ ಹೋದೆವು. ತಲುಪಿದ ಮೇಲೆ ಅವರಿಗೆ ಕರೆ ಮಾಡಿದರೆ ತೆಗೆಯಲಿಲ್ಲ. 'ಈಗ ಊಟ ಮಾಡುತ್ತಿರಬಹುದು', 'ಈಗ ನಿದ್ರೆ ಮಾಡುತ್ತಿರಬಹುದು', 'ನೋಡಿ ಅವರೇ ಮಾಡಬಹುದು' ಎಂದು ಕಾದರೂ ಸಂಜೆಯತನಕ ಕರೆ ಸಾಧ್ಯವಾಗಲೇ ಇಲ್ಲ. ಹಾಗೆಂದು ಅವರನ್ನು ನೋಡುವ ಕಾರ್ಯಕ್ರಮವನ್ನು ಬಿಡುವ ಮನಸ್ಸಿಲ್ಲ. 'ಇಷ್ಟು ಹತ್ತಿರ ಬಂದಿದ್ದೇವೆ. ಪ್ರಯತ್ನಪಟ್ಟುಬಿಡೋಣ. 'ಅಕಸ್ಮಾತ್ ಅವರ ಮೊಬೈಲ್ ಕೆಟ್ಟು ಹೋಗಿದ್ದರೆ! ಇಲ್ಲವೇ ಅರಿವಿಗೆ ಬಾರದಂತೆ ಮೌನವಾಗಿ ಕುಳಿತುಬಿಟ್ಟಿದ್ದರೆ!' ಎಂದೆಲ್ಲಾ ನಾನೇ ತರ್ಕಮಾಡಿಕೊಂಡು 'ಹೋಗಿ ನೋಡುವುದು; ನಮಗೆ ಯೋಗವಿದ್ದರೆ ಸಿಗುತ್ತಾರೆ' ಎಂದುಕೊಂಡು ಚೊಕ್ಕಾಡಿಯ ದಿಕ್ಕಿಗೆ ನಮ್ಮ ವಾಹನವನ್ನು ತಿರುಗಿಸಿದೆವು.

ದಾರಿಯಲ್ಲಿ ಮಾಡಿದ ಕರೆಗೂ ಯಶಸ್ಸು ಸಿಗಲಿಲ್ಲ. ಆದದ್ದಾಗಲಿ ಎಂದು ಮುಂದುವರೆದು ಅಲ್ಲಲ್ಲಿ ಕೇಳಿಕೊಂಡು ಚೊಕ್ಕಾಡಿ ಊರನ್ನು ತಲುಪಿದೆವು. ಅಲ್ಲಿನ ಬಸ್‌ಸ್ಟ್ಯಾಂಡಿನಲ್ಲಿ ಚೊಕ್ಕಾಡಿ ಮಾಸ್ತರ ಮನೆಗೆ ಹೇಗೆ ಹೋಗಬೇಕು? ಎಂದು ವಿಚಾರಿಸಿದಾಗ ನಾವು ಬಂದ ದಾರಿಯಲ್ಲಿ ಒಂದಷ್ಟು ದೂರ ವಾಪಸ್ಸು ಹೋಗಿ, ಬಲಕ್ಕೆ ಹೊರಳಿ ಒಂದು ಸಣ್ಣ ಬ್ರಿಡ್ಜ್ ದಾಟಿದ ಮೇಲೆ ಒಂದು ಗೇಟು ಬರುತ್ತೆ. ಅಲ್ಲಿಂದ ಒಳಗೆ ಹೋದರೆ ಅವರ ಮನೆ ಎಂದು ನಿರ್ದೇಶನ ಕೊಟ್ಟರು. ಹುಡುಕಿಕೊಂಡು ಹೊರಟೆವು. ಗೇಟೇನೋ ಸಿಕ್ಕಿತು. ಆದರೆ ಅಲ್ಲಿದ್ದದ್ದು ಲಕ್ಷ್ಮೀಶ ಚೊಕ್ಕಾಡಿಯೆಂಬುವವರ ಮನೆ. ಹೆಚ್ಚು ಕಡಿಮೆ ನಿರ್ಜನವಾದ ರಸ್ತೆ, ಏನು ಮಾಡುವುದೆಂದು ತಿಳಿಯದೆ ಯಾರದಾದರೂ ಬರುವನ್ನು ಕಾಯುತ್ತಿರುವಾಗ ಒಬ್ಬರು ಬೈಕಿನಲ್ಲಿ ಬಂದರು. 'ವಾಪಸ್ಸು ಹೋದರೆ ಸ್ವಲ್ಪ ದೂರದಲ್ಲೇ ಎಡಭಾಗದಲ್ಲಿ ಒಂದು ಕಟ್ಟಿಗೆಯ ಗೇಟು ಇದೆ. ಅಲ್ಲಿಂದ ಒಳಗೆ ಅವರ ಮನೆ' ಎಂದರು. ಹೊರಳಿ ಅಷ್ಟು ದೂರ ವಾಪಸ್ಸು ಬಂದೆವು. ಅಲ್ಲಿದ್ದ ಮರದ ಗೇಟಿನ ಮನೆಯಲ್ಲಿ ಯಾರೂ ಕಾಣಲಿಲ್ಲ. ಯಾರಾದರೂ ಕಂಡರೆ ವಿಚಾರಿಸಬಹುದು ಎಂದುಕೊಳ್ಳುತ್ತಿರುವಾಗಲೇ ಒಬ್ಬರು ಕಂಡರು. ಅವರು 'ಇದಲ್ಲ, ಸ್ವಲ್ಪ ಹಿಂದೆ ಹೋದರೆ ಉರುವಲದ ಗೇಟಿದೆ. ಅದರೊಳಗೆ ಸುಮಾರು ಒಂದು ಫರ್ಲಾಂಗ್ ಒಳಹೋದರೆ ಅದೇ ಅವರ ಮನೆ' ಎಂದರು.

ಇಳಿಸಂಜೆಯಾಗುತ್ತಿತ್ತು. ಹಿಂದೆಮುಂದೆ ಓಡಾಡುತ್ತಾ ಕಾಲ ಕಳೆಯುತ್ತಿದ್ದೇವೆ ಎನಿಸಿ, "ನಿಮಗೆ ತೊಂದರೆ ಇಲ್ಲದಿದ್ದರೆ ಅವರ ಮನೆಯನ್ನು ತೋರಿಸಿಕೊಡ್ತೀರಾ" ಎಂದು ಅವರಲ್ಲಿ ವಿನಂತಿಸಿಕೊಂಡಾಗ, "ಆಯಿತು ಬನ್ನಿ" ಎಂದು ನಮ್ಮ ವಾಹನವನ್ನು ಹತ್ತಿಕೊಂಡರು. "ನಿಮ್ಮ ಮನೆಯೆಲ್ಲಿ?" ಎಂದು ವಿಚಾರಿಸಿಕೊಂಡಾಗ "ಅದೇ ನಮ್ಮನೆ. ನಾನು ಅವರ ಎರಡನೆಯ ಅಳಿಯ" ಎನ್ನಬೇಕೆ! ಹುಡುಕುತ್ತಿರುವ ಬಳ್ಳಿ ಕಾಲಿಗೇ ತೊಡರಿಕೊಂಡಂತೆ ಎಂದರೆ ಇದೇ ಅಲ್ಲವೇ!! ನನ್ನಾಸೆ ಈಡೇರುವ ಘಳಿಗೆ ಕಡೆಗೂ ಬಂದಿತ್ತು. ಕಟ್ಟಿಗೆಯ ಗೇಟೆಂದರೆ ಅಕ್ಷರಶಃ ಕಟ್ಟಿಗೆಯ ಗೇಟೇ. ಎರಡು ತೆಳ್ಳನೆಯ ಉದ್ದಮರದ ಕಾಂಡಗಳನ್ನು ಆಚೀಚೆ ಹುಗಿದ ಮರದ ಕಂಬಗಳ ಕಟ್ಟಿನಲ್ಲಿ ತೂರಿಸಿದ್ದರು ಅಷ್ಟೇ. ಇಂತಹ ಕಲ್ಪನೆಯೂ ನಮಗಿರಲಿಲ್ಲ. ಅವತ್ತು ಅವರು ಸಿಗದಿದ್ದರೆ ಪ್ರಾಯಶಃ ನಾವು ಚೊಕ್ಕಾಡಿಯವರನ್ನು ಕಾಣಲಾಗದೇ ವಾಪಸ್ಸು ಬಂದಿರುತ್ತಿದ್ದೆವು.

ಸಂಜೆಯ ಇಳಿಹೊತ್ತು. ಪಡುವಣದ ತನ್ನ ಮನೆಗೆ ತೆರಳುತ್ತಿದ್ದ ಸೂರ್ಯ. ಸುತ್ತಲೂ ಹಸಿರಿನ ಕಂಗಿನ ತೋಟ. ನಿಸರ್ಗದ ಮಡಿಲಿನಲ್ಲಿದ್ದ ಮನೆ. ಯಾವ ವಾಹನಗಳ ಕರ್ಕಶ ಶಬ್ದವೂ ಇಲ್ಲದ, ಬರಿಯ ಹಕ್ಕಿಗಳ ಚಿಲಿಪಿಲಿ, ಕೀಟಗಳ



ಚಿರಿಪಿರಿಗಳ ಪ್ರಕೃತಿ ಸಹಜ ಮೇಳವಷ್ಟೇ. ವಾಹನ ನಿಂತ ತಕ್ಷಣ ಚೊಕ್ಕಾಡಿಯವರು ಮನೆಯ ಹೊರಗೆ ಬಂದರು. ನನ್ನನ್ನು ನೋಡಿದ್ದೇ ಅದೇನು ಸಂಭ್ರಮ! ಅದೇನು ಹರ್ಷ, ಕಾಳಜಿ! ಇಬ್ಬರೂ ಒಬ್ಬರನ್ನೊಬ್ಬರು ಫೋಟೋನಲ್ಲಿ ನೋಡಿದ್ದಿದ್ದಷ್ಟೇ. ಖುಷಿಯಿಂದ ಮನೆಯೊಳಗೆ ಬರಮಾಡಿಕೊಂಡರು. ನನ್ನ ಎಷ್ಟೊಂದು ಕಾಲದ ಹಂಬಲ ಆ ಘಳಿಗೆಯಲ್ಲಿ ಈಡೇರಿತ್ತು. "ನೀವು ಬರ್ತೀರಿ ಅಂತ ಗೊತ್ತಾಗದೆ ಎಂಥ ಕೆಲಸವಾಯಿತು! ಆರಾಮಿರಲಿಲ್ಲಾಂತ ಮೊಬೈಲನ್ನು ಮೌನವಾಗಿಟ್ಟಿದ್ದೆ" ಎಂದು ಪೇಚಾಡಿಕೊಂಡರು. "ಆದರೆ ನಾನು ಬಿಡಲಿಲ್ಲವಲ್ಲ. ಬೆನ್ನಟ್ಟಿ ಬಂದೇಬಿಟ್ಟೆ" ಎಂದೆ. ಮುಂದೆಲ್ಲಾ ಕುಶಾಲು... ನಗು... ಸಂಭ್ರಮ... ಮಾತು ಮಾತು ಮಾತು... ಆಡಿದಷ್ಟೂ ಮುಗಿಯದ, ಅಕ್ಷಯವಾದ ಮಾತಿನ ಸಂತೆ. ಹೆಚ್ಚಾಗಿ ಮಾತನಾಡದ ನನ್ನವರನ್ನೂ ಮಾತಿಗೆಳೆದುಬಿಟ್ಟರು. ಮನೆಯವರನ್ನೆಲ್ಲಾ ಪರಿಚಯ ಮಾಡಿಕೊಟ್ಟರು. ಮನೆಯೊಡತಿ ಲಕ್ಷ್ಮಿಯಮ್ಮನ ಪರಿಚಯವಾಯಿತು. ಸೊಗಸಾದ ಚಾ ಕುಡಿದೆವು. ಅಂದು ಅಲ್ಲೇ ಉಳಿಯಿರೆಂದು ಒತ್ತಾಯ ಮಾಡಿದರು. "ಖಂಡಿತವಾಗಿ ಇನ್ನೊಮ್ಮೆ ಬಂದಾಗ ಉಳಿಯುತ್ತೇವೆ" ಎಂದೆ. ನನ್ನ ಬರೆಹದ ಬಗ್ಗೆ ಸಾಕಷ್ಟು ಮಾತನಾಡಿದರು. ಹಲವು ಹಿತವಚನಗಳನ್ನು ಹೇಳಿದರು; ಸಲಹೆಗಳನ್ನು ಕೊಟ್ಟರು. ಅಷ್ಟು ದೊಡ್ಡ ವ್ಯಕ್ತಿ ಒಬ್ಬ ವಾತ್ಸಲ್ಯದ ಗುರುವಾಗಿಬಿಟ್ಟಿದ್ದರು. ಅವರ ಮನೆಯನ್ನೆಲ್ಲಾ ತೋರಿಸಿದರು. ಅವರ ಪುಸ್ತಕ ಭಂಡಾರವನ್ನು ತೋರಿದರು. ಅಲ್ಲಿ ಕಳೆದ ಅಷ್ಟೂ ಸಮಯ ದೈವೀಕವಾಗಿತ್ತು ಎಂದಷ್ಟೇ ಹೇಳಬಲ್ಲೆ. ಮನತುಂಬಿ ಬಂದಿತ್ತು. ದಂಪತಿಗಳಿಬ್ಬರ ಕಾಲಿಗೆರಗಿದೆವು. ವಾಪಸ್ಸು ಹೊರಡುವಾಗ ತೌರಿನಿಂದ ಮರಳುವಂತಹ ಭಾವ...

***

ಜ್ಯೋತಿ

– ಎನ್.ವಿ.ರಘುರಾಂ

(ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀಮತಿ ಸರಸ್ವತಿ ನಟರಾಜ್‌ರವರ 'ಜ್ಯೋತಿ' ಕಥೆಯ ಬಗ್ಗೆ ನಮ್ಮ ಮನೆಯಲ್ಲಿ ನಡೆದ ಸಂಭಾಷಣೆ)

'ಜ್ಯೋತಿ ಎಂದರೆ ಏನು ಎಂದು ಯಾರಿಗೆ ಗೊತ್ತಿಲ್ಲ ಹೇಳಿ. ಅದೇ.. ರೀ ದೀಪ' ಎಂದಳು ನನ್ನ ಮನದನ್ನೆ.

'ಜ್ಯೋತಿ ಅಂದರೆ ದೀಪ ಅಲ್ಲ. ಅದು ಬೆಳಕು' ಎಂದೆ. 'ಅದೆಲ್ಲಾ ನಿಮ್ಮ ವಿತಂಡವಾದ. ದೀಪ ಇದ್ದರೆ ತಾನೇ ಬೆಳಕು' ಎಂದಳು. 'ಹಾಗಲ್ಲ, ನೋಡಿಲ್ಲಿ! ದೀಪ ಎಂದರೆ ಹಣತೆ, ಎಣ್ಣೆ, ಉರಿಯುತ್ತಿರುವ ಬತ್ತಿ ಇರಬೇಕು ಆಗ' ಎಂದೆ. 'ನಾನು ಅದನ್ನೇ ಹೇಳಿದ್ದು!' ಎಂದಳು. ನಾನು ಸರಿಯೆಂದು ಒಪ್ಪಿಕೊಂಡೆ. ವಾದ ಮಾಡಿ ಪ್ರಯೋಜನವಿಲ್ಲ ಎಂದು ನನಗೆ ಗೊತ್ತು. ಹಾಗಾದರೆ ಈಗ ಕಥೆ ಓದುತ್ತೇನೆ, ಕೇಳಿಸಿಕೋ' ಎಂದೆ. 'ಸರಿ' ಎನ್ನುತ್ತಾ ಕುರ್ಚಿ ಎಳೆದುಕೊಂಡು ಕೂತಳು.

'ಇದು ಸರಸ್ವತಿ ಮೇಡಂ ಬರೆದಿದ್ದು' ಎಂದು ಪ್ರಾರಂಭ ಮಾಡಿದೆ. 'ರೀ.. ಅವರು ನನಗೆ ಗೊತ್ತು! ಅವರನ್ನು ದಿನಾಲೂ ನೆನಪಿಸಿಕೊಳ್ಳುತ್ತೇನೆ' ಎಂದಳು. ಈಗ ನನಗೆ ಆಶ್ಚರ್ಯ ಆಯಿತು. 'ಯಾಕೆ ಆಶ್ಚರ್ಯ ಆಯ್ತಾ? ಅದೇರೀ.. ನೀವು ಹೇಳಿದ್ದರಲ್ಲ ತಲೆ ಬಾಚಿಕೊಳ್ಳುವಾಗ ನಿಧಾನವಾಗಿ ಸಿಕ್ಕುಗಳನ್ನು ಬಿಡಿಸಿಕೊಳ್ಳಬೇಕು. ಇಲ್ಲದಿದ್ದರೆ ಕೂದಲುಗಳು ತುಂಡಾಗುತ್ತದೆ ಎಂದು ಹೇಳಿದ್ದರಲ್ಲ' ಎಂದಳು. ನಾನು ಸರಸ್ವತಿ ಮೇಡಂ ಬರೆದ 'ಸಿಕ್ಕುಗಳು' ಕಥೆ ಆಕೆಗೆ ಓದಿ ಹೇಳಿದಾಗ, 'ನೋಡೆ, ಸಂಬಂಧಗಳಲ್ಲಿ ಮೂಡುವ ಸಿಕ್ಕನ್ನು ಹೇಗೆ ನಾಜೂಕಾಗಿ ಬಿಡಿಸಿ, ಸಂಬಂಧಗಳನ್ನು ಉಳಿಸಿಕೊಳ್ಳುವ ಪರಿ ಹೇಳಿದ್ದಾರೆ' ಎಂದು ಸ್ವಲ್ಪ ಭಾವನಾತ್ಮಕವಾಗಿ ವಿವರಿಸಿದ್ದೆ. ಅದು ನೆನಪಾಯಿತು. ಅದನ್ನೇ ಈಗ ಆಕೆ ನೆನಸಿಕೊಂಡಳು. ಪರವಾಗಿಲ್ಲ! ಇಷ್ಟು ನೆನಪಾದರೂ ಇದಯಲ್ಲ ಎಂದುಕೊಂಡು ಕಥೆ ಓದಿ ಹೇಳಲು ಪ್ರಾರಂಭ ಮಾಡಿದೆ. ಮಧ್ಯದಲ್ಲಿ ಮಾತನಾಡಿದರೆ ನಾನು ಸಿಟ್ಟು ಮಾಡಿ ಕೊಳ್ಳುತ್ತೇನೆ, ಆಗ ಮತ್ತೊಮ್ಮೆ ಕಾಫೀ ಮಾಡಲು ಏಳಬೇಕು ಎಂದು ಗೊತ್ತಿದ್ದರಿಂದ ಸುಮ್ಮನೇ ಕೂತಿದ್ದಳು. ನಾನು ಅವಳಿಗೆ ಕಥೆ ಓದಿ ಹೇಳಿದೆ. ಈಗ ಕಾಫೀಯೂ ಬಂತು.

'ಅಲ್ಲರೀ.. ಜ್ಯೋತಿ ಹೆಸರು ಚೆನ್ನಾಗಿದೆಯಲ್ಲವಾ?' ಎಂದಳು. 'ಹುಃ' ಎಂದೆ. ಹೌದು, ನಾನು ಕಥೆ ಓದಿ ಹೇಳುವಾಗ ಅವಳು ಸುಮ್ಮನಿರಬೇಕು. ಅವಳು ಕಥೆ ಬಗ್ಗೆ ಹೇಳುವಾಗ ನಾನು ಸುಮ್ಮನಿರಬೇಕು. ಇದೊಂದು ಮೊದಲಿನಿಂದಲೂ ಮಾಡಿಕೊಂಡು ಬಂದಿರುವ ರೂಢಿ! ಈಗ ಅವಳ ಮಾತಿಗೆ ಹುಃ ಗುಟ್ಟುವ ಸರದಿ ನಂದು.

'ನೋಡಿ ಜ್ಯೋತಿಯ ಬಾಳು. ಎಷ್ಟೊಂದು ಕಷ್ಟಪಟ್ಟಳಲ್ಲ. ಪಾಪ, ರೀ!. ಹುಟ್ಟಿದಾಗಿನಿಂದ ಆಕೆ ಪಟ್ಟ ಪಾಡು ಎಷ್ಟೊಂದು ಅಲ್ಲವಾ, ದೇವರು ಯಾಕೆ ಇಷ್ಟೊಂದು ಕಷ್ಟ ಮೇಲಿಂದ ಮೇಲೆ ಕೊಡುತ್ತಾನೋ ಗೊತ್ತಿಲ್ಲ ನೋಡಿ' ಎಂದು ಹೇಳುತ್ತಾ ಒಂದು ನಿಮಿಷ ಮಾತು ನಿಲ್ಲಿಸಿದಳು. ಸ್ವಲ್ಪ ಸುಧಾರಿಸಿಕೊಂಡಂತೆ ಕಂಡುಬಂದಿತು.

'ಆದರೆ ನೋಡಿ, ಆಕೆ ಎಲ್ಲೂ ದೇವರಿಗೆ ಬೈಯ್ದಂತೆ ಕಾಣಬರಲಿಲ್ಲ ಅಲ್ಲವಾ?' ಎಂದಳು. ನನಗೂ ಹೌದಲ್ಲ ಅನಿಸಿತು. 'ಅಲ್ಲ ರೀ, ನೋಡಿ ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡಳು. ಆದರೆ ಆಕೆಗೆ ಅದು ಗೊತ್ತಿಲ್ಲ. ನಂತರ

ದೊಡ್ಡಪ್ಪ ಮತ್ತು ದೊಡ್ಡಮ್ಮನೇ ಅಪ್ಪ, ಅಮ್ಮ ಎಂದು ತಿಳಿದುಕೊಂಡು ಬೆಳೆದಳು. ಆದರೆ ಅಪ್ಪ, ಅಮ್ಮನ ಪ್ರೀತಿ ಸಿಗಲಿಲ್ಲ. ನಿಜವಾದ ಅಪ್ಪ ಅವಳ ಚಿಕ್ಕಪ್ಪನಾದ! ಓದಲು ಹೋದಾಗಲೂ ತೊಂದರೆಗಳ ಸರಮಾಲೆ. ಅದರ ಜೊತೆಗೆ ಬೇಜವಾಬ್ದಾರಿಯ ಗಂಡಿನ ಜೊತೆ ಮದುವೆ. ಆದರೂ ತನ್ನ ಕಾಲ ಮೇಲೆ ತಾನು ನಿಲ್ಲಲು ಆಕೆ ಪಟ್ಟ ಪ್ರಯತ್ನ ನಿಜವಾಗಲೂ ಮೆಚ್ಚಬೇಕ್ರಿ.' ನಾನು ಮಧ್ಯದಲ್ಲಿ ಮಾತನಾಡಬಾರದು ಎಂಬ ಅರಿವಿದ್ದರೂ 'ಅದಕ್ಕೆ ಕಣೆ, ನಾನು ಬೆಳಕು ಎಂದಿದ್ದು' ಎಂದು ಇನ್ನೊಮ್ಮೆ ಹೇಳಿದೆ.

ಒಂದು ಕ್ಷಣ ಏನೂ ಮಾತನಾಡದೆ ಸುಮ್ಮನಿದ್ದು ನಂತರ ಮುಂದುವರಿಸಿದಳು. 'ನಿಮಗೇನೂ ಗೊತ್ತಾಗಲ್ಲ ನೋಡಿ. ಮಗುವೊಂದು ಮನೆಯಲ್ಲಿ ಹುಟ್ಟಿದರೆ ಎಲ್ಲರೂ ಎಷ್ಟೊಂದು ಸಂತೋಷಪಡುತ್ತಾರಲ್ಲ, ಮಗು ಆ ಮನೆಯ ದೀಪವೆಂದು. ಹೌದು, ಅ ಮನೆಯೇ ಒಂದು ದೊಡ್ಡ ಹಣತೆ. ಆಲ್ಲಿ ಅಪ್ಪ, ಅಮ್ಮ ಕೊಡುವ ಪ್ರೀತಿಯೇ ಹಣತೆಗೆ ಹಾಕುವ ಎಣ್ಣೆ. ಆ ಪ್ರೀತಿಯಲ್ಲಿ ಮಗು ಬೆಳಗುವುದಲ್ಲ, ಅದೇ ದೀಪದ ಬೆಳಕು. ನೋಡಿ, ಹಳೆಕಾಲದವರ ತರಹ, ಆಕೆ ದೀಪದ ಬತ್ತಿ, ತನ್ನನ್ನು ತಾನು ಸುಟ್ಟುಕೊಂಡು, ಸುತ್ತಲಿನವರಿಗೆ ಬೆಳಕು ಕೊಟ್ಟಳು ಎಂದೆಲ್ಲ ಹೇಳಬೇಡಿ, ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೊಳ್ಳಿ' ಎಂದಾಗ 'ಹುಂ' ಎಂದು ಎಷ್ಟು ಸಾಧ್ಯವಾಗುವುದೋ ಅಷ್ಟು ಸಣ್ಣದಾಗಿ ಹೇಳಿದೆ.

ಆಕೆಯೇನೂ ನನ್ನ ಉತ್ತರಕ್ಕೆ ಕಾಯ್ದು ಕೂತಿರಲಿಲ್ಲ. ಹಾಗೆಯೇ ಮುಂದುವರಿಸಿದಳು. 'ನೋಡಿ, ಚಿಕ್ಕವರಿದ್ದಾಗ ದೀಪ ಎನ್ನುವುದು ಮಗು ಇತರರ ಮೇಲೆ ಅವಲಂಬಿಸಿರುತ್ತದೆ ಎಂದು. ಅಂದರೆ ಹಣತೆಗೆ ಅಪ್ಪನೋ, ಅಮ್ಮನೋ ಆಗಾಗ ಎಣ್ಣೆ ಹಾಕುತ್ತಿರಬೇಕು. ಇಲ್ಲಿ ಆ ಕೆಲಸ ಚಿಕ್ಕಪ್ಪನಿಂದ ಆಯಿತು ಅಷ್ಟೆ. ನಂತರ ಶಾಲೆಗೆ ಹೋದಾಗ ಆ ಕೆಲಸ ಗೆಳತಿ ಲತಾ, ಲಲಿತ ಮೇಡಂ, ನಾಗವಲ್ಲಿ ಮೇಡಂ, ಮಂಜುಳ ಮೇಡಂ ದೀಪಕ್ಕೆ ಎಣ್ಣೆ ಹಾಕಿ ಆಕೆ ಬೆಳೆಯಲು ಸಹಾಯ ಮಾಡಿದರು. ಎಣ್ಣೆ ಎಂದ ತಕ್ಷಣವೇ ಎಚ್ಚರ ಆಯ್ತಾ, ನೀವು ಗಂಡಸರೇ ಹೀಗೆ' ಎನ್ನುತ್ತಾ ನನ್ನ ಕಡೆ ನಗುತ್ತಾ ನೋಡಿದಳು. ನಾನು ಸುಮ್ಮನಿದ್ದೆ.

ಒಂದು ಕ್ಷಣದ ನಂತರ ಮುಂದುವರೆಸಿದಳು. 'ನೋಡ್ರಿ, ಶಾಲೆಯಲ್ಲೂ ಪಿ.ಟಿ. ಮಾಸ್ಟರ್ ಜೋರಾಗಿ ಬೀಸುವ ಗಾಳಿಯಾಗಿ ಬಂದರು. ಆದ್ರೆ ದೀಪ ಆರಲಿಲ್ಲ ಬಿಡಿ. ಏಕೆಂದರೆ ಅದು ಗಟ್ಟಿ ಜೀವ. ಮನೆಯಲ್ಲಿ ಅಮ್ಮನ ಅವಕೃಪೆಗೆ ಒಳಗಾದರೂ ಅಳುತ್ತಾ ಕೂರದೆ, ಶಾಲೆಗೆ ಹೋಗಿ ಎನ್.ಸಿ.ಸಿ. ಸೇರಿದವಳು, ದಾರಿಯಲ್ಲಿ ಅಪಘಾತದ ಅಂಚಿನಲ್ಲಿ ಇದ್ದ ಮಗುವನ್ನು ರಕ್ಷಿಸಿದವಳು, ತನಗೆ ತೊಂದರೆ ಕೊಡಲು ಬಂದ ಕಿರಣ್ ಮೇಲೆ ದೂರು ಕೊಟ್ಟವಳು, ನೋಡಿ ಆ ದೂರಿನಿಂದ ಇನ್ಸ್‌ಪೆಕ್ಟರ್ ಮೂರ್ತಿ ದೊಡ್ಡ ಡ್ರಗ್ಸ್ ಜಾಲವನ್ನು ಭೇದಿಸಿದನಲ್ಲ' ಒಂದು ಕ್ಷಣ ನಿಲ್ಲಿಸಿ ನನ್ನ ಮುಖ ನೋಡಿದಳು. ನಾನು ನೀರು ಬಗ್ಗಿಸಿ ಕೊಟ್ಟೆ. ಮೆಚ್ಚುಗೆಯಿಂದ ಒಂದು ಸಾರಿ ನೋಡಿದಳು.

'ಅಲ್ಲಾರೀ.., ಈ ಹೆಣ್ಣು ಮಕ್ಕಳ ಶೋಷಣೆ ಯಾವಾಗ ನಿಲ್ಲುತ್ತದೆಯೋ ಗೊತ್ತಿಲ್ಲ ನೋಡಿ. ತೊಂದರೆ ಆದಾಗ ರಕ್ಷಣೆ ಕೊಡಬೇಕಾದ ಇನ್ಸ್‌ಪೆಕ್ಟರ್ ರಘುರಾಮ್ ಕೂಡ ನೀನು ಹೆಣ್ಣು ಎನ್ನುತ್ತಾನಲ್ಲ' ಎಂದು ನನ್ನ ಮುಖ ನೋಡಿದಳು. ಯಾವಾಗ ಮಾತನಾಡಬೇಕು, ಯಾವಾಗ ಮಾತನಾಡಬಾರದು ಎಂದ ನನಗೆ ಗೊತ್ತು. ಆದರೂ ಈ ಸಾರಿ ಮಾತನಾಡದೇ ಇರಲು ಆಗಲಿಲ್ಲ. 'ಸರಸ್ವತಿ ಮೇಡಂಗೆ ಹೇಳುತ್ತೇನೆ ಬಿಡು, ಮುಂದಿನ ಕಥೆಗಳಲ್ಲಿ ನನ್ನ ಹೆಸರನ್ನು ಒಳ್ಳೆಯ ಪಾತ್ರಗಳಿಗೆ ಮಾತ್ರ ಮೀಸಲಿಡಿಯೆಂದು'. ಆಕೆಗೂ ನಗು ಬಂತು. 'ನೋಡಿ, ಹೆಣ್ಣೊಂದು ತನ್ನ ಕಾಲ ಮೇಲೆ ತಾನು ನಿಲ್ಲಲು ಈ ಕಾಲದಲ್ಲೂ ಎಷ್ಟೊಂದು ಪರದಾಡಬೇಕಾಯಿತು. ಮನೆ ಪಾಠ, ಬಟ್ಟೆ ಅಂಗಡಿಯಲ್ಲಿ

ಪಾರ್ಟ್ ಟೈಂ ಕೆಲಸ, ಸ್ಟಾರ್ ಹೋಟಲ್ನಲ್ಲಿ ಟೆಲಿಫೋನ್ ಆಪರೇಟರ್, ಹೀಗೆ ಮಾಡದ ಪ್ರಯತ್ನವಿಲ್ಲ ಬಿಡಿ. ಇರುವ ತೊಂದರೆ ಸಾಲದು ಎನ್ನುವಂತೆ ಹುಚ್ಚು ಪ್ರೀತಿ ತೋರಿಸುವ ಆ ಶಂಕರ್ ಇವಳ ಹಿಂದೆ ಬೀಳಬೇಕೆ? ಹೋಗಲಿ, ಆ ಪ್ರೀತಿ ಸಂತೋಷ ತಂದಿತೆ? ಕೊನೆಗೆ ಆ ಚಿಕ್ಕಪ್ಪನೂ ಈ ವಿಷಯದಲ್ಲಿ ಜ್ಯೋತಿಯ ಕೈ ಹಿಡಿಯಲಿಲ್ಲ. ಆದರೂ ನೋಡಿ, ಆ ಶಂಕರನ ತಮ್ಮ ಮಾಡಿದ ಹುಚ್ಚಾಟಕ್ಕೆ ಗೃಹ ಮಂತ್ರಿಗಳ ತನಕ ಹೋಗಿ ದೂರು ಕೊಡಬೇಕಾಯಿತು. ಆದರೂ ಆಕೆ ಬಿಡಲಿಲ್ಲ ನೋಡ್ರಿ, ಅದು ನನಗೆ ಇಷ್ಟವಾಯಿತು. ಅದಕ್ಕೆಲ್ಲಾ ಕಾರಣ ಏನು ಗೊತ್ತಾ?' ಎನ್ನುತ್ತಾ ನನ್ನ ಕಡೆ ನೋಡಿದಳು. ಆಕೆಗೆ ಗೊತ್ತು, ನನಗೆ ಜಾಸ್ತಿ ಹೊತ್ತು ಸುಮ್ಮನೆ ಕೂರಲು ಆಗದೆಂದು.

'ಅದೇ ಕಣೆ, ನೀನು ಆಗಲೇ ಹೇಳಿದೆಯಲ್ಲ, ಅವಳ ಬಾಳಿಗೆ ಬೇಕಾದ ದುಡ್ಡನ್ನು ಈ ಪಾರ್ಟ್ ಟೈಂ ಕೆಲಸ ಮಾಡಿ ಹೊಂದಿಸಿಕೊಂಡಿರುವುದು, ಆಕೆಗೆ ಸ್ವಲ್ಪಮಟ್ಟಿಗೆ ಧೈರ್ಯ ಬಂದಿರಬಹುದು ಅಲ್ಲವೇ?' ಎಂದೆ. 'ಹೌದು ರೀ.., ತನ್ನ ದೀಪಕ್ಕೆ ತಾನೇ ಸ್ವಲ್ಪ ಎಣ್ಣೆ ಹಾಕಿಕೊಳ್ಳುವ ಕೆಲಸವದು. ಧೈರ್ಯ ಅಂದರೆ ಅದೇರೀ..' ಎನ್ನುತ್ತಿರ ಬೇಕಾದರೆ, 'ಅದು ಸ್ವಾಭಿಮಾನದ ಪ್ರತೀಕ ಕಣೆ' ಎಂದೆ. ಟೇಬಲ್ ಮೇಲಿದ್ದ ಕಾರ ಹಚ್ಚಿದ ಅವರೇಬೇಳೆ ಬೀಜದ ಡಬ್ಬಿಯ ಮುಚ್ಚಳ ತೆಗೆದು ನನ್ನ ಮುಂದಿಟ್ಟಳು. ಮಧ್ಯೆ, ಮಧ್ಯೆ ಬಾಯಿ ಬಿಡಬಾರದಂತೆ ಮಾಡುವ ರೀತಿ ಇದು ಅಷ್ಟೆ. ನಾನು ನಗು ಮುಖದಿಂದ ಅವರೇಬೀಜ ಬಾಯಿಗೆ ಹಾಕಿಕೊಂಡು, ಎಂಜಲಿನಿಂದ ಅದನ್ನು ಬಾಯಲ್ಲಿ ಒದ್ದೆ ಮಾಡಿಕೊಂಡು ಬೀಜ ಮೆತ್ತಗೆ ಆಗಲು ಕಾಯುತ್ತಾ ಕೂತೆ! ಆಕೆ ವಿಜಯದ ನಗೆ ಬೀರಿದಳು.

'ಅಲ್ಲಾರೀ, ಈ ಹೆಣ್ಣು ಮಕ್ಕಳ ಶೋಷಣೆ ಯಾವಾಗ ನಿಲ್ಲುತ್ತೋ ಗೊತ್ತಿಲ್ಲ. ಅದರಲ್ಲೂ ಸ್ವಲ್ಪ ಬಡವರ ಮನೆ ಹೆಣ್ಣು ಮಕ್ಕಳಾಗಿಬಿಟ್ಟರೆ ಅವರ ಕಥೆ ಮುಗೀತು ಬಿಡಿ. ನನಗೆ ಗೊತ್ತು, ನೀವು ಹೆಣ್ಣಿಗೆ ಹೆಣ್ಣೇ ಶತ್ರು ಅಂತ ಹೇಳುತ್ತೀರಿ ಎಂದು. ಅಲ್ಲ, ನೋಡಿ ಆ ಶಂಕರನ ತಾಯಿ, ಗಂಡನ ಅಕ್ಕ ಮತ್ತು ಅವಳ ಮಗಳು ಆಶಾ, ಕೊನೆಗೆ ಅಮ್ಮನೂ ಕೂಡ ಹೆಣ್ಣೆ, ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಜೊತೆ ಅವಳ ಗಂಡ, ಪಕ್ಕದ ಮನೆ ರಾಜಪ್ಪ, ಶಂಕರನ ತಮ್ಮ ರಾಜು ಇವರೆಲ್ಲಾ ಮಾಡಿದ್ದು ಶೋಷಣೆ ಅನ್ನದೆ ಇನ್ನೇನು ಹೇಳಲು ಸಾಧ್ಯ. ಆದರೂ ನೋಡಿ ಸಂಸಾರಕ್ಕೋಸ್ಕರ ಕೆಟರಿಂಗ್ ಬಿಸಿನೆಸ್ ಪ್ರಾರಂಭ ಮಾಡಿದಳು. ಗಂಡನಿಗೆ ಸಾಲ ಮಾಡಿ ಆಟೋ ಕೊಡಿಸಿದಳು. ಸಾಲ ಮಾಡಿ ಸಣ್ಣ ಮನೆ ಕೂಡ ಕಟ್ಟಿಕೊಂಡಳು. ಆದರೂ, ಗಂಡ ಸಣ್ಣ ಮಗುವನ್ನು ಕೈಯಲ್ಲಿ ಇಟ್ಟು ಕೈಕೊಟ್ಟು ಹೋದ. ಸಂಕಷ್ಟಗಳ ಸರಮಾಲೆಯನ್ನೇ ಸರಸ್ವತಿ ಮೇಡಂ ಹೆಣೆದುಬಿಟ್ಟಿದ್ದಾರೆ ನೋಡಿ. ಇನ್ನೇನು ಒಂದು ಸಂಕಷ್ಟ ಮುಗೀತು ಎಂದುಕೊಳ್ಳುತ್ತಿರಬೇಕಾದರೆ, ಹೊಸ ತಿರುವು ಕೊಟ್ಟು ಇನ್ನೊಂದು ಸಂಕಷ್ಟ ಎದುರಿಸುವ ಹಾಗೆ ಮಾಡಿದ್ದಾರೆ. ಪಾಪ, ಅಲ್ಲವಾ' ಎಂದಳು.

ಅಷ್ಟು ಹೊತ್ತಿಗೆ ಬಾಯಲ್ಲಿ ಹಾಕಿಕೊಂಡ ಅವರೇ ಬೀಜವನ್ನು ಸದ್ದಿಲ್ಲದೆ ಹಾಗೆ ತಿಂದು ಮುಗಿಸಿದ್ದ ನಾನು 'ಆದರೂ ನೋಡು, ಆಕೆ ಓದುವ ಛಲ ಬಿಡಲಿಲ್ಲ. ಅದು ಮುಖ್ಯವಲ್ಲವೇ' ಎಂದೆ. 'ಹೌದು. ನನಗೆ ಈ ಕಥೆಯಲ್ಲಿ ಬಹಳವೇ ಇಷ್ಟವಾದ.ವಿಷಯವೆಂದರೆ ಅದು. ಹೈಸ್ಕೂಲ್ನಿಂದಲೇ ಪ್ರಾರಂಭವಾದ ಸಂಕಷ್ಟ, ಒಂದಲ್ಲ ಒಂದು ರೀತಿ ಆಕೆ ಲಾ ಓದಿ ಮುಗಿಸುವವರೆಗೂ ಕಾಡುತ್ತಲೇ ಇತ್ತು. ಕೆಲಸ ಮಾಡಿಕೊಂಡು ಬೆಳಗಿನ ಕಾಲೇಜಿಗೆ ಹೋದಳು. ಇನ್ನೇನು ಕಾಲೇಜು ಮುಗಿಸಬಹುದು ಅಂದುಕೊಳ್ಳಬೇಕಾದರೆ ಆಸ್ತಿಯ ವಿಷಯ ಬಂದು ತನ್ನ ಹುಟ್ಟಿನ ರಹಸ್ಯ ತಿಳಿಯಿತು. ಅದನ್ನು ಅರಗಿಸಿಕೊಳ್ಳಲು ಒದ್ದಾಡುತ್ತಿರುವಾಗಲೇ ಗಂಡ ಎರಡನೆಯ ಮದುವೆ ಮಾಡಿಕೊಂಡಿರುವ ವಿಷಯ ತಿಳಿಯಬೇಕೆ? ಆ ಸಮಯದಲ್ಲೂ ಪರೀಕ್ಷೆ ಬರೆದು ಪಾಸಾದಳಲ್ಲ. ಅದು ಮುಖ್ಯ ರೀ' ಅಂದಳು.

ಇನ್ನೊಂದು ಮುಖ್ಯವಾದ ವಿಷಯ ಕೂಡ ಇದೆ ಎಂದೆ. ತನಗೆ ಗೊತ್ತಾಗದೇ ಇರುವ ವಿಷಯ ಯಾವುದದು ಎನ್ನುವಂತೆ ನನ್ನ ಮುಖ ನೋಡಿದಳು. 'ನೋಡು, ಎಲ್ಲರೂ ಜೊತೆಗೆ ಇದ್ದರೂ ಆಕೆ ಒಂಟಿಯೇ. ತನ್ನ ಸಣ್ಣ ಮಗುವನ್ನು ಇಟ್ಟುಕೊಂಡು ತನ್ನ ಹುಟ್ಟಿನ ರಹಸ್ಯ ತಿಳಿದ ರಾತ್ರಿ, "ಒಬ್ಬಳೇ ಇದ್ದು ತೋರಿಸುತ್ತೇನೆ, ಆಗ್ಲಿಲ್ಲ ಎಂದರೆ ಈ ಜೀವ ಮುಗುಸ್ಕಳ್ತೀನಿ" ಎಂದಳಲ್ಲ, ಆಗ ನನಗೆ ಬಹಳವೇ ಬೇಸರವಾಗಿತ್ತು. ಇದ್ಯಾಕೆ ಹೀಗೆ ಬರೆದರು? ಬರೆಯಬಾರದಿತ್ತು ಅನಿಸಿದ್ದು ನಿಜ' ಅಂದೆ. 'ಓ, ಅದಾ, ಅದಕ್ಕೆ ನೋಡಿ ನಿಮಗೆ ಜಾಸ್ತಿ ಅರ್ಥ ಆಗಲ್ಲ ಅಂತ ನಾನು ನಿಮಗೆ ಕಥೆಯ ಅರ್ಥ ಹೇಳೋದು. ಅವರು ಬರೆಯುತ್ತಿರುವುದು ಸಾಮಾನ್ಯ ಪರಿಸರದಲ್ಲಿ ಬೆಳೆದ ಹೆಣ್ಣು ಮಗಳೊಬ್ಬಳ ಬಗ್ಗೆ. ಒಂದು ಕ್ಷಣ ಆ ಯೋಚನೆ ಹಾಗೆ ಬಂದು ಹೋಗಿದೆ. ಅದು ಅತ್ಯಂತ ಸ್ವಾಭಾವಿಕವಾಗಿ ಮೂಡಿಬಂದಿದೆ. ಆವಳು ಆ ವಿಷಯವನ್ನು ಹಿಡಿದುಕೊಂಡು, ಅದರ ಸಾಧಕ ಬಾಧಕಗಳ ಬಗ್ಗೆ ಯೋಚಿಸಿದಂತೆ ಬರೆದಿದ್ದರೆ, ಅದು ಕಥೆ ಪ್ರತಿಪಾದಿಸಿಕೊಂಡುಬಂದ ತತ್ವಕ್ಕೆ ಹೊಂದುತ್ತಿರಲಿಲ್ಲ' ಎಂದಾಗ ನನಗೂ ಹಾಗೇ ಅನಿಸಿತು. 'ಇಷ್ಟೆಲ್ಲಾ ಕೇಳಿಸಿಕೊಂಡರಲ್ಲ, ಈಗ ಹೇಳಿ, ಆಕೆಗೆ 'ಜ್ಯೋತಿ' ಅನ್ನೋ ಹೆಸರನ್ನು ಏಕೆ ಇಟ್ಟರೆಂದು?' ಎಂದಳು.

'ಏನೇ ಕಷ್ಟ ಬಂದರೂ ಬಿಡದೆ ವಿದ್ಯಾಭ್ಯಾಸ ಮಾಡಿ, ಕೊನೆಯಲ್ಲಿ ತನ್ನ ಕಾಲ ಮೇಲೆ ತಾನು ನಿಂತು ಕೊಂಡಳು. ಈಗ ಅವಳು ಸ್ವಯಂ ಪ್ರಕಾಶದ ಶಕ್ತಿ ಪಡೆದಿದ್ದಾಳೆ. ಸಾಧಾರಣ ದೀಪವೊಂದು, ಸದಾಕಾಲ ನಕ್ಷತ್ರದಂತೆ ಸ್ವಯಂ ಪ್ರಕಾಶದಿಂದ ಬೆಳಕು ನೀಡುವ ಶಕ್ತಿಯಾಗಿ ಬದಲಾಗಿರುವುದಕ್ಕೆ ಜ್ಯೋತಿ ಎಂದಿಟ್ಟಿದ್ದಾರೆ' ಎಂದೆ. ಪ್ರಥಮ ಬಾರಿಗೆ ನನ್ನ ಮನದನ್ನೆ ನನ್ನ ಮಾತು ಒಪ್ಪಿಕೊಂಡಳು! ನಾನು ಮೊದಲೂ ಇದನ್ನೇ ಹೇಳಿದ್ದಲ್ಲವಾ ಎಂದು ಹೇಳಲು ಹೋಗಲಿಲ್ಲ ಬಿಡಿ!

***

ಯತ್ನ ವಿಫಲತೆ – ಲೇಖನಮಾಲೆ-3

ವಿಳಂಬ ವಿವರ್ಣತೆ

– ಮಾಧುರಿ ಕೃಷ್ಣ

ಆವತ್ತು ಆಗಲೇ ಲೇಟಾಗಿತ್ತು. ಸಮಯಕ್ಕೆ ಸರಿಯಾಗಿ ಯಾವಾಗಲೂ ನಮ್ಮ ಲೇಡೀಸ್ ಕ್ಲಬ್‌ನ ಮೀಟಿಂಗ್ ನಲ್ಲಿರುವ ನಾನು, ಪದೇಪದೇ ಕೂಗಿಕೊಳ್ಳುತ್ತಿರುವ ಮೊಬೈಲಿನಿಂದಾಗಿ ಸುಮಾರು ಒಂದು ಗಂಟೆ ತಡವಾಗಿ ಬಾಗಿಲು ಮುಚ್ಚಿ ಲಾಕ್ ಮಾಡುತ್ತಲಿದ್ದೆ. ಅಷ್ಟರಲ್ಲಿ ಯಾರೋ ಕೂಗಿಕೊಳ್ಳುವುದು ಕೇಳಿಸಿತು.

"ಆಂಟೀ.. ಆಂಟೀ ಲಾಕ್ ಮಾಡಬೇಡೀ.. ವೈಟ್.. ವೈಟ್!" ಎನ್ನುವುದು ಕೇಳಿಸಿತು.

ಯಾರಪ್ಪಾ ಇದು! ಎಂದು ಗಕ್ಕನೆ ತಿರುಗಿ ನೋಡಿದೆ. ತೆರೆದಿದ್ದ ಗೇಟನ್ನು ಹಾಗೇ ಬಿಟ್ಟು ನನ್ನ ನೆವ್ಯೂ ದಾಪುಗಾಲಲ್ಲಿ ಸಮೀಪ ಬಂದ.

'ಉಹ್! ಇವತ್ತಿನ ಮೀಟಿಂಗ್ ಕಳಾಸ್!' ಎಂದು ನಿಟ್ಟುಸಿರು ಬಿಟ್ಟು, ತಿರುಗಿಸಿದ ಕೀಲಿ ಕೈಯನ್ನು ಪುನಹ ಹಿಂದೆ ತಿರುಗಿಸಿ, ಬಾಗಿಲು ಅಗಲವಾಗಿ ತೆರೆಯುತ್ತಾ ಕೇಳಿದೆ, "ಏನೋ ಈ ಹೊತ್ತಲ್ಲಿ ನಿಂದು ಸವಾರಿ, ಆಫೀಸ್ ಮುಗಿಯಿತೇ? "

"ಇವತ್ತು ರಜಾ ಆಂಟೀ, ಯಾರದ್ದೋ ಜನ್ಮದಿನವಂತೆ. ಮೊದಲು ಒಳಗೆ ಹೋಗೋಣ" ಎಂದು ಒಂಥರಾ ಅವಸರಿಸಿದ.

ಅದ್ಯಾಕೋ ಇವತ್ತು ಇವನ ವರ್ತನೆ ವಿಚಿತ್ರವಾಗಿದೆಯಲ್ಲ! ಎಂದಂದುಕೊಳ್ಳುವುದರೊಳಗೆ ಒಳಗಡೆ ನುಗ್ಗಿಯೇ ಬಿಟ್ಟ. ನಾನು ಚಪ್ಪಲ ಕಳಚುವುದರಲ್ಲಿ ಅವನು ನಮ್ಮ ಹಾಲ್‌ನ ಆ ಕಡೆಯ ಕಿಟಕಿಯ ಕಡೆಗೆ ಹೋಗಿ ನಿಂತು, "ಆಂಟೀ ಬೇಗ ಇಲ್ಲಿ ಬನ್ನೀ" ಎಂದು ಪಿಸುಗುಟ್ಟಿದ.

ನನಗೂ ಆಶ್ಚರ್ಯವಾಗಿ ಕಿಟಕಿಯಿಂದ ಹೊರ ನೋಡುತ್ತ, "ಏನಪ್ಪಾ" ಎಂದು ಬಾಯಿ ತೆರೆಯುವಷ್ಟರಲ್ಲೇ, "ಬೇಗ ನೋಡಿ ಆಂಟೀ, ಆ ಗೇಟಿನ ಕಡೆ " ಎಂದರಚಿದ.

ಗೇಟಿನಲ್ಲೋ ಪಕ್ಕದ ಮನೆಯಾತ ಕೇರಳದವನು. ರಾಜೀವಲೋಚನ ಮತ್ತವನ ಹೊಸದಾಗಿ ಮದುವೆಯಾದ ವಧು ನಿಂತಿದ್ದರು. ಮುದ್ದು ಮುದ್ದಾಗಿದ್ದರು. "ಮ್ಯಾರೇಜಸ್ ಆರ್ ಮೇಡ್ ಇನ್ ಹೆವನ್ ಎನ್ನುತ್ತಾರೆ. ರಾಜೀವಲೋಚನನಿಗೆ ಚೆಂದದ ಜೋಡಿ ಸಿಕ್ಕಿದ್ದಾಳಲ್ಲೋ"ಎಂದೆ ನಾನು ಖುಷಿ ಖುಷಿಯಿಂದ.

"ಅಯ್ಯೋ ಆಂಟೀ ಅವರಲ್ಲ, ಅವರೊಂದಿಗೆ ಮಾತನಾಡುತ್ತಿರುವವಳನ್ನು ನೋಡಿ ಎಂದರೇ..."

ಅವನು ತಲೆ ಚಚ್ಚಿಕೊಳ್ಳುವುದಕ್ಕೆ ಮುಂಚೆ ಅವಳನ್ನು ನಾನು ನೋಡಿಯೇಬಿಟ್ಟೆ. ಸುಮಾರು 20-22ರ ಸುಂದರ ಕನ್ಯೆಯೊಬ್ಬಳು ಗೇಟಿನಲ್ಲಿ ನಿಂತು ರಾಜೀವಲೋಚನ ದಂಪತಿಗಳೊಂದಿಗೆ ನಗುನಗುತ್ತ ಮಾತನಾಡುತ್ತಿದ್ದಳು.

ಪಶ್ಚಿಮಕ್ಕೆ ಇಳಿಯುತ್ತಿದ್ದ ಸೂರ್ಯನ ಬಂಗಾರದ ಕಿರಣಗಳು ನೇರವಾಗಿ ಅವಳ ಮೊಗದ ಮೇಲೆ ಬಿದ್ದು ಅವಳನ್ನು ಲಕಲಕಿಸುತಿತ್ತು. ಇದ್ದಕ್ಕಿದ್ದಂತೆ ಏನೋ ಮಾತಿಗೆ ಜೋರಾಗಿ ನಕ್ಕುಬಿಟ್ಟಳಾಕೆ! ನನ್ನ ಕಣ್ಣು, ನನ್ನ ಹೃದಯ ಒಂದೇ ಏಟಿಗೆ ಝಲ್ಲೆನಿಸಿತು. ಸೋದರಳಿಯನ ಮುಖ ನೋಡಿದೆ. ಅವನೋ ದಿಗ್ಭ್ರಮಿಸಿ ನಿಂತಿದ್ದ!

"ಅವಳೇ.. ಅವಳೇ ಆಂಟಿ ನನಗೆ ಬೇಕಾದದ್ದು.. ಅದಕ್ಕೇ ಬೆಳಗಿನಿಂದಲೂ ಬೆನ್ನು ಬಿದ್ದು ಹಿಂಬಾಲಿಸುತಿದ್ದುದು... ಅವಳು ಸುತ್ತಾಡಿ ಸುತ್ತಾಡಿ ನಿಮ್ಮ ಪಕ್ಕದ ಮನೆಗೇ ಬರಬೇಕೇ? ಕಣ್ಣು ಕೀಳದೆ ಆ ಗೇಟಿನ ಬಳಿ ನಿಂತವಳನ್ನು ನೋಡುತ್ತಾ ಉಸುರಿದ.

'ಅಂದರೇ..?' ಸಂಶಯವೊಂದು ಅಚಾನಕ್ಕಾಗಿ ನನ್ನಲ್ಲಿ ಹುಟ್ಟಿ ಬಂತು. ಅವನನ್ನು ಇರಿಯುವವಂತೆ ನೋಡಿದೆ. ಅಪರಾಧ ಮಾಡಿ ಸಿಕ್ಕಿ ಹಾಕಿಕೊಂಡಂಥ ಭಾವ ಅವನ ಮುಖದಲ್ಲಿ ಮೂಡಿ ಸರಕ್ಕನೆ ನಾಲಿಗೆ ಹೊರ ಹಾಕಿ ಮೇಲ್ತುದಿಗೆ ಮುಟ್ಟಿಸಿ ನಾಚಿಕೆ ತೋರ್ಪಡಿಸಿದ.

"ಹೌದು ಆಂಟೀ, ಆಗಲೇ ಬಂದಿದ್ದೆ. ಅವಳು ಈ ಮನೆ ಒಳಗಡೆ ಹೋಗಿದ್ದು ನೋಡಿ, ಎದುರಿನ ರೇವತಿ ಆಂಟಿಯ ಗೇಟಿನೊಳಗೆ ಹೋಗಿ ನಿಂತೆ. ಹೇಗಿದ್ದರೂ ನಿಮ್ಮನೇಲಿ ನಾನಿದ್ದಾಗ ಅವರ ಪರಿಚಯವಿತ್ತಲ್ಲ! ಅವರ ಮಗೂನ ಎತ್ತಿಕೊಂಡೆ. 'ಅರ್ಜೆಂಟಾಗಿ ಅಂಗಡಿಗೆ ಹೋಗಬೇಕಿತ್ತು, ಹೋಗಿಬರಲೇ' ಎಂದು ರೇವತಿ ಕೇಳಿದರು.
ದೇವರೇ ಸಹಾಯಕ್ಕೆ ಬಂದಿದ್ದಾನೆ ಎಂದುಕೊಂಡು ಅವರ ಗೇಟಿನ ಬಳಿಯೇ ಮಗುವನ್ನು ಆಡಿಸುತ್ತ ನಿಂತೆ. ರೇವತಿ ವಾಪಾಸು ಬರುವುದಕ್ಕೂ ಈ ಸುಂದರಿ ರಾಜೀವ್ ಮನೆಯಿಂದ ಹೊರಬರುವುದಕ್ಕೂ ಸರಿಹೋಯಿತು. ಇನ್ನು ಉಳಿದದ್ದೆಲ್ಲಾ ನಿಮ್ಮ ಕೈಯಲ್ಲಿದೆ ಆಂಟೀ.." ಎರಡೂ ಕೈ ಜೋಡಿಸಿಕೊಂಡು ಕಾಲಿಗೆ ಬೀಳಲು ಬಂದ. ದಿಙ್ಮೂಢಳಾಗಿ ಒಂದು ಹೆಜ್ಜೆ ಹಿಂದೆ ಹಾರಿದೆ! ಏನಿದು ಆಟ! 'ಆ ಹುಡುಗಿ ಯಾರೋ ಏನೋ, ಎಲ್ಲಿಯವಳೋ?' ಹಿಂಜರಿದೆ ನಾನು.

"ಅವಳು ಯಾರಾದರೂ ಸರಿಯೇ, ನನಗವಳು ಇಷ್ಟವಾಗಿದ್ದಾಳೆ. ಬೆಳಗ್ಗೆ ಮಾಲ್‌ನಲ್ಲಿ ಅವಳನ್ನು ಕಂಡೆ ಆಂಟೀ, ಆಗಿನಿಂದ ಹಿಂಬಾಲಿಸುತಿದ್ದೇನೆ. ಆಂಟೀ, ಪ್ಲೀಸ್.. ಪ್ಲೀಸ್..." ಎನ್ನುತ್ತಾ ನನ್ನ ಸುತ್ತ ಥಕ ಥೈ, ಥಕ ಥೈ ಕುಣಿಯುತ್ತ ಮಿಡುಕತೊಡಗಿದ. ಹಿಂದಿನಿಂದ ನನ್ನ ಭುಜಗಳೆರಡನ್ನೂ ಹಿಡಿದು, "ಈಗಲೇ ಹೋಗಿ ಮಾತನಾಡಿಸಿ ಆಂಟೀ, ಪ್ಲೀಸ್ ಹೋಗಿ ಮಾತನಾಡಿಸಿ ಆಂಟೀ" ಎಂದು ಗೋಗರೆಯುತ್ತ ನನ್ನನ್ನು ಬಾಗಿಲೆಡೆ ತಳ್ಳಿದ. ಅಳುಕುತ್ತಳುಕುತ್ತಲೇ ಪಕ್ಕದ ಮನೆಯ ಗೇಟಿನ ಕಡೆ ಸಾಗಿದ ನನಗೆ ಆ ತರುಣಿಯ ಅದ್ಭುತ ಸೌಂದರ್ಯ ಕ್ಷಣಕಾಲ ತಟಸ್ಥಳನ್ನಾಗಿ ಮಾಡಿತು. ಮಲೆಯಾಳಂ ಬಾರದ ನನ್ನನ್ನು ರಾಜೀವಲೋಚನ ಸ್ವಾಗತಿಸಿದ್ದು ಇಂಗ್ಲೀಷಿನಲ್ಲಿ. ನನ್ನನ್ನು ಗಮನಿಸಿಯೋ ಏನೋ ಆ ಅತಿ ಸುಂದರ ಯುವತಿ, "ಓ.ಕೆ. ನಾನಿನ್ನು ಬರಲೇ... ಪ್ಯಾಕಿಂಗ್ ಇನ್ನೂ ಮುಗಿದೇ ಇಲ್ಲ... ಅರ್ಲಿ ಮಾರ್ನಿಂಗ್ ಫ್ಲೈಟ್ ಬೇರೆ.. ಬರಲೇ?" ಎಂದು ಕತ್ತು ಕೊಂಕಿಸಿ, ಬೆಳ್ಳನ್ನ ನಗೆ ಬೀರಿದು, ಕಣ್ಣಲ್ಲಿ ಹೊನ್ನು ಸುರಿಸಿ ಹೊರಟೇ ಹೋದಳು. ಅಷ್ಟರಲ್ಲೇ ರಾಜೀವಲೋಚನ, "ಬನ್ನಿ ಆಂಟಿ ಮನೆಯೊಳಗೆ, ಸ್ವಲ್ಪ ಮದುವೆ ಸ್ವೀಟ್ಸ್ ತೆಗೆದುಕೊಳ್ಳುವಿರಂತೆ " ಎಂದು ಆತ್ಮೀಯವಾಗಿ ಕರೆದ.

ಅವನ ಕರೆಗೆ ಕಾಯುತಿದ್ದ ನಾನು ಲಗುಬಗೆಯಿಂದ ಒಳಗೆ ಹೋಗಿ ಕುಳಿತೆ. ನನ್ನ ಮೊದಲ ಮಾತೇ, "ಯಾರೀಕೆ, ಎಲ್ಲಿಯವಳು,.. ಮದುವೆ ಮಾಡ್ತಾರಂತೇನು?"

ಈಗ ಮಾತಾಡಿದ್ದು ರಾಜೀವಲೋಚನನ ನವ ವಧು. "ಅವಳು ನನ್ನ ಚೈಲ್ಡ್‌ಹುಡ್ ಸಂಗಾತಿ. ಅಕ್ಕಪಕ್ಕದ ಮನೆಯಲ್ಲೇ ಬೆಳೆದವರು ನಾವು. ನನ್ನ ಮದುವೆಗೆ ಒಂದು ವಾರದ ಮುಂಚೆ ಅವಳಿಗೆ ಮದುವೆಯಾಯಿತು. ದುಬೈಯ ಹುಡುಗ . ನನ್ನ ಮದುವೆಗಾಗಿ ಕಾದಿದ್ದು ನಾಳೆ ದುಬೈಗೆ ಹಾರಲಿದ್ದಾಳೆ" ಎಂದು ಹೇಳಿದ್ದೇ ಪುನಹ ಪುನಹ ಹೇಳಿದಳು. ಎಲ್ಲವನ್ನೂ ಕೇಳಿಸಿಕೊಳ್ಳುತ್ತ ಮನೆಯಲ್ಲಿ ಕ್ಷಣಕ್ಷಣಕ್ಕೂ ಕಾದು ಕುಳಿತಿರುವ ಸೋದರಳಿಯನನ್ನು ನೆನೆಸಿಕೊಂಡು ವಿಳಂಬ ವಿವರ್ಣತೆಯಲ್ಲಿ ಬಿಳಿಚಿ ಹೋಗತೊಡಗಿದೆ.

***

ಆಂತರ್ಯ

– ಭ.ರಾ.ವಿ.

ಪ್ರೀತಿಗೊ ಸಾಂತ್ವನಕೊ
ಉತ್ಸಾಹ ಪ್ರೇರಣೆಗೊ
ಸ್ಪರ್ಶದಲೆ ವಿನಿಮಯದ ಪಯಣ
ತಾಯಿಯೋ ಸೋದರಿಯೊ
ಗೆಳತಿ, ಪ್ರೇಯಸಿ, ಮಡದಿ
ಯಾರಾಗಿಯೋ ಬರುವ ಕವನ!

ನನ್ನೊಳಗೆ ನಾ ಕೂತು
ನನ್ನೊಂದಿಗೇ ಮಾತು
ನಾನೆ ನನ್ನೊಡನಾಡಿ ಕೇಳಿದಂತೆ
ನನ್ನನೇ ಪ್ರಶ್ನಿಸುತ
ನಾನೆ ಉತ್ತರವಿತ್ತು
ನಾನೆ ನನ್ನನು ಸಂದರ್ಶಿಸುವುದು ಕವಿತೆ

ಅಕ್ಷರಗಳಾ ಕೊರತೆ
ಪದ ಅರ್ಥ ಮರೆತಂತೆ
ಒಳಭಾವದಾ ಒರತೆ ನಮಗೆ ದಿವ್ಯ
ಎಲ್ಲಿಂದಲೋ ಮೂಡಿ
ಮಾಡುತೆಲ್ಲರ ಮೋಡಿ
ಅರಿಯದೇ ಬಂದೆರಿಗಿದಂತೆ ಕಾವ್ಯ !

("ದಿವ್ಯ" ಎಂದರೆ ಇಲ್ಲಿ ಪರೀಕ್ಷೆ ಎನುವರ್ಥದಲ್ಲಿ)

***

ಸಣ್ಣ ಕತೆ – ಭಾಗ 2

ಸುಳಿಯೊಳು ಸಿಲುಕಿದೆ ಅಂಬಿಗ

– ಮಾಲತಿ ಶ್ರೀನಿವಾಸನ್

(ಇಲ್ಲಿಯವರೆಗೆ –

ತುಂಬು ಕುಟುಂಬದಲ್ಲಿ ಹುಟ್ಟಿದ ಕಥಾನಾಯಕಿ ವಸುಂಧರ ನುರಿತ ಗಾಯಕಿ, ತನ್ನ ಗಾಯನ, ಕಂಠ ಮಾಧುರ್ಯದಿಂದ ಶಾಲೆಯಲ್ಲಿ, ಕಾಲೇಜಿನಲ್ಲಿ ಅನೇಕ ಬಿರುದು ಬಹುಮಾನಗಳನ್ನು ಪಡೆದಿದ್ದಳು. ತಂದೆ ದೂರದ ಊರಿನಲ್ಲಿ, ಮನೆಯಲ್ಲಿ ದೊಡ್ಡಪ್ಪನ ಶಿಸ್ತು ನಿಯಮ ಪಾಲನೆ ಅನಿವಾರ್ಯ. ಅವಳ ಕಲೆಗೆ ಹಿರಿಯರ ಪ್ರೋತ್ಸಾಹ ಸಿಗುತ್ತಿರಲಿಲ್ಲ. ಅದರೂ ವಸುಂಧರಳ ಕಲಿಕೆ ನಿಂತಿರಲಿಲ್ಲ, ವಿಶೇಷ ಒಲವು ಹಿಂದಿ ಚಲನಚಿತ್ರ ಗೀತೆಗಳ ಗಾಯನದ ಕಡೆ, ಕಾಲೇಜಿನ ವಿದ್ಯಾಭ್ಯಾಸದ ಕೊನೆಯ ಹಂತದಲ್ಲಿದ್ದಾಗ, ರಾಜ್ಯಮಟ್ಟದ ಗಾಯನ ಸ್ಪರ್ಧೆಯಲ್ಲಿ ಮೊದಲ ಬಹುಮಾನ, ನಂತರ ಮುಂಬೈನಿಂದ ಪ್ರಸಿದ್ಧ ಸಂಗೀತ ನಿರ್ದೇಶಕರಿಂದ ಆಡಿಶನ್‌ಗೆ ಆಹ್ವಾನ ಬಂದಾಗ, ದೊಡ್ಡಪ್ಪ ಆ ಕಾಗದವನ್ನು ಹರಿದೆಸೆದು, ತಮ್ಮ ಸ್ನೇಹಿತರ ಮಗನೊಡನೆ ಅವಳ ಮದುವೆ ಮಾತುಕತೆಯ ವಿಷಯ ಮುಂದಿಟ್ಟು, ಮುಂದಿನ ವಾರ ಅವರು ಹೆಣ್ಣು ನೋಡಲು ಬರುವ ವಿಷಯ ಹೇಳಿದಾಗ ವಸುಂಧರಳಿಗೆ ತನ್ನ ಅಸಹಾಯಕತೆ ಸಿಟ್ಟು ತರಿಸುತ್ತದೆ.)

ಮುಂದೆ ಭಾಗ-2:

ಕಾಲೇಜಿನ ಜೀವನ ಮುಗೀತು, ಮುಂದೆ ಓದಲು ಅವಕಾಶ ಇದೆಯೋ ಇಲ್ಲವೋ ಎಂದು ಯೋಚಿಸಲೂ ಆಗದ ರೀತಿ ಧುತ್ತೆಂದು ಮುಂದೆ ಬಂದಿತ್ತು, ದೊಡ್ಡಪ್ಪನ ನಿರ್ಧಾರದ ಮಾತುಗಳು.

ಕೆಲಸಕ್ಕೆ ರಜಾ ಹಾಕಿ ತಂದೆಯೂ ಬರುತ್ತಿದ್ದಾರೆ ಎಂದರೆ ಅವರ ಸಹಮತಿಯೂ ಇದೆ, ತಾಯಿಯದೇನು ಅಭಿಪ್ರಾಯ? ಕೇಳುವುದು ವ್ಯರ್ಥ. ಮುಂಚಿನಿಂದ ಅತ್ತೆ, ಭಾವ, ಗಂಡ ಎಲ್ಲರ ನಿರ್ಧಾರಗಳಿಗೂ ಕೋಲೇಬಸವನಂತೆ ಸ್ವಂತ ಆಲೋಚನೆ ಇಲ್ಲದೆ ತಲೆ ಆಡಿಸುತ್ತಿದ್ದವರು ವೈದೇಹಿ, ಆ ಸೌಮ್ಯ ಮುಖದಲ್ಲಿ ಎಂದೂ ಭಾವನೆಗಳ ವೈಪರಿತ್ಯ, ತುಂಬಾ ಖುಷಿ ಅಥವಾ ಕೋಪತಾಪ ನೋಡಿದ್ದು ನೆನಪೇ ಇರಲಿಲ್ಲ ಅವಳಿಗೆ.

ದೊಡ್ಡಪ್ಪ ಯಾಕಿಷ್ಟು ನಿರ್ಭಾವುಕರಾಗಿ, ಇಷ್ಟು ಅವಸರದಲ್ಲಿ, ತನ್ನ ಜೀವನದ ನಿರ್ಧಾರ ತೆಗೆದುಕೊಂಡರು ಕೇಳಲು ಧೈರ್ಯ ಸಾಲಲಿಲ್ಲ.

ಅವಳ ಪ್ರಶ್ನೆಗೆ, ಗೊಂದಲಕ್ಕೆ ಉತ್ತರ ಸಿಕ್ಕಿದ್ದು ಮರುದಿನ ಅಜ್ಜಿಯೊಡನೆ ಹಿತ್ತಲಲ್ಲಿ ಗಿಡಗಳಿಗೆ ನೀರೆರೆಯುತ್ತಾ ಮಾತಾಡುತ್ತಿದ್ದ ಅಜ್ಜಿ ದೊಡ್ಡಪ್ಪನ ಸಂಭಾಷಣೆ ಕೇಳಿಸಿಕೊಂಡಾಗ. "ಅಲ್ವೊ ನಾಣಿ, ವಸು ಮದುವೆ ವಿಚಾರದಲ್ಲಿ ಯಾಕಿಷ್ಟು ಅವಸರ ಮಾಡ್ತಿದ್ದೀಯಾ? ಇನ್ನು ಈಗ 18 ತುಂಬಿದೆ, ಮುಂದೆ ಓದೋ ಆಸೆ ಇದೆಯೇನೋ ಅವಳಿಗೆ" ಅಂತ ಅಜ್ಜಿ ಕೇಳಿದಾಗ, ದನಿ ಏರಿಸಿ ಜೋರಾಗಿ ಗುಡುಗಿದ್ದರು ದೊಡ್ಡಪ್ಪ, "ಸಾಕಮ್ಮ. ಒಬ್ಬಳು ದೊಡ್ಡ ಓದು ಓದ್ತೀನಿ ಅಂತ ವಿಶಾಖಪಟ್ಟಣಕ್ಕೆ ಹೋಗಿ ಇತರೆ ಜಾತಿಯವನನ್ನು ಕಟ್ಟಿಕೊಂಡು ಹೊರದೇಶಕ್ಕೆ ಹಾರಿದ್ಲು. ನಂತರ ಮೂರು ಹೆಣ್ಣು ಮಕ್ಕಳ ಮದುವೆ ಮಾಡಿ ಜವಾಬ್ದಾರಿ ಮುಗಿಸಿದ್ದೀನಿ. ಇನ್ನು ಇವಳ ಸಂಗೀತದ ಹುಚ್ಚು ಇವಳನ್ನು ಎಲ್ಲಿಗೆ ಎಳಕೊಂಡು ಹೋಗುತ್ತೋ ಗೊತ್ತಿಲ್ಲ. ನೀ ಸುಮ್ನಿರು, ಅವಳಪ್ಪ ಬರ್ತಿದ್ದಾನೆ ಅವನೇ ನಿರ್ಧಾರ ಮಾಡ್ತಾನೆ. ನಾ ನೋಡಿರೋ ಶಂಕರ ಒಳ್ಳೆಯ ಹುಡುಗ, ದೊಡ್ಡ ಕೆಲಸದಲ್ಲಿದ್ದಾನೆ, ತುಂಬು ಸಂಸಾರ, ನಮ್ಮ ಜನ, ಅವಳು ಚೆನ್ನಾಗಿ

ಇರುತ್ತಾಳೆ. ನನಗೆ ಮಾತ್ರ ಅವಳ ಮೇಲೆ ಕಾಳಜಿ ಇಲ್ವಾ ಅಮ್ಮ" ಅಂತ ಅಂದ. ಮಗನ ಮಾತು ಕೇಳಿ ಅಜ್ಜಿನೂ ಮೌನದಲ್ಲಿ ಸಮ್ಮತಿ ಸೂಚಿಸಿದ್ದರು.

ತನ್ನ ಜೀವನದ ನಿರ್ಧಾರಕ್ಕೆ ಕಾರಣ ತಮ್ಮ ಹಿರಿಯ ಮಗಳ ಮೇಲಿದ್ದ ಅತೃಪ್ತಿ, ಕೋಪಕ್ಕೆ ಪ್ರತಿಕ್ರಿಯೆ. ಇದೆಂತಹ ನ್ಯಾಯ, ಯೋಚಿಸಿದಳು ವಸುಂಧರ. ದೊಡ್ಡಪ್ಪನ ಹಿರಿಯ ಮಗಳು ವೈದ್ಯಕೀಯ ಪದವಿ ಪಡೆಯಲು ಊರು ಬಿಟ್ಟು ಹೋದವಳು ಜೊತೆಯಲ್ಲಿ ಓದುತ್ತಿದ್ದ ಇತರೆ ಜಾತಿಯ ಹುಡುಗನನ್ನು ಪ್ರೀತಿಸಿ ಹಿರಿಯರ ಗಮನಕ್ಕೂ ತರದೆ ಮದುವೆಯಾಗಿ ಇಂಗ್ಲೆಂಡಿಗೆ ಹಾರಿದಾಗ ವಸುಂಧರ ಇನ್ನೂ ಚಿಕ್ಕವಳು.

ಹಠಾತ್ತನೆ ರೂಮು ಸೇರಿ ಊಟ ತಿಂಡಿ ಮಾಡದೇ ನಾಲ್ಕೈದು ದಿನ ಖಾಯಿಲೆ ಬಿದ್ದವರಂತೆ ಮಲಗಿದ್ದ ದೊಡ್ಡಪ್ಪನ ಅಂದಿನ ಪರಿಸ್ಥಿತಿ ಇನ್ನೂ ಅಚ್ಚಳಿಯದೆ ನಿಂತಿತ್ತು ಅವಳ ಮನದಲ್ಲಿ. ಅದಾದ ನಂತರ ಒಂದರ ನಂತರ ಒಂದು ಮೂರು ಹೆಣ್ಣುಮಕ್ಕಳ ಮದುವೆ ಮಾಡಿದ ದೊಡ್ಡಪ್ಪನ ಆತಂಕ ಇಂದು ಅರ್ಥವಾಗಿತ್ತು ವಸುಂಧರಳಿಗೆ. ತನ್ನನ್ನು ನೋಡಲು ಬರುವ ಹುಡುಗನನ್ನು ನಿರಾಕರಿಸುವ ಸ್ವಾತಂತ್ರ ತನಗೆ ಕೊಡುತ್ತಾರೆಯೆ, ಹುಡುಗ ಹೇಗಿರಬಹುದು?
ಪುಣೆಯ ಹತ್ತಿರ ಹಳ್ಳಿಯ ಕಾರ್ಖಾನೆಯಲ್ಲಿ ಕೆಲಸ, ಹೆಸರು ಶಂಕರ್. ಅವರು ನನ್ನನ್ನು ಒಪ್ಪಬೇಕಲ್ಲ, ಹತ್ತಾರು ಯೋಚನೆ, ವಯೋಸಹಜವಾದ ಕುತೂಹಲ ಮೂಡಿತ್ತು ಅವಳ ಮನದಲ್ಲಿ.

ಮುಂಬೈನಲ್ಲಿ ದೊಡ್ಡ ಗಾಯಕಿ ಆಗುವ ಅವಕಾಶ ಕೈ ತಪ್ಪಿ ಹೋದ ನಿರಾಸೆ ದುಃಖ ಒಂದು ಕಡೆ, ಹೊಸ ತಿರುವಿನ ಕುತೂಹಲ ಮತ್ತೊಂದು ಕಡೆ. ಕಣ್ಣು ಮುಚ್ಚಿದರೂ ನಿದ್ರೆ ಹತ್ತಲಿಲ್ಲ. ಪ್ರೀತಿ ಪ್ರೇಮ ವಯೋಸಹಜ ಭಾವನೆಗಳು ಮನಸ್ಸನ್ನು ತಟ್ಟಿದ್ದು ಅದುವರೆಗೆ ಬರೀ ಹಾಡಿನ ಸಾಹಿತ್ಯದ ಮೂಲಕ ಮಾತ್ರ. ಇಂದೇಕೋ ಅವಳಿಗೆ ಗೆಳತಿ ವನಮಾಲಳ ಅಣ್ಣ ಶ್ರೀನಿಧಿಯ ನೆನಪಾಯಿತು. ತನ್ನ ಹಾಡು ಕೇಳಿ ಮೆಚ್ಚುಗೆ ಸೂಚಿಸಿದಾಗ ಅವನ ಕಣ್ಣಲ್ಲಿನ ಆರಾಧನಾ ಭಾವ ಹಲವಾರು ಬಾರಿ ಮನಸ್ಸಿಗೆ ಬೆಚ್ಚನೆ ಕಾವು ನೀಡಿದ್ದು ನಿಜ. ಅದರ ಬಗ್ಗೆ ಯೋಚಿಸಿರಲಿಲ್ಲ. ಅಪರಿಚಿತ ಶಂಕರನೊಡನೆ ವಿವಾಹದ ಪ್ರಸ್ತಾಪ ಬಂದಾಗ, ದೂರದ ಊರು ಬೊಂಬಾಯಿನಲ್ಲಿ ಕಾಲೇಜಿನ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ ಶ್ರೀನಿಧಿ, ಪ್ರತಿ ಬೇಸಿಗೆ ರಜದಲ್ಲಿ ಬಂದಾಗ ತನ್ನ ಹಾಡುಗಳಿಗೆ ಬೇಡಿಕೆ ಇಡುತ್ತಿದ್ದ ಪರಿ ಅದನ್ನು ಮೆಚ್ಚಿ ಹೊಗಳುತ್ತಿದ್ದದ್ದು ನೆನಪಾಯಿತು. ಗೆಳತಿ ವನಮಾಲ ಸೂಕ್ಷ್ಮವಾಗಿ ಅಣ್ಣನ ಮನಸ್ಸನ್ನು ಹೇಳಿದಾಗ ಮನೆಯವರನ್ನು ಕೇಳುವ ಧೈರ್ಯ ಅವಳಲ್ಲಿ ಇರಲಿಲ್ಲ. ಕೇಳಿದ್ದರೂ ಜಾತಿ ಮುಂದಿಟ್ಟು ದೊಡ್ಡಪ್ಪ ಒಪ್ಪಲಾರರು, ವ್ಯರ್ಥ ಪ್ರಯತ್ನ ಈಗ ಯಾಕೆ. ಸುಮ್ಮನಿರು ಅಂತ ಸ್ನೇಹಿತೆಗೆ ಹೇಳಿದ್ದಳು. ಶ್ರೀನಿಧಿಯನ್ನು ಮದುವೆಯಾಗಿದ್ದರೆ.. ತನ್ನ ಕನಸು ನನಸಾಗುತ್ತಿತ್ತೇನೋ..? ಹುಚ್ಚು ಆಸೆ ಅನಿಸಿತು. ದೇವರಿಟ್ಟಂತಾಗಲಿ ಎಂದು ಅಮ್ಮನ ಹತ್ತಿರ ಸರಿದು ಮಲಗುವ ಪ್ರಯತ್ನಮಾಡಿದಳು.

ಮಾರನೆಯ ದಿನ ತಂದೆ ತಾಯಿ ಅಕ್ಕನೊಡನೆ ಹೆಣ್ಣು ನೋಡಲು ಬಂದ ಶಂಕರ. ಸಾಧಾರಣ ಮೈಕಟ್ಟಿನ ಎಣ್ಣೆಗೆಂಪು ಬಣ್ಣದ ಸೌಮ್ಯ ಮುಖದ ಹುಡುಗ. ದೊಡ್ಡ ಕೆಲಸದಲ್ಲಿರುವ ಗತ್ತು, ಜಂಬ ಮುಖದಲ್ಲಿ ಕಾಣಲಿಲ್ಲ. ಸದಾ ನಗುವಂತಿದ್ದ ಕಣ್ಣುಗಳಲ್ಲಿ ಅದೇನು ಆಕರ್ಷಣೆ, ಸ್ನೇಹ ಭಾವ.

ಅವನ ತಂದೆ ತಾಯಿಗಳು ವಸುಂಧರಳನ್ನು ಹತ್ತಿರ ಕೂಡಿಸಿಕೊಂಡು ವಿಶ್ವಾಸವಾಗಿ ಮಾತನಾಡಿಸಿದ್ದರು.

"ನಮ್ಮ ವಸು ಒಳ್ಳೆಯ ಹಾಡುಗಾತಿ. ದೇವರ ಹಾಡು, ಚಿತ್ರಗೀತೆ ಚೆನ್ನಾಗಿ ಹಾಡುತ್ತಾಳೆ" ಅಂತ ದೊಡ್ಡಪ್ಪ ನಗುತ್ತಾ ಹೇಳಿದಾಗ ತನ್ನ ಕಿವಿಯನ್ನೇ ನಂಬದೇ ಅವರ ಕಡೆ ನೋಡಿದಳು ವಸುಂಧರ.

ಅವಳ ಹಾಡು ಕೇಳುವ ಬೇಡಿಕೆ ಶಂಕರನ ಅಕ್ಕ ಮುಂದಿಟ್ಟಾಗ, "ನೀನ್ಯಾಕೋ ನಿನ್ನ ಹಂಗ್ಯಾಕೋ" ದಾಸರ ಪದ ಬಾವುಕಳಾಗಿ ಹಾಡಿದ್ದಳು ವಸು.

"ಹುಡುಗಿ ಜೊತೆ ನಾನು ಎರಡು ನಿಮಿಷ ಮಾತನಾಡಬಹುದೇ" ಅನಿರೀಕ್ಷಿತವಾಗಿ ಬಂದ ಶಂಕರನ ಪ್ರಶ್ನೆಗೆ ಒಂದು ಗಳಿಗೆ ತಬ್ಬಿಬ್ಬಾದ ದೊಡ್ಡಪ್ಪ ಸಾವರಿಸಿಕೊಂಡು, "ಆಗಬಹುದು. ವಸು, ನಮ್ಮ ತೋಟ ತೋರಿಸು" ಅಂತ ಹೇಳಿದಾಗ ತನ್ನ ಕಿವಿಯನ್ನೇ ನಂಬದಂತೆ ಕುಳಿತಿದ್ದಳು ವಸುಂಧರ. "ಪರ್ವಾಗಿಲ್ಲ, ತೋಟದ ಕಡೆ ಹೋಗಿ ಮಾತನಾಡಿಕೊಂಡು ಬನ್ನಿ" ಅಂತ ಸೋದರತ್ತೆ ಹೇಳಿದಾಗ ಎದ್ದು ಶಂಕರನೊಡನೆ ಹೊರಗೆ ಬಂದಳು.

ಸೊಂಪಾದ ಸೀಬೆ ಮಾವು ಮರದ ನೆರಳಿಗೆ ಬಂದಾಗ, "ಇಲ್ಲೇ ನಿಲ್ಲೋಣ. ಒಂದೆರಡು ಪ್ರಶ್ನೆ ಅಷ್ಟೇ" ಅಂತ ಶಂಕರ ನಗುತ್ತಾ ನುಡಿದ.

"ನೋಡಿ ವಸುಂಧರ, ನಾನಿರೋದು ಪುಣೆ ಹತ್ತಿರದ ಒಂದು ಹಳ್ಳಿಯಲ್ಲಿ, ಕ್ವಾರ್ಟರ್ಸ್ ದೊಡ್ಡದು ಕೊಟ್ಟಿದಾರೆ. ಅಪ್ಪ ಅಮ್ಮ ತಮ್ಮಂದಿರು ತಂಗಿ ಎಲ್ಲ ಮೈಸೂರಿನಲ್ಲಿ. ಅವರೆಲ್ಲರ ವಿದ್ಯಾಭ್ಯಾಸದ ಜವಾಬ್ದಾರಿ ನನ್ನ ಮೇಲಿದೆ. ಇನ್ನೊಂದು ಐದಾರು ವರ್ಷ ಎಲ್ಲರೂ ಅವರವರ ಜೀವನ ನಿರೂಪಿಸಿಕೊಳ್ಳುತ್ತಾರೆ. ಅಲ್ಲಿಯವರೆಗೂ ನನಗೆ ನಿಮ್ಮ ಸಹಕಾರ ಬೇಕು. ಯೋಚಿಸಿ ಹೇಳಿ ನಾನು ನಿಮಗೆ ಒಪ್ಪಿಗೆನೇ?"

ಅವನ ಪ್ರಶ್ನೆ ಕೇಳಿ ಜೋರಾಗಿ ನಗುವ ಮನಸಾಯ್ತು ಅವಳಿಗೆ. 'ಮನೆಯವರೆಲ್ಲ ಒಪ್ಪಿದ್ದಾರೆ ಅಂದ್ರೆ ಆಯ್ತು. ನನ್ನ ಒಪ್ಪಿಗೆ ಕೇಳುತ್ತಿರುವವರು, ನೀವೊಬ್ಬರೇ' ಅಂತ ಕೂಗಿ ಹೇಳಬೇಕೆನಿಸಿತು. ಮಾತು ಹೊರಡಲಿಲ್ಲ ಬಾಯಿಂದ. ಶಂಕರ ಉತ್ತರಕ್ಕಾಗಿ ಕಾಯುತ್ತಾ ಸುತ್ತಲೂ ಕಣ್ಣು ಹಾಯಿಸಿ ತೋಟದ ಸೊಬಗನ್ನು ನೋಡುತ್ತಿದ್ದ. ಸ್ವಲ್ಪ ಹೊತ್ತು ಇಬ್ಬರ ನಡುವೆ ಮೌನ. "ಮನೇಲಿ ಎಲ್ಲಾ ಒಪ್ಪಿದ್ದಾರೆ ನನ್ನದೇನು ಅಭ್ಯಂತರವಿಲ್ಲ" ಅಂತ ಹೇಳಿ ಸುಮ್ಮನೆ ನಿಂತಳು ವಸುಂಧರ. "ಸರಿ ಹಾಗಾದ್ರೆ ಒಳಗೆ ಹೋಗಿ ಎಲ್ಲರಿಗೂ ಗ್ರೀನ್ ಸಿಗ್ನಲ್ ಕೊಡೋಣವೇ" ಎಂದು ನಗುತ್ತಾ ಕೇಳಿದವನಿಗೆ ತಲೆ ಅಲ್ಲಾಡಿಸಿ ಮನೆ ಕಡೆ ಹೆಜ್ಜೆ ಹಾಕಿದಳು.

ಮಗಳ ಮದುವೆಗೆಂದು ಕೂಡಿಟ್ಟಿದ್ದ ವಿಮೆಯ ಹಣ ಅಣ್ಣನ ಕೈಯಲ್ಲಿಟ್ಟು, ಮದುವೆಗೆ ಹದಿನೈದು ದಿನದ ಮುಂಚೆ ರಜೆ ಹಾಕಿ ಬರುವುದಾಗಿ ಹೇಳಿ ಊರಿಗೆ ಹೊರಟು ನಿಂತ ಅಪ್ಪ ಒಮ್ಮೆಯೂ ತನ್ನ ಅಭಿಪ್ರಾಯದ ಬಗ್ಗೆ ಕೇಳಲಿಲ್ಲವಲ್ಲ, ದುಃಖ ಉಮ್ಮಳಿಸಿತ್ತು ಅವಳಿಗೆ. "ಅಣ್ಣ ಏನು ಮಾಡಿದರೂ ನಮ್ಮ ಒಳ್ಳೆಯದಕ್ಕೆ, ಖುಷಿಯಾಗಿರು ವಸು." ಅಂತ ಭುಜ ತಟ್ಟಿ, ಅಪ್ಪ ಹೊರಟರು.

ಮುಂದಿನ ಎರಡು ತಿಂಗಳು ಕನಸಿನಂತೆ ಭರದಲ್ಲಿ ನಡೆಯಿತು ವಿವಾಹದ ತಯಾರಿ, ಕೀಲುಗೊಂಬೆಯಂತೆ ಯಾಂತ್ರಿಕವಾಗಿ ಅಮ್ಮ ಚಿಕ್ಕಮ್ಮನೊಡನೆ ತನಗೆ ಬೇಕಾದ ಸೀರೆ ಒಡವೆ ಆಯ್ಕೆಗೆ ಓಡಾಡಿದಳು. ಮದುವೆಯಾಗಿ ಅಕ್ಕ ದೂರ ಹೋಗುವುದನ್ನು ಅರಿತ ತಂಗಿ ಲಲಿತಳ ಸಪ್ಪೆ ಮುಖ ಬೇಸರ ತರಿಸುತ್ತಿತ್ತು, ತಮ್ಮ ಶ್ರೀಧರ ಅವಳನ್ನು ತಬ್ಬಿ,

"ಅಕ್ಕ ನೀ ದೂರ ಹೋಗ್ತಿಯೇನೆ" ಅಂತ ಅತ್ತಾಗ, ಅವನನ್ನು ತಬ್ಬಿ ಹಿಡಿದು ಮನಸ್ಸು ಹಗುರ ಆಗುವವರೆಗೂ ಅತ್ತಿದ್ದಳು ವಸುಂದರ.

ಕೈ ತುಂಬಾ ಕೆಲಸ, ಮನೆ ತುಂಬಾ ಮದುವೆಗೆ ಬಂದ ನೆಂಟರ ಸಂಭ್ರಮ. ಅಮ್ಮನ ಆದೇಶದ ಮೇರೆಗೆ ಒಂದು ದೊಡ್ಡ ಟ್ರಂಕಿನಲ್ಲಿ ತನ್ನ ಬಟ್ಟೆ ಪುಸ್ತಕಗಳನ್ನೆಲ್ಲ ಸೇರಿಸುತ್ತಿದ್ದಾಗೆಲ್ಲ ಎಷ್ಟು ತಡೆದರೂ ದುಃಖ ಕಟ್ಟೆಯೊಡೆಯುತ್ತಿತ್ತು.

ವರಪೂಜೆಯ ದಿನ ರಾತ್ರಿ ರೇಡಿಯೋದಲ್ಲಿ ಬಂದ ಸುದ್ದಿಯ ಮೇರೆಗೆ ದೇಶದಲ್ಲೆಲ್ಲಾ ಪ್ರಧಾನಿ ನೆಹರು ಅವರ ಸಾವಿಗೆ ಶೋಕಾಚರಣೆಯ ಘೋಷಣೆ ಕೇಳಿ ದೊಡ್ಡಪ್ಪ, ವಾಲಗ, ನಾದಸ್ವರ, ದೀಪಾಲಂಕಾರ ಎಲ್ಲ ರದ್ದು ಮಾಡಿದ್ದರು.

"ಅಕ್ಕ, ಹಾಳು ಪ್ರಧಾನಿ ಇವತ್ತೇ ಸಾಯಬೇಕಿತ್ತೇ, ಎರಡು ದಿನ ಬಿಟ್ಟು ಸತ್ತಿದ್ದರೆ ಏನಾಗುತಿತ್ತು? ಹಾಡು ಕೇಳಿ ಡಾನ್ಸ್ ಮಾಡೋ ಚಾನ್ಸ್ ಹೋಯ್ತು" ಅಂತ ತಮ್ಮ ಹಲುಬಿದಾಗ ಅವನ ಮುಗ್ಧತೆಗೆ ಮನಸಾರ ನಕ್ಕಿದ್ದಳು ವಸುಂಧರ.

ಸದ್ದುಗದ್ದಲವಿಲ್ಲದೇ ಮದುವೆ ನಡೆದಿತ್ತು.

ಮೊದಲ ಬಾರಿಗೆ ಗಂಡನ ಮನೆಗೆ ಹೊರಟಾಗ ಶಂಕರನ ತಾಯಿ ತಂದೆ, ಅಕ್ಕ ಮತ್ತು ವಸುಂಧರಳ ತಾಯಿ,ತಂದೆ ಜೊತೆಯಲ್ಲಿ ಹೊರಟರು.

ಶಂಕರನ ತಾಯಿ ಒಂದು ತಿಂಗಳು ಸೊಸೆ ಜೊತೆಯಾಗಿದ್ದು, ಶಂಕರನ ಬೇಕು ಬೇಡಗಳ ಬಗ್ಗೆ, ಮನೆಯ ಆಚಾರ ವಿಚಾರದ ಬಗ್ಗೆ, ಸೂಕ್ಷ್ಮವಾಗಿ ಪರಿಚಯ ಮಾಡಿಸಿದರು. ಅವಳ ತಾಯಿ ವೈದೇಹಿ ತಂದೆಯೊಡನೆ ಒಂದು ವಾರವಿದ್ದು ಹತ್ತಿರದ ಮುಂಬೈಗೆ ಹೊರಟಾಗ ತನ್ನೆಲ್ಲ ಹಳೆಯ ಜೀವನ ಅವರೊಡನೆ ಹೊರಟು ನಿಂತಂತಿತ್ತು ಅವಳಿಗೆ.

ಸಮಾಧಾನ ತಂದ ವಿಚಾರವೆಂದರೆ, ಹತ್ತು ವರ್ಷಗಳ ನಂತರ ತಂದೆಯ ಕೆಲಸ ಮುಂಬೈಯಲ್ಲಿ ಖಾಯಂ ಆಗಿ ತಾಯಿಯನ್ನು, ತಂಗಿ ತಮ್ಮನನ್ನು ತಮ್ಮೊಡನೆ ಕರೆದುಕೊಂಡು ಹೋಗುವ ನಿರ್ಧಾರ ಮಾಡಿದ್ದು. ತಂದೆ ತಾಯಿ ಒಂದಾಗಿರುವುದು, ಮುಖ್ಯವಾಗಿ ಹೊಸ ಜಾಗದಲ್ಲಿ ತಮ್ಮ ತಂಗಿಯ ಓದು, ಬೇಕೆನಿಸಿದಾಗ ಅವರನ್ನು ನೋಡಲು ಎರಡು ಘಂಟೆಯಲ್ಲಿ ಹೋಗುವಷ್ಟು ಹತ್ತಿರ ಇರುವುದು ಮನಸ್ಸಿಗೆ ಸಮಾಧಾಕೊಟ್ಟಿತ್ತು.

ಎಲ್ಲರೂ ಹೊರಟು ನಿಂತಾಗ ಮೊದಲ ಬಾರಿಗೆ ಮನೆ ಬಿಕೋ ಅನಿಸಿತ್ತು ಅವಳಿಗೆ. ಅವಳ ಬೇಸರ ದೂರಾಗಿಸಲು ಹತ್ತಿರದ ಮಹಾಬಲೇಶ್ವರ ಬೆಟ್ಟದ ತಾಣಕ್ಕೆ ಹೆಂಡತಿಯನ್ನು ಕರೆದೊಯ್ದಿದ್ದ ಶಂಕರ.

ಕಾಲಕ್ರಮೇಣ ಶಂಕರನ ಸ್ವಭಾವ, ಅವನ ತಾಳ್ಮೆ, ಸ್ನೇಹಪರತೆ, ಹೊಸದನ್ನು ಪರಿಚಯಿಸುವ, ವಿವರಿಸುವ ಪರಿ ಅವಳನ್ನು ನಿಧಾನವಾಗಿ ಅವನ ಕಡೆಗೆ ಸೆಳೆದಿತ್ತು. ರಜೆ ಮುಗಿದು ತಾನು ತನ್ನ ಕೆಲಸಕ್ಕೆ ಸೇರುವ ಎರಡು ಮೂರು ದಿನದ ಮುಂಚಿನಿಂದಲೇ ತನ್ನ ದಿನಚರಿಯನ್ನು ಅವಳಿಗೆ ಪರಿಚಯಿಸಿದ್ದ ಶಂಕರ. ಅವನು ಕೆಲಸಕ್ಕೆ ಹೊರಟ ನಂತರ ಮನೆಗೆ ಬರುತ್ತಿದ್ದ ಮರಾಠಿ ಕೆಲಸದ ಹುಡುಗಿ ಅವಳ ಸಂಗಾತಿಯಾದಳು. ಅವಳ ಮರಾಠಿ ಭಾಷೆ, ಇವಳ ಹಿಂದಿ ಭಾಷೆಗಳಲ್ಲಿ ಸ್ವಲ್ಪ ದಿನದಲ್ಲೇ ಒಮ್ಮತವಾಗಿತ್ತು.

ಈ 15 ವರ್ಷಗಳು ಅದೆಷ್ಟು ಬೇಗ ಕಳೆಯಿತು. ಪ್ರೀತಿ, ಪ್ರಿಯ ಮುದ್ದಾದ ಇಬ್ಬರು ಹೆಣ್ಣುಮಕ್ಕಳು ಮನೆ, ಮನಸ್ಸು ತುಂಬಿದ್ದರು.

ತನ್ನ ಮದುವೆಯಾದ ವರುಷಗಳ ನಂತರ ಇತ್ತೀಚೆಗೆ ದೊಡ್ಡಪ್ಪ ಬೆಂಗಳೂರಿನಲ್ಲಿ ಹೃದಯಘಾತದಿಂದ ಸಾವನ್ನಪ್ಪಿದ್ದನ್ನು ಕೇಳಿ ಸಂಕಟದಲ್ಲಿ ದುಃಖಿಸಿದ್ದಳು, ಅವರ ನಿರ್ಧಾರ, ಧೋರಣೆ ಅಂದು ಅಸಹನೀಯ ಅನಿಸಿದ್ದರೂ ಇಂದು ತನಗೆ ನೆಮ್ಮದಿಯ ಜೀವನ ನೀಡಿತ್ತು. ಶಂಕರನ ಪ್ರೀತಿ ಸಾಂಗತ್ಯ ಹೊಸ ರೀತಿಯ ಹುರಪು ಜೀವನದಲ್ಲಿ ಅವಳಿಗೆ.

ಅವನಿಗೆ ಬೆಂಬಲವಾಗಿ ನಿಂತು ಸಂಸಾರ ತೂಗಿಸಿದ್ದರ ಫಲ, ಇಬ್ಬರು ಮೈದುನಂದಿರೂ ಓದು ಮುಗಿಸಿ, ಒಬ್ಬ ದಿಲ್ಲಿಯಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ವಿಭಾಗದ ಮುಖ್ಯಸ್ಥನಾಗಿ, ಇನ್ನೊಬ್ಬ ಬೊಂಬಾಯಿ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ್ದರು. ಅವರಿಬ್ಬರ ಮತ್ತು ನಾದಿನಿಯ ಮದುವೆಯ ಎಲ್ಲಾ ಜವಾಬ್ದಾರಿಯಲ್ಲೂ ಶಂಕರನೊಡನೆ ಕೈಜೋಡಿಸಿ ಅತ್ತೆ ಮಾವಂದಿರ, ಸಂಸಾರದ ಎಲ್ಲಾ ಸದಸ್ಯರ ಪ್ರೀತಿ ಗಳಿಸಿದ್ದಳು. ವಸುಂಧರಾ.

ಒಮ್ಮೊಮ್ಮೆ ಗಾಯಕಿಯಾಗುವ ಕನಸು ಸುಪ್ತ ಮನಸ್ಸಿನಲ್ಲಿ ಇದ್ದು ಕನಸಿನ ರೂಪದಲ್ಲಿ ಅವಳನ್ನು ಕಾಡುತ್ತಿದ್ದದ್ದಂತೂ ನಿಜ, ಜೀವನದ ವಾಸ್ತವ ಕನಸನ್ನು ಮರೆಸಿತ್ತು, ಸಂಸಾರದ ಸುಳಿ ಬಂಧನ ಅನಿಸಲಿಲ್ಲ.

ಸ್ಕೂಲಿನಿಂದ ಬಂದ ಮಗಳು ಜೋರಾಗಿ ಹಳೆ ಹಿಂದಿ ಹಾಡನ್ನು ಹಾಡುತ್ತಿದ್ದಳು, "ಕುಚ್ ಖೋಕರಪಾನ ಹೈ,ಕುಚ್ ಪಾಕರ ಖೋನ ಹೈ ಜೀವನ್ ಕಾ ಮತಲಬ್ ಹೈ ಆನಾ ಔರ ಜಾನ ಹೈ". ಎಷ್ಟು ಸತ್ಯ "ಆನಾ ಔರ ಜಾನ ಹೈ, ಖೋನ ಔರ ಪಾನ ಹೈ." ಹಳೆ ಹಾಡಿನಲ್ಲಿ ಹೊಸ ಅರ್ಥ ಹುಡುಕಿತ್ತು ಅವಳ ಮನಸ್ಸು.

"ಅಮ್ಮ ಸ್ಕೂಲಲ್ಲಿ ನಾಳೆ ಫಿಲಂ ಹಿಟ್ಸ್ ಕಾಂಪಿಟೇಶನ್ ಇದೆ, ಪ್ರಾಕ್ಟೀಸ್ ಮಾಡಿಸ್ತೀಯಾ ಪ್ಲೀಸ್. ಹೋದ ಸಲದಂತೆ ಈ ಸಲಾನು ಪ್ರೈಸ್ ಗ್ಯಾರಂಟಿ" ಅಂತ ಹೇಳುತ್ತಾ ಮಗಳು ಪಕ್ಕದಲ್ಲಿ ಬಂದು ಕುಳಿತಾಗ, ತನ್ನ ಕನಸಿನ ಬಿಂಬ ಅವಳ ಕಂಗಳಲ್ಲಿ ಪ್ರತಿಬಿಂಬಿಸಿದಂತೆನಿಸಿ ಅವಳನ್ನು ತಬ್ಬಿ ಹಿಡಿದು ಜೋರಾಗಿ ನಕ್ಕಳು ವಸುಂಧರಾ. (ಮುಗಿಯಿತು)

***

ಅನುಭವ ಕಥನ

ಸ್ಫುರದ್ರೂಪಿ ಗೆಳೆಯ

– ಶೀಲಾ ಅರಕಲಗೂಡು

ಬಹಳ ದಿನಗಳಿಂದ ಕೆಮ್ಮು ನೆಗಡಿ ಅಂದ್ಕೊಂಡು ವಾಕಿಂಗ್ ಹೋಗೋದೇ ಬಿಟ್ಟಿಟ್ಟಿದ್ದೆ. ಈಗ ಚಳಿ ಓಡ್ಹೋಗಿದೆ, ಬಿಸಿಲು ತನ್ನ ಪ್ರಖರತೆಗೆ ಮುನ್ನುಡಿಯನ್ನೂ ಹಾಕಿದೆ. ಮತ್ತೆ ಮೊದಲಿನಂತೆ ವಾಕಿಂಗ್ ಹೋಗೋಣ ಅಂದ್ಕೊಂಡು ಇವತ್ತು ಬೆಳಗ್ಗೆ ಐದು ಗಂಟೆಗೇ ಎದ್ದೆ. ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿ ತಯಾರಾದೆ. ಕಿಟಕಿಯಿಂದ ಹೊರಗೆ ನೋಡ್ದೆ. 'ಯಾಕೋ ಇನ್ನೂ ಕತ್ತಲೆ ತುಂಬಾ ಇದೆ' ಅಂದ್ಕೊಂಡು ಹಾಗೇ ಒಂದು ಪುಸ್ತಕ ಕೈಲಿ ಹಿಡಿದು ಓದ್ತಾ ಕೂತೆ. ಅದೊಂದು ಕಳ್ಳನ ಕಥೆ. ಸಣ್ಣ ಕಥೆಯಾಗಿತ್ತು. ಹಾಗಾಗಿ ಒಂದು 10 ನಿಮಿಷದಲ್ಲಿ ಓದಿ ಮುಗಿಸಿದೆ. ಸರಿ, ಇನ್ನು ಹೊರಡೋಣ ಅನ್ಕೊಂಡು ಮೇಲೆದ್ದೆ. ಹಾಲಿನವನಿಗಾಗಿ ಪ್ಲಾಸ್ಟಿಕ್ ಬ್ಯಾಗ್ನಲ್ಲಿ ಒಂದು ಕೂಪನ್ ಇಟ್ಟು ಹೊರಗಡೆ ಬಾಗಿಲಿನ ಚಿಲಕಕ್ಕೆ ನೇತು ಹಾಕಿದ್ರೆ ಬಂದು ಹಾಲು ಹಾಕಿ ಹೋಗ್ತಾನೆ. ಹಾಗಾಗಿ ಕೂಪನ್ಗಳಿದ್ದ ಡಬ್ಬಿಯಿಂದ ಒಂದು ಕೂಪನ್ ಬ್ಯಾಗಿಗೆ ಹಾಕ್ದೆ. ನಂತರ ಕಾಲಿಗೆ ಕಾಲ್ಚೀಲ, ಶೂಸು ಹಾಕ್ಕೊಂಡು, ಹೆಗಲಿಗೆ ಒಂದು ಸಣ್ಣ ತೂಗುಚೀಲವನ್ನೂ ಏರಿಸಿ ಅಲಂಕಾರ ಭೂಷಿತಳಾದೆ. ಬೀಗದ ಕೈಯನ್ನು ಕೈಯಲ್ಲಿ ಹಿಡಿದು ಬಾಗಿಲು ತೆಗೆದೆ. ಸುಮಾರು ಐದೂವರೆ ಆಗಿತ್ತು ಅನ್ಸುತ್ತೆ. ಇನ್ನೂ ಕತ್ತಲಿತ್ತು. ಬಾಗಿಲಿಗೆ ಬೀಗ ಹಾಕಿ ಗೇಟ್ ಹತ್ರ ಬಂದೆ. ಆ ಕಡೆ ಈ ಕಡೆ ನೋಡ್ದೆ. ಆಗಿನ್ನೂ ಕಳ್ಳನ ಕಥೆ ಓದಿದ್ನಾ, ಇಲ್ಲ ಯಾರಾದರೂ ಇದ್ದಿರಬಹುದೇ? ಎಂಬ ಗುಮಾನಿ. ಗೇಟು ತೆಗೆದೆ. ಅಷ್ಟು ದೂರದಲ್ಲಿ ಒಬ್ಬ ನಿಂತಿದ್ದ. ನೋಡಕ್ಕೆ ಬೆಳ್ಳಗೆ, ಎತ್ತರಕ್ಕೆ ಚೆನ್ನಾಗಿದ್ದ. ಸಾಮಾನ್ಯವಾಗಿ ಸ್ವಲ್ಪ ಕತ್ತಲಿರುವಾಗಲೇ ಬೀದಿಯಲ್ಲಿ ಯಾರನ್ನು ನೋಡಿದರೂ ಭಯಾನೇ ಆಗುತ್ತೆ ಅಲ್ವಾ? ನನ್ನ ಭಯಕ್ಕೆ ಕಾರಣ ಈಗ ಎಂಟು ವರ್ಷಗಳ ಹಿಂದೆ ನಡೆದಂಥ ಒಂದು ದುರ್ಘಟನೆ.

ಅಂದು ಭಾನುವಾರ ಆಗಿತ್ತು. ರಾತ್ರಿ 8:30 ಇರಬಹುದು. ಏಳೂವರೆಗೆ ವಾಕಿಂಗ್‌ಗೆ ಅಂತ ಹೋದವಳು ಎಂಟೂವರೆಗೆ ಹಿಂದಿರುಗ್ತಾ ಇದ್ದೆ. ನಮ್ಮನೆ ಬೀದಿಗೆ ಬಂದಿದ್ದೆ. ಸ್ವಲ್ಪ ಕತ್ತಲಿತ್ತು. ಬೀದಿಯಲ್ಲಿ ಬರುವಾಗ ನಾನು ಒಂದು ತುದಿಯಲ್ಲಿ ನಡೀತಿದ್ರೆ ಇನ್ನೊಂದು ತುದಿಯಲ್ಲಿ ಒಬ್ಬ ಸ್ವಲ್ಪ ಕಪ್ಪಗಿದ್ದ ಹುಡುಗ ಕೂಡಾ ನಡೆದು ಬರ್ತಿರೋದನ್ನು ನೋಡಿದೆ. ಅವನೇ ಕಪ್ಪಗಿದ್ನೋ ಅಥವಾ ಕತ್ತಲಿದ್ದಿದ್ರಿಂದ ಕಪ್ಪಗೆ ಕಂಡನೋ ಅಥವಾ ನನ್ನ ದೃಷ್ಟಿ ಮಂದ ಇರೋದ್ರಿಂದ ಹಾಗೆ ಕಂಡನೋ, ಗೊತ್ತಿಲ್ಲ. ಒಟ್ನಲ್ಲಿ ಮುಖ ಗುರುತಿಸಲಾಗದ ಬಣ್ಣ. ಸರಿ, ಯಾರೋ ನಡ್ಕೊಂಡು ಹೋಗ್ತಿದ್ದಾರೆ ಅನ್ನಿಸಿ ನನ್ನ ಪಾಡಿಗೆ ನಾನು ಯಾವುದೋ ಆಲೋಚನೆ ಮಾಡ್ಕೊಂಡು ಮುನ್ನಡೆದೆ. ಅದೂ ಅಲ್ದೆ ಇನ್ನೂ 8.30ರ ಸಮಯ. ಹಾಗಾಗಿ ಯಾವ ಹೆದರಿಕೆಯೂ ಇರಲಿಲ್ಲ. ಮತ್ತೆ ಬೇರಿನ್ನಾವ ಕೆಟ್ಟ ಯೋಚನೆಯೂ ಬರ್ಲಿಲ್ಲ. ಆದರೆ ಒಂದು ಕ್ಷಣ ಅನ್ನಿಸ್ತು, 'ಈ ರಾತ್ರಿ ಹೊತ್ತಿನಲ್ಲಿ ಈ ಹುಡುಗ ಟೋಪಿ ಯಾಕೆ ಹಾಕ್ಕೊಂಡಿದ್ದಾನೆ?' ಅಂತ. ಆದರೆ ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಚಿಕ್ಕ ವಯಸ್ಸಿನ ಹುಡುಗರಿಗೆ ಹೀಗೆ ವಿಚಿತ್ರವಾಗಿ ಅಲಂಕರಿಸಿಕೊಳ್ಳುವ ಆಸೆ ಇರುತ್ತೆ ಅಲ್ವೇ? ಮುಂದೆ ನನ್ನದೇ ಆಲೋಚನೆಯಲ್ಲಿ ನಡೆದ ನಾನು ನಮ್ಮ ಮನೆ ಮುಂದೆ ಬಂದಿದ್ದೆ. ಮುಂದಿದ್ದ ಕಲ್ಲಿನ ಹಾಸಿನ ಮೇಲೆ ಹೀಗೆ ತಿರುಗಿದೆ. ಇನ್ನೇನು ಮೂರು ಹೆಜ್ಜೆ ಇಟ್ಟರೆ ಮನೆಯ ಗೇಟ್ ಸಿಕ್ತಿತ್ತು. ಆದರೆ ಅಷ್ಟರಲ್ಲೇ ಯಾರೋ ಹಿಂದಿನಿಂದ ನನ್ನ ಕುತ್ತಿಗೆಗೆ 'ಧಪ್' ಎಂದು ಜೋರಾಗಿ ಹೊಡ್ದು ಎಳೆದ ಹಾಗಾಯಿತು.

'ಅಮ್ಮಾ' ಅಂತ ಕಿರುಚಿದೆ. ಆದರೆ ಆತ ಬಿಡ್ಲಿಲ್ಲ. ಎಳೆದ ರಭಸಕ್ಕೆ ನಾನು ಕೆಳಗೆ ಬಿದ್ದೆ. ನೋಡ ನೋಡುವಷ್ಟರಲ್ಲಿ ಆತ ನನ್ನ ಕುತ್ತಿಗೆಯಲ್ಲಿದ್ದ ಚಿನ್ನದ ಸರಾನ ಕಿತ್ಕೊಂಡು ಓಡ್ತಿದ್ದ. ಬಿದ್ದಿದ್ದ ನಾನು ಹಾಗೇ ಎದ್ದು ನೋಡಿದರೆ, ಆತ ಅನತಿ

ದೂರದಲ್ಲಿ ಸ್ಕೂಟರ್ ಇಟ್ಕೊಂಡು ನಿಂತಿದ್ದ ಗೆಳೆಯನ ಹಿಂದೆ ಕೂತ್ಕೊಂಡ. ಶರವೇಗದಲ್ಲಿ ಇಬ್ಬರೂ ಹೊರಟೇಬಿಟ್ರು. ನಾನು, 'ಕಳ್ಳ_ ಕಳ್ಳ' ಅಂತ ಕಿರುಚಿದ್ದಷ್ಟೇ ಬಂತು. ಸುತ್ತಮುತ್ತಲಿನ ಮನೆಗಳಲ್ಲಿ ಯಾರಿಗೂ ನನ್ನ ದನಿ ಕೇಳಲೇ ಇಲ್ಲ. ಎಲ್ಲರ ಮನೆಯಲ್ಲೂ ಟೀವಿ ಧ್ವನಿ ಜೋರಾಗಿ ಬಡೆದುಕೊಳ್ಳುತ್ತಿತ್ತು. ಮತ್ತೆ ಏನು ಮಾಡೋದು? 'ಸಧ್ಯ, ಹೆಚ್ಚಿನ ಪೆಟ್ಟೇನೂ ಆಗಲಿಲ್ವಲ್ಲ' ಅಂದ್ಕೊಂಡು ಮನೆಗೆ ಬಂದೆ. ನನ್ನ ತಂದೆ ಒಳಗಿದ್ರು. ಅವರಿಗೆ ನಡೆದದ್ದನ್ನು ಹೇಳಿದೆ. ಸರದ ಬಗ್ಗೆ ಹೆಚ್ಚು ಚಿಂತಿಸದೆ, ನಾನು ಹುಷಾರಾಗಿರೋದನ್ನು ನೋಡಿ ಸಮಾಧಾನಪಟ್ಕೊಂಡರು.

ಅಷ್ಟರಲ್ಲಿ ಪಕ್ಕದ ಮನೆಯ ಯುವಕನಿಗೆ ನನ್ನ ಧ್ವನಿ ಕೇಳಿಸಿತ್ತು ಅನ್ಸುತ್ತೆ, ಬಂದು, 'ಏನಾಯ್ತು ಆಂಟಿ, ನೀವು ಕಿರುಚಿದಂತಾಯ್ತು?' ಅಂತ ಕೇಳ್ದ. ನಡೆದದ್ದನ್ನು ಹೇಳಿದಾಗ, 'ಬನ್ನಿ ಪೋಲೀಸ್ ಸ್ಟೇಷನ್‌ಗೆ ಹೋಗೋಣ_ ಕಂಪ್ಲೇಂಟ್ ಕೊಡೋಣ' ಅಂದ. ಆತನೇ ನನ್ನನ್ನು ಕಾರಲ್ಲಿ ಕರೆದುಕೊಂಡು ಹೋಗಿ ಕಂಪ್ಲೇಂಟ್ ಕೊಡಿಸಿದ.

ಅದೆಷ್ಟೋ ತಿಂಗಳುಗಳೂ ಕಳೆದವು. ಆದರೂ ನನ್ನ ಸರ ಮಾತ್ರ ಸಿಗ್ಲಿಲ್ಲ. ನಡುವೆ ಒಮ್ಮೆ ಪೋಲಿಸ್ ಸ್ಟೇಷನ್ನಿಂದ ಒಬ್ಬರು ಕರೆ ಮಾಡಿ, 'ಇಲ್ಲೊಬ್ಬ ಕಳ್ಳ ಸಿಕ್ಕಿದಾನೆ. ಅವನೇ ನಿಮ್ ಸರ ಕದ್ದಿರಬಹುದೇ? ಬಂದು ನೋಡಿ' ಅಂತ ಕರೆದರು. ನಾನು ಮತ್ತೆ ಪಕ್ಕದ ಮನೆಯ ಯುವಕನೊಂದಿಗೆ ಪೋಲೀಸ್ ಸ್ಟೇಷನ್‌ಗೆ ಹೋದೆ. ಮೂಲೆಯಲ್ಲಿ ಒಬ್ಬ ಕುಳಿತಿದ್ದ. 'ಇವನೇನಾ ನೋಡಿ ಮೇಡಂ, ನಿಮ್ಮ ಸರ ಕದ್ದಿದ್ದು?' ಅಂತ ಕೇಳಿದ್ರು. ಗುರುತಿಸೋದಾದರೂ ಹೇಗೆ? ಅಂದು ರಾತ್ರಿ ಕತ್ತಲಾಗಿತ್ತು. ಆ ಮನುಷ್ಯನೋ ಸ್ವಲ್ಪ ಕರ್ರಗಿದ್ದ. ಹ್ಯಾಟ್ ಇಳಿ ಬಿಟ್ಕೊಂಡಿದ್ದ. ಈಗ ನನಗೆ ಗುರುತಿಸಲಾಗಲಿಲ್ಲ. ಅವನೋ ನನ್ನನ್ನೇ ದುರುಗುಟ್ಟಿಕೊಂಡು ನೋಡ್ತಿದ್ದ. 'ಕ್ಷಮಿಸಿ, ಗುರುತು ಹಿಡಿಯೋಕೆ ಆಗ್ತಿಲ್ಲ' ಅಂದೆ. ವಾಪಸ್ ಬಂದೆ. ಮುಂದೊಂದು ದಿನ ಪೋಲಿಸ್ನೋರು ಕೇಸನ್ನು ಮುಚ್ಚಿ ಹಾಕಿ ನನ್ನಿಂದ ಸಹಿಯನ್ನೂ ಮಾಡಿಸಿಕೊಂಡ್ರು. ನಾನು ಕೂಡಾ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. 'ಆ ಚಿನ್ನದ ಸರ ಇಟ್ಟುಕೊಳ್ಳುವ ಭಾಗ್ಯ ನನಗಿರಲಿಲ್ಲ' ಅಂದ್ಕೊಂಡು ಸುಮ್ಮನಾದೆ. ಚಿನ್ನದ ಸರವನ್ನು ಮರೆತರೂ ಘಟನೆಯನ್ನು ಮರೆಯೋದು ಹೇಗೆ? ಅದು ನನ್ನ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿತ್ತು. ಇಷ್ಟು ವರ್ಷಗಳಾದರೂ, ಈಗಲೂ ರಸ್ತೆಯಲ್ಲಿ ಓಡಾಡುವಾಗ ತುಂಬಾ ಎಚ್ಚರದಲ್ಲಿರ್ತೀನಿ. ಮೇಲಾಗಿ, ಚಿನ್ನದ ಆಭರಣ ಧರಿಸೋದನ್ನೇ ಬಿಟ್ಟುಬಿಟ್ಟಿದ್ದೇನೆ.

ಹಾಗಾಗಿ, ಇವತ್ತು ಗೇಟ್ ತೆಗೆದಾಗ ಅತ್ತಿತ್ತ ನೋಡಿದೆ. ಆದರೆ ಇಂದು ಮಾತ್ರ ಅಷ್ಟು ದೂರದಲ್ಲಿದ್ದ ಆತನನ್ನು ನೋಡಿ ಗಾಬರಿ ಇರಲಿ, ಆನಂದವೇ ಆಯ್ತು. ಬೆಳ್ಳಗೆ ಎತ್ತರಕ್ಕೆ ಚಂದವಾಗಿದ್ದ ಆತನನ್ನು ಕತ್ತೆತ್ತಿ ನೋಡ್ದೆ. ಆತನೂ ನನ್ನನ್ನು ನೋಡಿ ನಕ್ಕ. ನಾನು ಹೊರಡುತ್ತಿದ್ದ ಹಾಗೆಯೇ ಆತನೂ ನನ್ನ ಜೊತೆ ಅಷ್ಟು ದೂರದಲ್ಲಿ ನಡೆಯಲಾರಂಭಿಸಿದ. ಅವನನ್ನೇ ದೃಷ್ಟಿಸಿದೆ. 'ನಾನು ನಿಮಗೆ ಖುಷಿ ಕೊಡೋಕೆ ಬರ್ತಾ ಇದ್ದೇನೆ. ನಿಮ್ಮೊಬ್ಬರ ಜೊತೆಯಲ್ಲಷ್ಟೇ ಅಲ್ಲ, ಎಲ್ಲರೊಂದಿಗೂ ನಾನು ಹೀಗೇನೇ.' ಅಂದ. 'ಎಷ್ಟೊಳ್ಳೆಯ ಸ್ಫುರದ್ರೂಪಿ ಗೆಳೆಯ ಅಲ್ವಾ?' ಅನ್ಕೊಂಡೆ. ನಿಮಗೂ ಗೊತ್ತಲ್ವಾ ಆ ನನ್ನ ಗೆಳೆಯ? ನಿಮಗೂ ಆತ ಗೆಳೆಯನೇ ತಾನೆ? ಗೊತ್ತಾಗ್ಲಿಲ್ವೇ? ಅವನೇ ರೀ, ಚಂದ್ರಣ್ಣ! ಆಕಾಶದಲ್ಲಿ ಬೆಣ್ಣೆಯಂತೆ ತೇಲುವ ನಮ್ಮೆಲ್ಲರ ಚಂದಮಾಮ, ಅಲಿಯಾಸ್ ಚಂದ್ರಣ್ಣ.

***

ಮತ್ತೆ ಬಂದಳು ಗೌರಿ

– ಡಾ.ಸತ್ಯವತಿ ಮೂರ್ತಿ

ಶ್ರಾವಣ ಹೋಯಿತು ಭಾದ್ರಪದ ಬಂತು
ಗೌರಿಯು ಬಂದಳು ಗಣಪತಿ ಬಂದನು

ಅಮ್ಮನ, ಮಗನ ಸ್ವಾಗತದಾಟ
ಹೋಳಿಗೆಯೂಟ ಮೋದಕದಾಟ
ಗಣಪಗೆ ಕಡುಬು ಏಕವಿಂಶತಿ
ಗೌರಿಗೆ ಹೋಳಿಗೆ ಮೊರದ ಜೊತಿ

ಸಂಭ್ರಮ ಸಂಭ್ರಮ ಎಲ್ಲೆಡೆ ಸಂಭ್ರಮ
ಗೌರಿಗಣಪತಿ ಹಬ್ಬದ ಸಂಭ್ರಮ!
ಮಾರುಕಟ್ಟೆಯಲಿ ನಡೆದಿದೆ ಜಾತ್ರೆ
ನೂರಾರು ಗೌರಿ ಗಣಪತಿ ಯಾತ್ರೆ

ಗೌರಿ ಬಂದಳು ಅಪ್ಪನ ಮನೆಗೆ
ಕರೆಯಲು ಬಂದ ಗಣಪನಲ್ಲಿಗೆ
ಮಗನ ನೋಡುವ ಕಾತರದಲ್ಲಿ
ಇಟ್ಟ ತೊಟ್ಟ ಪುಟ್ಟಗೌರಿ ಅಲ್ಲಿ

ಪಟ್ಟೆಯ ಸೀರೆಗೆ ಅಂಚಿನ ಕುಪ್ಪುಸ
ಬೊಟ್ಟುಬೊಟ್ಟಿನ ಸೆರಗು ಸುರಸ
ಹಿಂದಿನ ಕಾಲದ ಸೀರೆಯ ಪಟ್ಟು
ತುಂಬು ನೆರಿಗೆಯ ದಪ್ಪನೆ ಮಟ್ಟು

ಕೊರಳಿಗೆ ಕಟ್ಟಿದೆ ತಾಳಿಯ ಕಟ್ಟು
ಹಣೆಗೆ ಸಿಂಗಾರ ಬಿಂದಿಯ ಬೊಟ್ಟು
ಗೌರಿಯ ಬೊಂಬೆಗೆ ಕಾಲನು ಕಾಣೆ
ಏತಕೆ ಶಿಲ್ಪಿಗೆ ಸಂಕೋಚ? ಕಾಣೆ

ಚಿನ್ನದ ಸರಿಗೆಯ ಹಾರದ ಝೋಕು
ಕಲ್ಯಾಣ ಡಾಬು ಕಿರೀಟ ಬೇಕು
ಅಯ್ಯೋ ಮರೆತೆ ಗೌರಿಯ ಕೊರತೆ!
ಸೊಂಟದ ಕೆಳಗಿನ ಬಿಂಬದ ಶೂನ್ಯತೆ

ಅರೆಬರೆ ಗೌರಿಗೆ ಪಟ್ಟೆಯ ಸೀರೆ
ಪೀತಾಂಬರದ ರವಿಕೆಯ ನೀರೆ
ಫಳಫಳ ಹೊಳೆವ ಮೂಗಿನ ನತ್ತು
ಕಿವಿಯೋ? ಪೂರ್ಣ ಚಿನ್ನದ ಸ್ವತ್ತು

ಮುದ್ದುಸುರಿವ ಮುಖದ ಚೆಲುವೆ
ಕಾಮನಬಿಲ್ಲಿನ ಹುಬ್ಬಿನ ನಡುವೆ
ಸಂಪಗೆ ಎಸಳಿನ ಮೂಗಿನ ಇರವು
ಅಪ್ಟಿಕ್ ಹಚ್ಚಿದ ತುಟಿಯ ಹರವು

ಕಿವಿಯನೆ ಜಗ್ಗಿಪ ಹಿರಿ ಜೊಳತಂಬು
ಭಾರಕೆ ಮೂಗಿನ ಸರಪಣಿ ಇಂಬು
ಗೌರಿಯ ಬಣ್ಣ ಹಳದಿಯೋ ಕೆಂಪೋ
ಫಳಫಳ ಹೊಳೆಯುವ ಬಣ್ಣದ ಕಂಪೋ

ಗೌರ ವರ್ಣದ ರೂಪಸಿಯವಳು
'ಗೌರಿ' ಎಂದಾದಳು ಮುದ್ದಿನ ಮಗಳು
ಬಿಳಿಯ ಗೌರಿಯ ಕಾಣೆನು ನಾನು
ಅರ್ಥವನರಿತು ನಡೆಯದು ಏನೂ

ಚಿತ್ರಿಸುತ್ತಲಿ ಗೌರಿಯ ಆ ಅಂದ
ಮರೆತೇಬಿಟ್ಟೆನು ಆತ್ಮದ ಬಂಧ
ಗೌರಿಯ ಆತ್ಮವ ಧ್ಯಾನಿಸಬೇಕೋ?
ಗೌರಿಯ ಅಂದವ ವರ್ಣಿಸಬೇಕೋ?

ಗೌರಿಯ ಅಂದ ಚೆಂದದ ರೀತಿಯ
ನಾನವಳಿಗೆ ಸಿಂಗರಿಸಿದ ರೀತಿಯ
ಬಂದವರೆಲ್ಲ ಹೊಗಳದರಾಯಿತು
ನನ್ನೀ ಗೌರಿಯ ಕೀರ್ತಿಸಿದರಾಯಿತು

ನನ್ನಯ ಶ್ರಮಕೆ ಪ್ರತಿಫಲ ದೊರಕಿತು
ಗೌರಿಹಬ್ಬದ ಜಾಗಟೆ ಮೊಳಗಿತು
ನನಗೇಕೆ ಗೌರಿಯ ಆತ್ಮದ ಚಿಂತನೆ
ಹೂವು ಹಣ್ಣೂ ಏರಿಸೆ ಸುಮ್ಮನೆ!

ಮಂಗಳಾರತಿ ಬೆಳಗುವೆ ಮರೆಯದೆ
ಹೋಳಿಗೆ ಪ್ರಸಾದ ತಿನ್ನುವೆ ಬಿಡದೆ!
ಮತ್ತೇನು ಬೇಕು ಹಬ್ಬದ ಜೋರಿಗೆ
ಹೊಳೆಯುವ ದೀಪದಿ ಮೆರೆವಾ ತೇರಿಗೆ!

ಕಣ್ಣು ಬಾಯ್ಗಳಲ್ಲಿದ್ದರೆ ಸಾಕು
ಗೌರಿಯು ಮನದಲ್ಲೇತಕೆ ಬೇಕು?
ಮಾಡುವ ಹಬ್ಬವು ಒಂದೊಂದೂ
ಅರ್ಥವ ಮರೆತು ನಡೆದಿವೆ ಇಂದು

ಹೀಗೇ ಬೆಳೆಯುತ ಬಂದಿದೆ ಹೆಡ್ಡೀ
ಎಂದಿತು ನನ್ನಯ ಮನವದು ಮುದಡೀ

***

ಸಣ್ಣ ಕಥೆ

ದ್ವಾದಶಿಯ ಚಕೋಲ್ಯ

– ರಾಧಿಕಾ ವಿ. ಗುಜ್ಜರ್

ಮೆಂತ್ಯೆ ಸೊಪ್ಪು ಬಿಡಿಸುತ್ತಾ ಕುಳಿತಿದ್ದೆ. ಒಂದು ಆಡು ಮೇಯಿಸಲು ಆಗೋವಷ್ಟು ದೊಡ್ಡ ಪೆಂಡಿ ತಂದಿದ್ದ ಇವರ ಮೇಲೆ ಸಿಟ್ಟು ಮಾಡಿಕೊಳ್ಳಲಾಗದೆ, ಆ ಎಲ್ಲ ಸಿಟ್ಟನ್ನು ಸೊಪ್ಪಿಗೆ ತಿರುಗಿಸಿ ಚಿಗುಟಿ ಚಿಗುಟಿ ಬಿಡಿಸುತ್ತಿದ್ದೆ, ಅದೇ ನಮ್ಮ ಹಳೆಯ ಚಲನಚಿತ್ರಗಳ ಉಮಾ ಶಿವಕುಮಾರ್ ತರಹ! ಹಿಂದಿನಿಂದ ಬಂದ ಮಗಳು, 'ಅಮ್ಮ ಬಹಳ ದಿನ ಆಯ್ತು, ಚಕೋಲ್ಯ ಮಾಡಮ್ಮ. ಅಷ್ಟು ಚೆನ್ನಾಗಿದೆ ಸೊಪ್ಪು' ಅನ್ನೋದೆ!? ಸಂತೋಷವಾಗೋಯ್ತು. ಹೌದಲ್ವಾ? ಅದೆಷ್ಟು ದಿನಗಳಾಯ್ತು. ಇನ್ನೇನು ಹತ್ತತ್ರ ಮೂರ್ನಾಲ್ಕು ತಿಂಗಳುಗಳೇ ಆಯ್ತೇನೋಪ್ಪಾ. ಸರಿ, ಮಾಡ್ತೀನಿ ತಗೋ ಎಂದೆ.

ಬೆಳಗ್ಗೆ ತಯಾರಿಸಿದೆ ಕೂಡಾ. ತಟ್ಟೆಗೆ ಬಡಿಸಿಕೊಂಡು ನಿಂಬೆಹಣ್ಣಿನ ರಸ, ತುಪ್ಪ ಕಲೆಸಿ ಸ್ವಾಹಾ ಮಾಡುತ್ತಿದ್ದರೆ.. !

ಓಹೋ,
ವಿವಾಹ ಭೋಜನವಿದು,
ಊಹೂಂ ಹೂಂ ಹೂಂ ಹೂಂ
ಆಹಾಹ್ಹ ಹಹಹ್ಹಾ.

ತಟ್ಟನೆ ಬಾಲ್ಯದ ದಿನಗಳ ಸಿಹಿ ಚಿತ್ರಗಳನ್ನಿಟ್ಟಿದ್ದ ಡಬ್ಬಿಯ ಮುಚ್ಚಳ ತೆರೆಯಿತು. ನಾವು ಮಕ್ಕಳು ತಿನ್ನುವಾಗ, ತಟ್ಟೆಯ ಚಕೋಲ್ಯ ಆರಲು ದಿನಪತ್ರಿಕೆಯಿಂದ ಗಾಳಿ ಹಾಕುತ್ತಾ ನೆರವಾಗುತ್ತಿದ್ದ ಪಾರ್ವತಿಬಾಯಿ ಅಜ್ಜಿ ನೆನಪಾದರು. ಬಾಯಿಯೊಳಗೆ ಚಕೋಲ್ಯ ತುತ್ತು ಹೋಗುತ್ತಿತ್ತಾದರೂ, ಸವಿ ಆಕೆಯ ಮಮತೆಯದೇ ಹರಡುತ್ತಿತ್ತು.

ನನ್ನಜ್ಜಿ ವಿಠ್ಠಲನ ವಾರ್ಕರಿ ಇದ್ದರು. ಕಟ್ಟುನಿಟ್ಟಿನ ಏಕಾದಶಿ ವ್ರತ ಮಾಡುತ್ತಿದ್ದರು. ಹರಿದಿನದ ಮರುದಿನ ದ್ವಾದಶಿಗೆ ಬೇಗನೆ ಅಡುಗೆ ಮಾಡಿ ಮುಗಿಸಿ ನೈವೇದ್ಯ ಮಾಡುವ ರೂಢಿ ಇತ್ತು. ಹಾಗಾಗಿ ಬೇಗ ಚಕೋಲ್ಯ ಮತ್ತು ಮೊಸರನ್ನ ಮಾಡುತ್ತಿದ್ದರು. ಉಪವಾಸ ಮಾಡಿದ ಹೊಟ್ಟೆಗೂ ಹಿತ, ರುಚಿಯೂ ಹಿತ. ಅಜ್ಜಿಯ ಜ್ಞಾನೇಶ್ವರಿ ಪಾರಾಯಣದ ಸ್ನೇಹಿತೆ ಪಾರ್ವತಿಬಾಯಿ ಅಂದು ಬೆಳಗ್ಗೆ ನಮ್ಮ ಮನೆಗೆ ಅತಿಥಿಯಾಗಿ ಊಟಕ್ಕೆ ಬರುತ್ತಿದ್ದರು. ಆಕೆಯದು ಒಂಟಿ ಒನಕೆಯಂತಹ ಬಾಳು. ಅತ್ತ ಚಿಗುರದ, ಇತ್ತ ಒಣಗದ ಜೀವ. ದರ್ಜಿಗಳಾಗಿದ್ದ ಪಾರ್ವತಿಬಾಯಿ ಮತ್ತು ಅವರ ಪತಿ, ಇದ್ದೊಬ್ಬ ಮಗನನ್ನು ಹಳ್ಳಿಯಲ್ಲಿ ಅಜ್ಜಿ-ತಾತರ ಬಳಿ ಬಿಟ್ಟಿದ್ದರು. ಇಡಿಯ ಕುಟುಂಬಕ್ಕೆ ಆತ ಒಬ್ಬನೇ ಮೊಮ್ಮಗನಿದ್ದ. ಉಳಿದ ಎಲ್ಲಾ ಕಾಕಾರಿಗೂ ಬರೀ ಹೆಣ್ಣು ಮಕ್ಕಳಿದ್ದರು. ಅಲ್ಲಿಯೇ ಬೆಳೆದ ಆತ ಅಲ್ಲಿಯೇ ಮದುವೆಯಾಗಿ ನೆಲೆಸಿ, ಕೃಷಿ ಹಾಗೂ ದರ್ಜಿ, ಎರಡೂ ಕಸುಬುಗಳನ್ನು ಕೈಗೊಂಡಿದ್ದ. ಪತಿ ಕಾಲವಾದ ನಂತರ ಪಾರ್ವತಿಬಾಯಿ ಹಳ್ಳಿಗೆ ಹೋದರೂ, ಅಲ್ಲಿ ಓರಗಿತ್ತಿಯರ ಹಾಗೂ ಮಗ-ಸೊಸೆಯ ನಡವಳಿಕೆ ಸರಿ ಬರದೆ, ಮತ್ತೆ ಇಲ್ಲಿಗೇ ವಾಪಸ್ಸು ಬಂದು ದರ್ಜಿ ಕೆಲಸ ಮಾಡುತ್ತಾ ಒಂಟಿಯಾಗಿ ಉಳಿದುಬಿಟ್ಟಿದ್ದರು. ಇದೇ ಕಾರಣದಿಂದಾಗಿ ನನ್ನಜ್ಜಿ ಅವರನ್ನು ಹಚ್ಚಿಕೊಂಡಿದ್ದರು. ದ್ವಾದಶಿಯಂದು ಊಟ ಮಾಡಿ, ಅಜ್ಜಿಯ ಜೊತೆ ಇದ್ದು, ಸಂಜೆ ಕಾಫಿ ಸೇವಿಸಿ ಹೊರಡುತ್ತಿದ್ದರು. ಬರುವಾಗ ಒಂದು ಹಣ್ಣನ್ನೋ, ತಾವು ಮಾಡಿದ ತಿಂಡಿಯನ್ನೋ, ಜೊತೆಗೆ ಅಜ್ಜಿ ಹೊಲಿಯಲು ಕೊಟ್ಟ ಬಟ್ಟೆಯಿದ್ದರೆ ಅದನ್ನೂ ತರುತ್ತಿದ್ದರು. ಆ ದಿನ ಮೊಸರು ಸಹಾ ತರುತ್ತಿದ್ದರು. ಇದ್ದೊಬ್ಬಾಕೆ. ಮೊಸರು ಹುಳಿ ಬರುತ್ತದೆ. ಇಲ್ಲಿ ನಾವೆಲ್ಲ ಊಟಕ್ಕೆ ಬಳಸಬಹುದು ಅಥವಾ ಮಜ್ಜಿಗೆ ಮಾಡಿ ಕುಡಿಯಬಹುದು ಎಂದು.

ಅವರ ಮೂರು ಜನ ಮೊಮ್ಮಕ್ಕಳಲ್ಲಿ, ಕೊನೆಯ ಮೊಮ್ಮಗ ಶಾಲೆಯ ರಜೆಯಲ್ಲಿ ನಾಲ್ಕಾರು ದಿನಗಳು ಬಂದು, ಸ್ವಲ್ಪ ಕಾಳು, ಬೇಳೆ, ಒಂದೆರಡು ಸೀರೆಯೋ ಬಟ್ಟೆಯೋ ಕೊಟ್ಟು ಹೋಗುತ್ತಿದ್ದ. ಬಿಟ್ಟರೆ, ಆಕೆ ಅದೇ ಕಬ್ಬಿಣದ ಬಳೆಯ ಮೇಲೆ ಕುಳಿತ ಒನಕೆ. ನಮ್ಮ ಮನೆಗೆ ಬಂದು ಹೋಗುತ್ತಿದ್ದ ಆಕೆಗೆ ನಾನು ಮತ್ತು ನನ್ನಕ್ಕ ಬಹಳ ಪ್ರೀತಿಯ ಮೊಮ್ಮಕ್ಕಳು. ರಟ್ಟೆ ದಪ್ಪ ಜಡೆಯಿದ್ದ ನನ್ನಕ್ಕನ ಕೂದಲು ಬಿಡಿಸಿ, ಓರಣ ಮಾಡಿ, ಶಿಸ್ತಾಗಿ ನಾಲ್ಕು ಕಾಲಿನ ಜಡೆ ಹಾಕುತ್ತಿದ್ದರು. ಅಜ್ಜಿ ಹೇನು ಕುಕ್ಕು ಎಂದು ನಾವು ಜೋತು ಬಿದ್ದರೆ, ಎರಡೂ ಹೆಬ್ಬೆರಳು ತಲೆಗೆ ಕುಕ್ಕಿ,

ಅಗಾ ಇಂಗ್ಲೀಷು ಬಿಳಿಯ,
ಇಗಾ ಚೀನೀ ಕೆಂಪಿ,
ತಗೋ ಇವಳ ಹಿಂದೆ ಸುರಮ್ಯ ಬೆಳ್ಳಿ ಲಂಬು,
ಬಾರೋ ಬಾ ಬಾ ರಾಜಾ ಹೆಗ್ಗಣ

ಏನು ನಿಧಾನ ನೋಡಿವ್ನು ಎನ್ನುತ್ತಾ ತಲೆಗೆ ಮಾಲೀಶು ಮಾಡುವಂತೆ ಕುಕ್ಕಿ ನಗಿಸುತ್ತಿದ್ದರು. ಬಾಳೆಹಣ್ಣು ಮನೆಯಲ್ಲಿರುತ್ತಿತ್ತು ಮತ್ತು ಅವರು ಬೇಕೆಂದೇ ಬೇರೆ ಹಣ್ಣು ತರುತ್ತಿದ್ದರು. ಬೇಸಿಗೆಯಲ್ಲಿ ಕೆನೆ ಹಾಲು, ಜೇನು, ಕಾಯಿತುರಿ ಸೇರಿಸಿ ರಸಾಯನ ಮಾಡಿ ಕೊಡುತ್ತಿದ್ದರು. ಶಾಲೆ ಶುರುವಾದಾಗ ಎಲ್ಲ ಪುಸ್ತಕಗಳಿಗೆ ಕ್ಯಾಲೆಂಡರಿನ ಹಾಳೆಯ ಹೊದಿಕೆ ಕಟ್ಟುವುದಂತೂ ಬಲೇ ಹುಚ್ಚು. ಮೂತಿ ಚೂಪು ಮಾಡಿ, ಪುಸ್ತಕದ ಅಳತೆಗೆ ಹಾಳೆ ಕತ್ತರಿಸಿ, ಮಡಿಸಿ ತೀಡಿ ನಮ್ಮನ್ನು ಅದರ ಮೇಲೆ ಕೂರಿಸುತ್ತಿದ್ದರು. ಪುಸ್ತಕದ ಇಸ್ತ್ರಿ ಆಗಬೇಡ್ವೇ ! ಬಟ್ಟೆ ಹೊಲಿಯುವಾಗ, ಕೊನೆಗೆ ಉಳಿದ ದಾರದ ಉಂಡೆ ತರುತ್ತಿದ್ದರು. ಹೂವು ಕಟ್ಟಲು ಅಥವಾ ಬೇರೆ ಉಪಯೋಗಗಳಿಗೆಂದು.

ಅಪ್ಪ ಬಂದ ಕೂಡಲೇ ತಲೆಗೆ ಸೆರಗು ಹೊದ್ದು, ಒಂದೆರಡು ಮಾತನಾಡುತ್ತಿದ್ದರು. ಅಮ್ಮ, ಅಜ್ಜಿ ಏನಾದರೂ ಕೇಳಿದರೆ, ಯಜಮಾನ ಗಂಡುಮಗ, ಮಕ್ಕಳು ನೋಡ್ತಾ ಇರ್ತಾರೆ, ನಾವು ಮೊದಲು ನಡೆ-ನುಡಿ ಕಲಿಸಬೇಕು ಅನ್ನುತ್ತಿದ್ದರು. ಅಮ್ಮ ಮತ್ತು ಅಜ್ಜಿಯನ್ನು ಸಹಾ ಅಷ್ಟೇ ಪ್ರೀತಿ, ಆದರ ಹಾಗೂ ಗೌರವದಿಂದ ಕಾಣುತ್ತಿದ್ದರು. ತಮ್ಮ ಮನೆಯ ವಿಷಯ ಹೇಳುತ್ತಿರಲಿಲ್ಲ, ನಮ್ಮ ವಿಷಯ ಕೇಳುತ್ತಿರಲಿಲ್ಲ. ಮಾತೆಲ್ಲವೂ ಅಡಿಗೆ, ಮನೆಯ ಕಡೆಗಿದ್ದ ದರ್ಜಿ ಕೆಲಸ, ಕಾಳು ಬೇಳೆ ಎಣ್ಣೆ ಸೋಪು ಬೆಲೆಗಳ ಕುರಿತು ಅಷ್ಟೇ.

ಕೊನೆಯ ದಿನಗಳಲ್ಲಿ ಬಹಳ ಕೃಷರಾಗಿದ್ದರು. ಒಳಗೊಳಗೇ ಕೊರಗುತ್ತಿದ್ದರು ಎಂದು ಕಾಣುತ್ತದೆ. ಒಂದು ಇಳಿಸಂಜೆ ಅವರ ಪಕ್ಕದ ಮನೆಯವರು ಫೋನ್ ಮಾಡಿ, ಯಾಕೋ ಅಜ್ಜಿ ಬೆಳಗ್ಗೆಯಿಂದ ಕಾಣುತ್ತಿಲ್ಲ. ಹಾಲಿನ ಹುಡುಗ, ಬಟ್ಟೆ ಕೊಡೋರು ಎಲ್ಲ ಬಾಗಿಲು ಬಡಿದು ವಾಪಸ್ ಹೋದ್ರು ಎಂದರು. ತಕ್ಷಣ ಅಪ್ಪನ ಜೊತೆ ಅಜ್ಜಿ ಹೊರಟು ಅವರ ಮನೆ ತಲುಪಿ, ಬಾಗಿಲು ತೆರೆಸುವ ಕ್ರಮ ಕೈಗೊಂಡು, ಬೀದಿ ಕೊನೆಯಲ್ಲಿದ್ದ ಶಾಪಿನ ವೈದ್ಯರನ್ನು ಕರೆತರಲಾಗಿ ಜೀವ ಹೋಗಿ ಅರ್ಧ ದಿನವೇ ಆಗಿದೆ ಎಂದರು. ಮಲಗಿದಲ್ಲಿಯೇ ಚಿರನಿದ್ರೆಗೆ ಹೊರಳಿದ್ದರು. ವಿಠ್ಠಲನನ್ನು ಸೇರಿದ್ದರು. ಅಂದು ನನ್ನಜ್ಜಿ ಮತ್ತು ನಾನು ಬಿಟ್ಟರೆ ಯಾರೂ ಅತ್ತಿದ್ದು ಕಾಣಲಿಲ್ಲ. ಮರುದಿನ ಬೆಳಗ್ಗೆ ಬಂದ ಅವರ ಮನೆಯ ಜನ, ತೀರಾ ಚಿತ್ರದಂತೆ ಮುಖ ಹೊತ್ತವರು, ದೇಹವನ್ನು ಹಳ್ಳಿಗೆ ತೆಗೆದುಕೊಂಡು ಹೋದರು. ಅಪ್ಪ ಬೇಸರ ಮಾಡಿಕೊಂಡಿದ್ದರು. ಅಲ್ಲಾ, ಒಂದು ಒಳ್ಳೆಯ ಮಾತು! ಹೋಗ್ಲಿ ಒಂದು ಥ್ಯಾಂಕ್ಸ್, ಏನು ಜನವೋ! ಎನ್ನುತ್ತಿದ್ದರು. ಅವರ ಪೂಜೆ ಹಾಗೂ ಅಂತಿಮ ಕ್ರಿಯೆಗಳು ಹೇಗೆ ಜರುಗಿದವೋ ಎಂದು ಹಲುಬುತ್ತಿದ್ದರು.

ಇದೇ ನೋಡಿ ಸೋಜಿಗ. ದೇಹದ ಪಾಲು ಇರುವವರಿಗೆ ಮಮತೆ ಇಲ್ಲ. ಮಮತೆ ಇರುವವರ ಪಾಲಿಗೆ..?

ಇದೆ, ಇದೆ.   ಅವೇ ಸುಂದರ ನೆನಪುಗಳು ಇವೆ.

ನನ್ನ ಚಕೋಲ್ಯ ತಣಿದಿದೆ.

ಅಜ್ಜಿಯ ನೆನಪಿನಲ್ಲಿ !

ಆಹಾ, ತಿಂದು ಮುಗಿಸುತ್ತೇನೆ ಆಯ್ತಾ ?

ನೀವು ಮಾಡಿಕೊಂಡು ತಿನ್ನಿ ಒಮ್ಮೆ.

**

ಪೂರಕ ಮಾಹಿತಿ: ಚಕೋಲ್ಯ ಪಾಕ ವಿಧಾನ

ಹದವಾಗಿ ತೊಗರಿ ಬೇಳೆ ಬೇಯಿಸಿ, ಇಂಗು, ಸಾಸಿವೆ, ಜೀರಿಗೆ, ಕರಿಬೇವಿನ ಎಲೆ, ಮೆಂತ್ಯ ಚಿಗುರು ಹಾಕಿ ಘಮಗುಟ್ಟೋ ಒಗ್ಗರಣೆ ಮಾಡಬೇಕು. ಮೇಲೆ ಕೆಂಪು ಮೆಣಸಿನ ಪುಡಿ, ಸ್ವಲ್ಪ ಹುಳಿ, ಅರಿಸಿನ, ನೆಲ್ಲಿಕಾಯಿಯಷ್ಟು ಬೆಲ್ಲ, ಉಪ್ಪು? ರೀ ಉಪ್ಪು, ಹೂಂ ಹಾಕಿ. ಈ ಬೇಳೆಯ ಸಾರು ಅಥವಾ ತೊವ್ವೆಯನ್ನು ಸಣ್ಣ ಉರಿಯಲ್ಲಿ ಕುದಿಯಲು ಬಿಡಬೇಕು. ಇನ್ನೊಂದು ಬದಿಗೆ, ಗೋಧಿ ಹಿಟ್ಟು ಕಲಸಿ, ಉಂಡೆಗಳಾಗಿ ಮಾಡಿ ಚಪಾತಿಯಂತೆ ಲಟ್ಟಿಸಿ, ಶಂಕರಪಾಳೆ ಮಾದರಿಯ ಚೌಕಗಳನ್ನು ಕತ್ತರಿಸಿಟ್ಟುಕೊಂಡು ಈ ಕುದಿಯುವ ಬೇಳೆ ಎಸರಿಗೆ ಒಂದೊಂದೇ ಬಿಡುತ್ತಾ ಬರಬೇಕು. ನಾಲ್ಕು ಜನರ ಅಳತೆಗೆ ಬೇಳೆ ಹಾಕಿದರೆ, ಸುಮಾರು 4-5 ಚಪಾತಿ ಹಿಟ್ಟು ಬೇಕು. ಸೌಟು ಆಡಿಸಲು ಮರೆಯಬಾರದು. ಬಹಳ ಸೋಂಬೇರಿ ಈ ಎಲೆಗಳು. ತಳ ಕಚ್ಚುತ್ತವೆ. ಅರ್ಧ ಸಾರು, ಅರ್ಧ ಎಲೆಗಳು ತುಂಬುತ್ತಿದ್ದಂತೆಯೇ ಉರಿ ಸಣ್ಣ ಮಾಡಿ ಮುಚ್ಚಳ ಮುಚ್ಚಿ 2-3 ನಿಮಿಷಗಳು ಬೇಯಿಸಿ ಮತ್ತೆ ಸೌಟು ಆಡಿಸಿ ಎಲೆಗಳು ಮೆತ್ತಗೆ ಬೆಂದಿರುವುದನ್ನು ದೃಢಪಡಿಸಿಕೊಂಡು ಉರಿ ಆರಿಸಬೇಕು.

***

ತುಣುಕುಗಳು

– ವೆಂಕಟೇಶ ಕಾಮತ್

ನನ್ನ ಬರಹದ ಮೂರು ಹಳೆಯ ನೆನಪುಗಳುನ್ನು ತುಣುಕುಗಳು ಎಂದು ಪ್ರಸ್ತುತಿಪಡಿಸುತ್ತಿದ್ದೇನೆ

ತುಣುಕು 1

ನಾ ಬರೆಯುವುದು....

'ತನ್ನ ಮರಿ ಹೊನ್ನ ಮರಿ, ಪರರ ಮರಿ ಕಾಗೆ ಮರಿ' ಎಂಬ ಗಾದೆಯಂತೆ ನಮ್ಮಲ್ಲಿ ಹುಟ್ಟಿದ ಈ ನಮ್ಮ ಕತೆ, ಕವಿತೆಗಳು ನಾವೇ ಮೆಚ್ಚದ್ದಿದ್ದರೆ ಹೇಗೆ? ನಾವು ಬೆಳೆಯುತ್ತಿರುವಾಗ ನಮ್ಮ ತಂದೆ–ತಾಯಿ, ತಂದೆಗೆ ಅಷ್ಟೊಂದು ಪುರಸೊತ್ತಿರಲಿಲ್ಲ, ತಾಯಿ ಕೆಲವೊಮ್ಮೆ ಪರರ ಮಕ್ಕಳನ್ನು ಅತಿರೇಕ ಹೊಗಳದಾಗ ಮತ್ತು ನಮ್ಮನ್ನು ತೆಗಳದಾಗ ನಾವು ಹೇಳ ಕೊಳ್ಳುತ್ತಿದ್ದೆವು.. ನಮ್ಮನ್ನು ಇವರೂ ತೆಗಳುವುದು ಅವರೂ ತೆಗಳುವುದು, ಅವರ ಮಕ್ಕಳನ್ನು ಬುದ್ಧಿವಂತರೆಂದೂ ಎಲ್ಲರೂ ಹೊಗಳೋದು. ಆ ಕಾಲದಲ್ಲೂ ಎನೂ ಪ್ರಯೋಜನವಿರದ, ತರಗತಿಯಲ್ಲಿ ಓದಿನಲ್ಲಿ ನಮಗಿಂತಲೂ ಬಹಳ ಹಿಂದಿರುತ್ತಿದ್ದ ಮಕ್ಕಳನ್ನು ಬಹಳ ಪ್ರೋತ್ಸಾಹಿಸಿ ಸಂಗೀತ ಮತ್ತಿತರ ವಿಷಯಗಳಲ್ಲಿ ಮುಂದಿದ್ದಾರೆಂದು ಹೊಗಳುವರು ಬಹಳ ಜನರಿದ್ದರು.

ನನ್ನಲ್ಲಿ ಅಲ್ಪ ಸ್ವಲ್ಪ ಬುದ್ಧಿವಂತಿಕೆ ಇದೆ ಎಂದು ಗೊತ್ತಾದದ್ದು 24 ವರುಷವಾಗಿ ನನಗೆ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ ದೊರೆತಾಗಲೇ!

ಆಗಲೂ ಬಹಳ ಮಂದಿ, ಅದು ಬೇರೆಯವರ ರಿಸಲ್ಟ್ ಇರಬಹುದು, ಎರಡೆರಡು ಬಾರಿ ಸರಿ ಇದು ನಿನ್ನದೇಯಾ ಅಂದವರು ಇದ್ದರು. ಪಾಸ್ ಆದವರು ಫೇಲ್ ಆಗಲು ರಿವ್ಯಾಲ್ಯುಯೇಷನ್ ಎಂಬುದು ಇರಲ್ಲಿಲ್ಲಾ. ಇದ್ದಿದ್ದರೆ ಯಾರೋ ಹೋಗಿ ನನ್ನ ಹೆಸರಲ್ಲಿ ಹಾಕಿ ಬರುತ್ತಿದ್ದರು!

ಒಮ್ಮೆ ಬಂಗಾಳದ ಸಾಹಿತಿ ಸಂಪಾದಕರೊಬ್ಬರು ದುರದೃಷ್ಟವಷಾತ್ ನೀರಿನಲ್ಲಿ ಮುಳುಗುತ್ತಿರುವಾಗ ಒಬ್ಬ ಧೀರ ಯುವಕ ಪ್ರಾಣದ ಆಸೆ ತೊರೆದು ಅವರನ್ನು ರಕ್ಷಿಸಿ ದಡ ಮುಟ್ಟಿಸಿದನಂತೆ. ಆತ ಯಾರೆಂದು ಸಾಹಿತಿ ವಿಚಾರಿಸಿದಾಗ ಆತ ತಾನೊಬ್ಬ ಉದಯೋನ್ಮುಖ ಕವಿ ಸಾಹಿತಿ ಹಾಗೂ ಈಗ ಸಧ್ಯಕ್ಕೆ ನಿರುದ್ಯೋಗಿ ಎಂದು ಹೇಳದಾಗ, ತನ್ನ ಪ್ರಾಣ ಉಳಿಸಿದ ಯುವಕನಿಗೆ ತಾನು ಸಂಪಾದಕನಾಗಿರುವ ಪತ್ರಿಕೆಯ ಕಾರ್ಯಾಲಯಕ್ಕೆ ತನ್ನ ಕೆಲವು ಅಪ್ರಕಟಿತ ಕೃತಿಗಳೊಂದಿಗೆ ಬರಲು ಹೇಳ, ಅವುಗಳನ್ನು ಪ್ರಕಟಿಸಲು ತಾನೊಮ್ಮೆ ಪ್ರಯತ್ನಿಸುವುದಾಗಿ ಆಶ್ವಾಸನೆ ಕೊಟ್ಟು ಬೀಳ್ಕೊಡುತ್ತಾನೆ. ಹಲವು ದಿನಗಳ ನಂತರ ಆ ಯುವಕ ತನ್ನ ಹೆಗಲು ಚೀಲದೊಂದಿಗೆ ಸಂಪಾದಕ ಮಹಾಶಯನನ್ನು ಕಾಣಲು ಬಂದಾಗ ಈತನ ಆನಂದ ಹೇಳತೀರದು.. ಚಾ.. ಸಮೋಸ.. ರಸಗುಲ್ಲಾ.. ಆದ ಬಳಿಕ ಯುವಕ ತನ್ನ ಚೀಲದಿಂದ ಅಂಜುತ್ತಂಜುತ್ತಾ ತನ್ನ ಜೋಡಿಸಿದ ಕಾಗದದ ಕಡತವನ್ನು ಹೊರತೆಗೆದು ಸಂಪಾದಕನ ಮುಂದಿಟ್ಟ.

ಸಂಪಾದಕ ಪುಟಗಳನ್ನು ತಿರುವಿದ... ತಿರುವಿದ... ತಿರುವಿದ. ಕಣ್ಣುಗಳು...ಹನಿ ತುಂಬಿದವು.

ಯುವಕ ನೋಡಿದ... ನೋಡಿದ... ನಾನು ಇಷ್ಟೊಂದು ಭಾವುಕರಾಗುವಂತೆ ಬರೆದೇನೇ?

'ಸರ್ .. ಸರ್... ಹೇಳ... ಏನಾಯಿತು? ... ಹೇಳ... '

ನಡಗುವ ಧ್ವನಿಯಲ್ಲಿ... ಹೊರಬಂದವು ಶಬ್ದಗಳು... ಒಂದೊಂದೇ....

'ನೀನು... ನೀನು ...ನೀನು.. ನನ್ನನ್ನು ಮತ್ತೆ ಆ ನೀರಿನಲ್ಲಿ... ಮುಳುಗಿಸಿಬಿಡು...ದಯವಿಟ್ಟು... ಪ್ಲೀಸ್. '

ತುಣುಕು 2

ಶ್ರೀದೇವಿ ಒಂದು ನೆನಪು

ಚಲನಚಿತ್ರ ತಾರೆ ಶ್ರೀದೇವಿ (13.08.1963-24.02.2018) ತೀರಿಕೊಂಡಾಗ ನನಗೆ ಬಹಳ ಬೇಸರವಾಯಿತು. ನಾನು ಮೊದಮೊದಲ ಅವಳ ತಮಿಳು ಚಿತ್ರಗಳಿಂದ ಪ್ರಾರಂಭಿಸಿ, ಅವಳ ಕೆಲವು ಏನೂ ಪ್ರಯೋಜನವಿಲ್ಲದ ಬರೀ ಅವಳೊಬ್ಬಳ ಇರುವಿಕೆಗಾಗಿ ಅವಳ ವಿವಿಧ ಪೋಷಾಕು, ಭಂಗಿ ಹಾವ-ಭಾವ ನೃತ್ಯ ನೋಡಲು... ಒಮ್ಮೆಯಾದರೂ... ಮತ್ತೆ ಕೆಲವನ್ನು ಮತ್ತೆ ಮತ್ತೆ ನೋಡಲು ಹೋದದ್ದು ಇದೆ. ಅವಳ ಚಾಲಬಾಜ಼ನಲ್ಲಿನ ದ್ವಿಪಾತ್ರಾಭಿನಯ ಬಹಳ ಹಾಸ್ಯಮಯ ಅಣಕುಗಳೊಂದಿಗೆ ಹಾಗೂ ಇನ್ನೊಂದು ಪಾತ್ರದಲ್ಲಿ ಗಂಭೀರ ದುಃಖ ಅತ್ಯಂತ ಸುಂದರವಾಗಿ ಮೂಡಿಬಂದಿತ್ತು.

ಹಿಮ್ಮತವಾಲಾ, ತೋಫಾ, ಚಾಂದನಿ, ಲಮ್ಹೆ, ಆಖರಿ ರಾಸ್ತಾ, ಸದ್ಮಾ (ಮೂಂಡ್ರಾಮಪಿರ್ಯೆ), ಖುದಾ ಗವಾಹ, ಸೋಲ್ವಾ ಸಾಲ (16 ವಯದಿನಿಲೆ), ನಗೀನಾ ಒಳಗೊಂಡಂತೆ ಸುಮಾರು ಮುನ್ನೂರು ಚಿತ್ರಗಳಲ್ಲಿ ಆಕೆ ಅಭಿನಯಿಸಿದ್ದರು. ಶ್ರೀದೇವಿ ಒಂದು ದಶಕಕ್ಕೂ ಹೆಚ್ಚಿನ ಸಮಯ ನಂ. 1 ಸ್ಥಾನದಲ್ಲಿದ್ದರು. ಮದುವೆ, ಗಂಡ, ಮಕ್ಕಳು ಇದರಿಂದ ಕೆಲವು ವರುಷ ಹಿಂದೆ ಸರಿದರೂ ಮರಳ ಬಂದು, 'ಇಂಗ್ಲೀಷ ವಿಂಗ್ಲೀಷ' 'ಮೊಮ' ಮತ್ತೆ ಕೆಲವು ಚಿತ್ರಗಳಲ್ಲಿ ಅಭಿನಯಿಸಿದರು. 24.02.2018ರಂದು ದುಬೈಯಲ್ಲಿ ಅನೀರಿಕ್ಷಿತವಾಗಿ ನಿಧನಹೊಂದಿ ಅಪಾರ ಅಭಿಮಾನಿ ಬಳಗವನ್ನು ದುಃಖದ ಮಡುವಿನಲ್ಲಿ ಮುಳುಗಿಸಿ ಪರಲೋಕ ಸೇರಿದರು.

ಆಗ ಇಲ್ಲಿ ಉಡುಪಿಯಲ್ಲಿ ನನ್ನ ಆಪ್ತ ಗೆಳೆಯ ವಿವೇಕನ ಹೆಂಡತಿ ವಿಜಯಳ ಅಕ್ಕನ, ವಯ್ಯಸ್ಸಾದ ಅತ್ತೆಯ ಹೆಸರು ಶ್ರೀದೇವಿ. ಆ ಸಮಯದಲ್ಲಿ ನಾನು ಮಾರ್ಚ್ 25, 2018 ಕ್ಕೆ ಮುಖಪುಸ್ತಕದಲ್ಲಿ ಪ್ರಕಟಿಸಿದ 'ಶ್ರೀದೇವಿ ಒಂದು ನೆನಪು' ಎಂಬ ಬರಹವನ್ನು ಇಂದು ಇಲ್ಲಿ ಪ್ರಕಟಿಸುತ್ತಿದ್ದೇನೆ. ಈ ಮೂರು ವರುಷಗಳಲ್ಲಿ ಬಹಳ ಬದಲಾಗಿದೆ. 90ರ ಆ ಶ್ರೀದೇವಿ ತೀರಿ 2 ವರುಷ ಆಗಿದೆ. ನನ್ನ ಈ ಬರಹ ಓದಿ ಮೆಚ್ಚಿ ಅವರ ಸೊಸೆಗೆ ತಲುಪಿಸಿದ ಗೆಳೆಯ ನಮಗೆ ಸಾವಿನ ಸುದ್ದಿ ಮುಟ್ಟಿಸಿದರು.

ಆಕೆ ತನ್ನ ವಯ್ಯಸ್ಸಾದ ಅತ್ತೆಯವರನ್ನು ಒಬ್ಬ ತಾಯಿಯಂತೆ, ಅಕ್ಕನಂತೆ, ಗೆಳತಿಯಂತೆ, ಒಂದು ಮಗುವಿನಂತೆ ಮಾದರಿ ರೀತಿಯಲ್ಲಿ ನೋಡಿಕೊಂರಡರು. ಇಂತಹವರು ಬಹಳ ಬಹಳ ಜನ ಹುಟ್ಟಲಿ.

"ಶ್ರೀದೇವಿ ಒಂದು ನೆನಪು" - ಒಮ್ಮೊಮ್ಮೆ ಆಕೆ ಯೋಚಿಸುತ್ತಿದ್ದಳು. ಈ ಶ್ರೀದೇವಿ ಎಂಬ ಹೆಸರು ಅಷ್ಟು ಹಳೆಯದೇ. ಹೌದು.. ತಿರುಮಲ ವೆಂಕಟೇಶನ ಇಬ್ಬರು ಹೆಂಡತಿಯರ ಹೆಸರು ಶ್ರೀದೇವಿ ಮತ್ತು ಭೂದೇವಿ ಎಂದು. ಶ್ರೀದೇವಿ

ಐಶ್ವರ್ಯ, ಹಣ, ಸಂಪತ್ತಿನ ದೇವತೆಯಾದರೆ ಭೂದೇವಿ ಭೂಮಿ, ನೆಲ, ಜಲ, ಭೂಮಂಡಲದ ದೇವತೆ. ಕಿರುಕುಳ ಕೊಟ್ಟು ಕಿತಾಪತಿಮಾಡುವ ಹೆಂಗಸು ಅಥವಾ ಹುಡುಗಿಯರನ್ನು ಮೂದೇವಿ ಎಂದು ಬೈಯುವುದೂ ಉಂಟು.

ಆಕೆಗೆ ಮೊದಮೊದಲಲ್ಲಿ ತನ್ನ ಅತ್ತೆಯ ಬಗ್ಗೆ ಅಪಾರ ಹೆಮ್ಮೆ, ಅಭಿಮಾನ. ತನ್ನ ಅತ್ತೆ ಆ ಕಾಲದ ಶ್ರೀದೇವಿ ಯಾರಿಗಿಂತಲೂ ಕಡಿಮೆ ಇಲ್ಲಾ ಎಂದು ಹೊಗಳುತ್ತಿದ್ದಳು. ಕಾಲ ಕಳೆಯುತ್ತಾ. ಕಳೆಯುತ್ತಾ ಈ ಹೆಮ್ಮೆ ಕಡಿಮೆಯಾದರೂ ತನ್ನತನ ಹಾಗೂ ಸ್ವಂತಿಕೆ ಕಡಿಮೆಯಾಗಿರಲಿಲ್ಲ. ತಾನು ವರ್ಷವಿಡೀ ಸೇವೆ ಮಾಡಿ, ಮನ ನೊಂದಾಗ ಒಂದೆರಡು ಮಾತು ತನ್ನ ಪ್ರಾರಬ್ಧಕರ್ಮವೆಂದು ಹಕ್ಕಿನಿಂದ ಆಡಿದ್ದರೂ, ಬೇರೆ ಯಾರಾದರೂ ಕಿಂಚಿತ್ ಅವರ ಬಗ್ಗೆ ಆಡಿದ್ದರೆ ಅವಳಿಗೆ ಸಹಿಸಲಾಗುತ್ತಿರಲಿಲ್ಲ. ನಾನೇನು ಅವರಲ್ಲಿಗೆ ಕರೆದೊಯ್ದು ಬಿಟ್ಟಿದ್ದೇನೆಯೇ, ಯಾವ ಧೈರ್ಯದಲ್ಲಿ ನನ್ನ ಅತ್ತೆಯ ಬಗ್ಗೆ ಮಾತನಾಡುತ್ತಾರೆ ಎಂದು ಘರ್ಜಿಸುವಳು. ಅತ್ತೆಯ ಬಗ್ಗೆ ಅವಳಿಗೆ ಎಲ್ಲಿಲ್ಲದ ಕಾಳಜಿ, ಅಕ್ಕರೆ. ಆದರೆ ತನಗೂ ವಯಸ್ಸಾಗುತ್ತಿದೆ ಏನು ಮಾಡಲೂ ಕೂಡುತ್ತಿಲ್ಲಾ.. ಎಂದು ಬೇಸರ.

ಇತ್ತೀಚಿಗೆ ಆಕೆಗೆ ವೈರಾಗ್ಯ ಬಂದಿದೆ. ಯಾವುದೇ ವಿಷಯದ ಬಗ್ಗೆ ಬೇಸರ ಅಸೂಯೆಗಳೆಂಬುದಿಲ್ಲಾ... ಯಾರು ಬೇಕಾದರೂ ಒಡವೆ ವಜ್ರ ಕೊಂಡುಕೊಂಡರೆಂದರೂ, ವಿದೇಶ ಯಾತ್ರೆಗೆ ಹೋಗಿಬಂದರೆಂದರೂ, ಮದುವೆ ಸಂಭ್ರಮದ ಬಗ್ಗೆ ಹೇಳಕೊಂಡರೂ ಆಕೆಗೆ ಕಿಂಚಿತ್ತೂ ಈರ್ಷ್ಯೆ ಅಥವಾ ಬೇಸರ ಆಗುವುದೇ ಇಲ್ಲ. .

ಹಾಗೆಂದು.. ತನ್ನದೇ ವಯಸ್ಸಿನ ಯಾರದಾದರೂ ಗುರುತಿರುವವರ ಅತ್ತೆ ತೀರಿಹೋದರೆಂದರೆ ಅವಳಿಗೆ ಆಗುತ್ತಿದ್ದ ಸಂಕಟ, ಬೇಸರ ಅಷ್ಟಿಷ್ಟಲ್ಲ. ನನಗೆ ಆ ಭಾಗ್ಯವೆಲ್ಲಿ ಎಂದು ಸದಾ ತನ್ನ ಬಗ್ಗೆ ಕನಿಕರಪಟ್ಟು ಮರುಗುತ್ತಿದ್ದಳು. ಆದರೂ ಈ ವಿಷಯ ಅತ್ತೆಗೆ ತಿಳಿದರೆ ಎಷ್ಟು ಬೇಸರಪಡುತ್ತಾರೆ ಅಂತ ಅನಿಸುವುದು ಇತ್ತು.. ಅವರು ಫೇಸ್ಬುಕ್ ನೋಡುವುದಿಲ್ಲ ಎಂಬುದೇ ಒಂದು ಸಂತೋಷದ ವಿಷಯ. ಅತ್ತೆಯವರ ದೃಷ್ಟಿ ಧೀರ್ಘ ವಯಸ್ಸಿನಿಂದ ಮಂಕಾಗಿದೆ. ಯಾವುದೇ ಕೆಲಸ ಸಹಾಯವಿಲ್ಲದೆ ಆಗದು. ಈ ಬಗ್ಗೆ ಈಕೆಗೆ ಒಂದಿನಿತೂ ಬೇಸರವಿಲ್ಲ.. ಅತ್ತೆ ಆಕೆಯ ಗೆಳತೀ.. ಜೀವನದ ಮಹತ್ವದ ಬಹಳ ಪಾಠಗಳನ್ನು ಹೇಳಕೊಟ್ಟ ಅಮ್ಮನಿಗಿಂತಲೂ ಹೆಚ್ಚಿನ ಗುರು. ತನ್ನ ಪ್ರೀತಿಯ ಪತಿಯ ತಾಯಿ ಆದರೂ ಈ ಬಹು ಜನಪ್ರಿಯ ತಾರೆ ಶ್ರೀದೇವಿ ಸತ್ತಾಗ.. ಒಮ್ಮೆ.., ಸಾವಿಗಾಗಿ ಹಂಬಲಿಸುತ್ತಿರುವ ಈ ನನ್ನ ಅತ್ತೆ ಶ್ರೀದೇವಿಯವರನ್ನು ಕರೆದುಕೊಂಡು ಹೋಗಬಾರದಿತ್ತೇ..ಎಂದು ಮನಸಿನಲ್ಲೇ ಒಂದು ನಗೆಹನಿಯ ಮುಗುಳ್ನಗೆ ಮೂಡಿತು.

ಹಾಗೆಯೇ, ಇನ್ನೊಬ್ಬ ವಯಸ್ಸಾದವರ ಬಗ್ಗೆ ಹಾಗೆಲ್ಲ ಅಂದುಕೊಳ್ಳುವುದು ತಪ್ಪು ಎಂದುಕೊಂಡು, ಶಾಂತಂ ಪಾಪಂ.. ಶಾಂತಂ ಪಾಪಂ ಎಂದು ಮನಸಲ್ಲೇ ತನ್ನ ಕೆನ್ನೆಗಳಿಗೆ ಹೊಡೆದುಕೊಂಡು ಅತ್ತೆಯವರಿಗೆ ಕುಡಿಯಲು ನೀರು ಬೇಕೇನೋ ಎಂದು ಎದ್ದು ನಮ್ಮ ೯೦ರ ಬಳಿಯ ಶ್ರೀದೇವಿಯನ್ನು ವಿಚಾರಿಸಲು ವೀರವನಿತೆ ಓಬವ್ವ ಒನಕೆ.. ಕೋಲು.. ಹಿಡಿಯದೇ ಎತ್ತರಕ್ಕೆ ಎದ್ದುನಿಂತು ಹೊರಟಳು.

ಈಕೆ ಒಬ್ಬ ಮಹಾನ್ ವ್ಯಕ್ತಿ..
(ಇದೊಂದು ಸತ್ಯಕಥೆ)

ತುಣುಕು 3

ಇದು ಹೀಗೇಕೆ ಆಯಿತು?

ಇದು ಪ್ರಾರಂಭವಾದದ್ದು ಹೀಗೆ....

2013ರಿಂದ 2016ರಲ್ಲಿ ನನ್ನ ನಿವೃತ್ತಿಯವರೆಗೆ ನಾನು ಸರ್ಕಲ್ ಆಡಿಟ್‌ನ ಪರೀಶಿಲನಾ ಅಧಿಕಾರಿಯಾಗಿ ರಾಜ್ಯದ ನಾನು ಕಂಡರಿಯದ, ಕೇಳರಿಯದ ಕೆಲವೊಂದು ಊರುಗಳನ್ನು ಸುತ್ತುತ್ತಿದ್ದಾಗ ನನಗೆ ಸಮಯ ಕಳೆಯಲು ಫೇಸ್ ಬುಕ್ ಮತ್ತು ಇನ್ನೊಂದು ವರ್ಡ್ಸ್ ವಿದ್ ಫ್ರೆಂಡ್ಸ್ ಬಹಳ ಸಹಾಯ ಮಾಡಿದವು.. ಇದರೊಂದಿಗೆ ಯು ಟ್ಯೂಬ್, ವಾಟ್ಸಾಪ್, ಟ್ವಿಟರಗಳು ಇದ್ದವು. ಆ ಸಮಯದಲ್ಲಿ ನನಗೆ ಬಹಳೊಂದು ಸಿನಿಮಾ ತಾರೆಯರ, ನಿರ್ಮಾಪಕರ, ತಂತ್ರವರ್ಗದವರ, ಸಾಹಿತಿಗಳ ಪರಿಚಯವಾಗಿ ಮುಂದೆ ಅದು ಸ್ನೇಹದಲ್ಲಿ ಮುಂದುವರಿದು ಇಂದಿಗೂ ನಿರಂತರವಾಗಿ ನಡೆಯುತ್ತಿದೆ. ನಾನು ಅವರ ಆ ಚಿತ್ರದ ಪಾತ್ರವನ್ನು ಅಭಿನಂದಿಸಿ ನಾಲ್ಕು ಪ್ರೋತ್ಸಾಹದ ಮಾತುಗಳನ್ನು ಆಡುತ್ತಿದ್ದೆ..

ಸಂಚಾರಿ ವಿಜಯ್ ಒಮ್ಮೆ ಚಿಕ್ಕಮಗಳೂರಿನಲ್ಲಿ ಶೂಟಿಂಗ್ ನಡೆಯುತ್ತಿರುವಾಗ ನಾನು ಅವರಿಗೆ ಏನೇ ಅಗತ್ಯವಿದ್ದಲ್ಲಿ ನನ್ನ ದೊಡ್ಡಮ್ಮನ ಮಗನನ್ನು ಕರೆಮಾಡಲು ಹೇಳಿದ್ದೆ. ಮುಂದೆ ಅವರ "ನಾತಿಚರಾಮಿ" ಹಾಗೂ "ಹರಿವು" ಚಿತ್ರಗಳಲ್ಲಿನ ಅಭಿನಯವನ್ನು ಶ್ಲಾಘಿಸಿದ್ದೆ. ಎಂದಾದರೊಂದು ದಿನ ನಾನೊಂದು ನನ್ನದೇ ಸಿನಿಮಾ ಮಾಡಿದಾಗ ಅವರನ್ನು ಖಂಡಿತ ಅದರಲ್ಲಿ ಎಲ್ಲಾ ವಿಭಾಗಗಳಲ್ಲಿ ತೊಡಗಿಸಿಕೊಳ್ಳಲು ಆಹ್ವಾನಿಸುವೆ ಎಂದ್ದಿದ್ದೆ. ಅವರೂ ಒಪ್ಪಿ ನನಗೆ ಸಿಗಲು ಒಪ್ಪಿದ್ದರು. ಅವಕಾಶ ಕೂಡಿಬರಲಿಲ್ಲ. ಈ ನಡುವೆ ಬಹಳ ಸಿನಿಮಾ ಜನರ ಪರಚಯವಾಯಿತು. 17 ಜುಲೈ 2020 ಅವರ ಜನುಮ ದಿನಕ್ಕೆ ಶುಭಾಶಯ ಕಳಿಸಿದ್ದೆ. ಅವರೂ ಕೂಡಲೇ ಧನ್ಯವಾದ ಸಲ್ಲಿಸಿದ್ದರು.

ಇದು ಇಷ್ಟೇ ಎಂದಾದರೆ ನಾನು ಈ ತುಣಕನ್ನು ಖಂಡಿತವಾಗಿ ಬರೆಯುತ್ತಿರಲಿಲ್ಲ. ಆದರೆ... ಮೊನ್ನೆ ಶನಿವಾರ 12 ಜೂನ್ 2021, ಮಧ್ಯಾಹ್ನ 11.58ಕ್ಕೆ ಸಂಚಾರಿ ವಿಜಯ ತಾನು ಬರೆದ "ಮೆಜೆಸ್ಟಿಕ್ ಎಂಬ ಮಾಯಾಜಾಲದಲ್ಲೊಮ್ಮೆ ನಾನು!!!" ಎಂಬ ಲೇಖನವನ್ನು ಕಳುಹಿಸಿದುದಲ್ಲದೆ, ತಾನು ಈ ವಿಷಯದಲ್ಲಿ (ಲೇಖನ ಬರೆಯುವ) ಅಮೆಚ್ಯೂರ್ ಎಂದು ಹೇಳಿಕೊಂಡಿದ್ದರು. ನಾನು ಅವರ ಲೇಖನ ಮೇಲ್ನೋಲೆ ಓದಿ (ಈಗ ಎರಡು ಬಾರಿ ಓದಿದ್ದೇನೆ), ಕೂಡಲೇ ಸಸಕಸ ವೇದಿಕೆಯಲ್ಲಿ ಪ್ರಕಟವಾದ ನಮ್ಮ ಕೆ.ಎನ್.ಮಹಾಬಲರ ಕತೆ ವೃದ್ಧಾರಾಧನೆ- ಭಾಗ 1, ಸಂಚಾರಿಯವರಿಗೆ ಕಳುಹಿಸಿದೆ. ಆಗ ಸಮಯ 12.03. ಅವರು ನನ್ನ ಹಾಗೇಯೇ ಕನ್ನಡವನ್ನು ಇಂಗ್ಲೀಷಿನಲ್ಲಿ **"Khandita"** (ಖಂಡಿತ) ಎಂದು ಉತ್ತರಿಸಿದರು. ಆಗ ಸಮಯ 12.05.

ಮರುದಿನ ರವಿವಾರ ಸಂಜೆ ಎಲ್ಲ ಕಡೆಯಲ್ಲಿ ಸುದ್ದಿ, ಸಮಾಚಾರ, ನೋಡಿ ನಂಬಲಾಗಲ್ಲಿಲ್ಲ. ಬಹಳ ಪ್ರಾರ್ಥಿಸಿದೆ. ನಿನ್ನೆ ಗೆಳೆಯ ಮಾನಸೋ ರೆ ... ಕಥೆ ಮುಗಿಯಿತು ಎಂದರು. ವರುಷದ ಮೇಲೆ ಮಾತನಾಡದೆ, ಅಪಘಾತದ ಘಂಟೆಗಳ ಮೊದಲು ನನ್ನನ್ನು ನೆನೆಸಿಕೊಂಡು ಎರಡು ಮಾತನಾಡುವುದು ಎಂದರೇನು. ಮಹಾಬಲರ ಕತೆ ಓದಿರಲೂಬಹುದು.

ಇದು ಹೀಗೇಕೆ ಆಯಿತು?

ಮೃತ ಗೆಳೆಯನ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವೆ.

***

ಸಾಹಿತ್ಯ ದಾಸೋಹ 223

ಅಧ್ಯಕ್ಷೀಯ ನುಡಿಗಳು

– ಜಿ.ಎನ್. ನರಸಿಂಹಮೂರ್ತಿ

ಎಲ್ಲರಿಗೆ ನಮಸ್ಕಾರ. ಈ ಬಾರಿಯ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ಅಭಿನಂದನೆಗಳು.

ಈ ವೇದಿಕೆ ಅನೇಕ ಪ್ರತಿಭಾವಂತರನ್ನು ಹೊಂದಿದೆ ಎಂಬುದು ಪ್ರತಿ ದಾಸೋಹದಲ್ಲಿಯೂ ಸಾಬೀತಾಗುತ್ತದೆ. ಅನೇಕ ಲೇಖಕರು ಈ ದಾಸೋಹಗಳಿಂದ ಪ್ರೇರಿತರಾಗಿ ಪತ್ರಿಕೆಗಳಲ್ಲಿ ತಮ್ಮ ಸೃಜನಾತ್ಮಕ ಬರಹಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಅನೇಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಹುಮಾನಗಳನ್ನು, ಪ್ರಶಸ್ತಿಗಳನ್ನು ಗಳಿಸುತ್ತಿರುವುದು ತುಂಬಾ ಸಂತೋಷದ ವಿಷಯ. ಇದು ಈ ವೇದಿಕೆಯ ಒಂದು ಸೌಭಾಗ್ಯ. ಗಟ್ಟಿ ನೆಲೆಯ ಲೇಖಕರು ಇಲ್ಲ ಪ್ರಸ್ತುತವಾದ ಕೃತಿಗಳ ಬಗ್ಗೆ ಪರಸ್ಪರ ಪರಾಮರ್ಶೆ ಮಾಡುತ್ತ ಲೇಖಕರಿಗೆ ಹೊಸ ದೃಷ್ಟಿಕೋನ, ವಿಮರ್ಶಾತ್ಮಕ ನೆಲೆಗಳನ್ನು ಒದಗಿಸುತ್ತಾ ಬಂದಿದ್ದಾರೆ. ಇದು ಒಂದು ಅಭ್ಯಾಸದ ತಾಣವಾಗಿಯೂ ಸ್ನೇಹಪರ ವಾತಾವರಣವಿರುವ ತಾಣವಾಗಿಯೂ ಇದೆ. ಇದಕ್ಕಾಗಿ ಇಲ್ಲ ಭಾಗವಹಿಸುವ ಎಲ್ಲರಿಗೂ ಮತ್ತು ವಿಶೇಷವಾಗಿ ಈ ವೇದಿಕೆಯ ಸಂಘಟಕರಿಗೂ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

ಇಂದು ಹದಿನೆಂಟು ಜನ ಲೇಖಕರು ತಮ್ಮ ತಮ್ಮ ಪ್ರಸ್ತುತಿಗಳನ್ನು ಇಲ್ಲ ಮಂಡನೆ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

1. ಶ್ರೀಮತಿ ಶೀಲಾ ಅರಕಲಗೂಡು – 'ಸ್ಫುರದ್ರೂಪಿ ಗೆಳೆಯ'

ಮೊದಲು ಶ್ರೀಮತಿ ಶೀಲಾ ಅರಕಲಗೂಡು ಅವರು 'ಸ್ಫುರದ್ರೂಪಿ ಗೆಳೆಯ' ಎಂಬ ಪ್ರಸ್ತುತಿಯನ್ನು ಮಂಡಿಸಿದರು. ಲಲಿತ ಪ್ರಬಂಧ ಎಂಬ ಶೀರ್ಷಿಕೆಯನ್ನು ನೀಡಿದ್ದಾರೆ. ಇಲ್ಲ ಕಥೆಯ ರೀತಿಯಲ್ಲ ವಿವರಗಳದ್ದು ಲೇಖನ ಬೆಳೆಯುತ್ತದೆ. ಇದನ್ನು ಲಲಿತ ಪ್ರಬಂಧ ಎನ್ನಬಹುದೇ, ಅನುಭವ ಕಥನ ಎನ್ನಬಹುದೇ ಅಥವಾ ಕಿರುಗತೆ ಎನ್ನಬಹುದೇ ಎಂಬುದು ಚಿಂತಿಸಬಹುದಾದ ವಿಷಯ. ಆದರೆ ಅವರು ಓದಿದ ರೀತಿ ಬಹಳ ಸೊಗಸಾಗಿತ್ತು. ಕಡೆಯಲ್ಲ ತಿರುವು ಆಕರ್ಷಕವಾಗಿದೆ.

2. ಶ್ರೀ ಎನ್.ವಿ.ರಘುರಾಮ್ – 'ಜ್ಯೋತಿ'

ಅನಂತರ ಶ್ರೀ ಎನ್.ವಿ.ರಘುರಾಮ್ ಅವರು ಹೊಸ ಬಗೆಯ ಪ್ರಯತ್ನದ ಒಂದು ಲೇಖನವನ್ನು ಮಂಡಿಸಿದರು. ಶ್ರೀಮತಿ ಸರಸ್ವತಿ ನಟರಾಜ್ ಅವರ 'ಜ್ಯೋತಿ' ಎಂಬ ಒಂದು ಕಥೆಯ ಬಗೆಗಿನ ಚರ್ಚೆಯನ್ನು ಪತಿ-ಪತ್ನಿಯರ ಸಂಭಾಷಣೆಯ ಮೂಲಕ ನಡೆಸಿಕೊಡುವುದು ವಿನೂತನ ಪ್ರಯತ್ನವಾಗಿದೆ. ಆ ಕಥೆಯ ಮೂಲ ಲೇಖಕರಿಗೆ ಇದರಿಂದ ಬಹಳ ಪ್ರಯೋಜನವಿದೆ. ಅವರು ಆ ಕೃತಿಯನ್ನು ಬೆಳೆಸಲು, ಹೊಸ ಹೊಳಹುಗಳನ್ನು ಕಂಡುಕೊಳ್ಳಲು ರಘುರಾಮ್ ಅವರ ಪ್ರಸ್ತುತಿ ಬಹಳ ಪ್ರಯೋಜನಕಾರಿಯಾಗಿದೆ. ಇದರ ಒಂದೇ ಮಿತಿ ಎಂದರೆ ಆ ಮೂಲ ಕಥೆಯನ್ನು ಓದಿದವರಿಗೆ ಮಾತ್ರ ಇದು ದಕ್ಕುತ್ತದೆ. ಹೇಗಾದರೂ ಶ್ರೀ ರಘುರಾಮ್ ಅವರ ಹೊಸ ರೀತಿಯ ವಿಮರ್ಶೆಯ ಪ್ರಸ್ತುತಿ ಅಭಿನಂದನಾರ್ಹ.

ಜಿ.ಎಸ್. ನರಸಿಂಹ ಮೂರ್ತಿ

223ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಜಿ.ಎಸ್. ನರಸಿಂಹಮೂರ್ತಿಯವರು ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಅಧಿಕಾರಿ. ಬ್ಯಾಂಕಿಗೆ ಸೇರಿದ ಆರಂಭಿಕ ದಿನದಿಂದಲೂ ಇವರಿಗೆ ದೈನಂದಿನ ಬ್ಯಾಂಕ್ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಭದ್ರ ಬುನಾದಿ ರೂಪಿಸುವ ಕಾರ್ಯದ ಬಗ್ಗೆ ಹೆಚ್ಚಿನ ಆಸಕ್ತಿ. ಪ್ರಾ.ಎಚ್ಚೆಸ್ಕೆಯವರ ಮಾರ್ಗದರ್ಶನದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಏರ್ಪಡಿಸುತ್ತಿದ್ದ ಕನ್ನಡದಲ್ಲಿ ಬ್ಯಾಂಕಿಂಗ್ ಕಮ್ಮಟಗಳು, ಅನುವಾದ ಕಮ್ಮಟ, ಬ್ಯಾಂಕಿಂಗ್ ನಿಘಂಟು ರಚನೆ, 'ಬ್ಯಾಂಕಿಂಗ್ ಪ್ರಪಂಚ' ನಿಯತಕಾಲಿಕ ಪ್ರಕಟಣೆ, ಸಾಹಿತ್ಯ ದಾಸೋಹದ ಆಯೋಜನೆ ಮುಂತಾದುವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು ಇವರು.

ವಿವಿಧ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಇನ್ನೂ ಕಾಲಿಡುವ ಮುನ್ನವೇ ಕನ್ನಡ ಭಾಷೆಯ ಬೆಳವಣಿಗೆ ಮತ್ತು ಬಳಕೆಯಲ್ಲಿ ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ ಚಿಂತನೆ ಹರಿಸಿದವರಲ್ಲಿ ನರಸಿಂಹ ಮೂರ್ತಿಯವರು ಪ್ರಮುಖರು. ಈ ನಿಟ್ಟಿನಲ್ಲಿ ಕೆಲವು ಸಮಾನ ಮನಸ್ಕರ ಜೊತೆಗೂಡಿ ಕನ್ನಡ ಗಣಕ ಪರಿಷತ್ತು ಸ್ಥಾಪಿಸಿ, ತನ್ಮೂಲಕ ಗಣಕ ಜಗತ್ತಿನಲ್ಲಿ ಕನ್ನಡ ಭಾಷೆಯನ್ನು ಅಳವಡಿಸಲು ಆರಂಭಿಸಿದುದು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಇಂದು ಕನ್ನಡ ಗಣಕಲೋಕದಲ್ಲಿ ಸರ್ವವ್ಯಾಪಿಯಾಗಿರುವ 'ನುಡಿ' ಕನ್ನಡ ತಂತ್ರಾಂಶದ ಆವಿಷ್ಕಾರ, ಕನ್ನಡದ ಅಪ್ರತಿಮ ಕೃತಿಗಳಾದ ಕುಮಾರವ್ಯಾಸ ಭಾರತ, ಪಂಪ ಭಾರತ, ನಿಸಾರ್ ಅಹಮದ್ ಅವರ ಸಮಗ್ರ ಸಾಹಿತ್ಯದ ಸಿ.ಡಿ.ಗಳ ಲೋಕಾರ್ಪಣೆ ನರಸಿಂಹ ಮೂರ್ತಿಯವರು ಕಾರ್ಯದರ್ಶಿಯಾಗಿರುವ ಕನ್ನಡ ಗಣಕ ಪರಿಷತ್ತಿನ ಹೆಗ್ಗಳಿಕೆ. ಅನೇಕ ಸರ್ಕಾರಿ ಇಲಾಖೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಬಹಳಷ್ಟು ಖಾಸಗಿ ಸಂಸ್ಥೆಗಳಿಗೂ ಕನ್ನಡ ತಂತ್ರಾಂಶಗಳನ್ನು ರೂಪಿಸಿಕೊಡುವಲ್ಲಿ ಇವರ ನಿಸ್ವಾರ್ಥ ಪ್ರಯತ್ನ ತುಂಬಾ ಶ್ಲಾಘನೀಯ. ಕನ್ನಡ ಸಾಹಿತ್ಯವನ್ನೂ ಆಳವಾಗಿ ಅಧ್ಯಯನ ಮಾಡಿರುವ ನರಸಿಂಹ ಮೂರ್ತಿಯವರು ಅನೇಕ ಹಳೆಗನ್ನಡ ಗ್ರಂಥಗಳಿಗೂ ತಂತ್ರಾಂಶದ ಸ್ಪರ್ಶ ನೀಡಿ ಅವುಗಳನ್ನು ಶಾಶ್ವತವಾಗಿ ನೆಲೆಗೊಳಿಸುವ ಕಾರ್ಯಕ್ರಮದಲ್ಲಿ ನಿರತರಾಗಿದ್ದಾರೆ.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮೊದಲ 'ಸಾಹಿತ್ಯ ದಾಸೋಹ' ನಡೆದಾಗಿನಿಂದಲೂ ದಾಸೋಹದ ಭಾಗವಾಗಿರುವ ಬಹುಮುಖ ಪ್ರತಿಭೆಯ ನರಸಿಂಹ ಮೂರ್ತಿಯವರು ಇಂದಿನ 223ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿರುವುದು ಹೆಮ್ಮೆಯ ವಿಷಯ.

3. ಶ್ರೀಮತಿ ಸ್ನೇಹ ಶಶಿಧರ – 'ಕ್ಯಾಲೆಂಡರ್ ಕಲರವ'

ಮೂರನೆಯದಾಗಿ ಶ್ರೀಮತಿ ಸ್ನೇಹ ಶಶಿಧರ ಅವರು 'ಕ್ಯಾಲೆಂಡರ್ ಕಲರವ' ಎನ್ನುವ ಕುತೂಹಲಕಾರಿ ಶೀರ್ಷಿಕೆಯೊಂದಿಗೆ ತಮ್ಮ ಪ್ರಸ್ತುತಿಯನ್ನು ಮಂಡಿಸಿದರು. ಹೊಸ ವರ್ಷ ತರಬಹುದಾದ ಹೊಸ ಹರ್ಷ, ಹೊಸ ಕ್ಯಾಲೆಂಡರ್, ಆ ವರ್ಷದಲ್ಲಿ ಬರುವ ರಜಾ ದಿನಗಳು ಮುಂತಾದವುಗಳನ್ನು ಕುರಿತ ಅನಿಸಿಕೆಗಳು ಇಲ್ಲಿವೆ. ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿಗಳಿಗೆ ರಜವಿದೆ. ಆದರೆ ನಾಗರ ಪಂಚಮಿಗೆ ರಜವಿಲ್ಲ. ಗಣೇಶನ ಹಬ್ಬಕ್ಕೆ ರಜವಿದೆ, ಗೌರಿ ಹಬ್ಬಕ್ಕೆ ರಜೆ ಇಲ್ಲ. ಹೀಗೆ ಒಂದು ರೀತಿಯ ರಜಾ ಮೀಮಾಂಸೆ ಇಲ್ಲಿ ಕಾಣಿಸುತ್ತದೆ. ಇನ್ನಷ್ಟು ಸಾರ್ವತ್ರಿಕವಾಗಿ ಪರಿಶೀಲಿಸಿ ಈ ರಜೆಯ ಮೀಮಾಂಸೆಯನ್ನು ಮಂಡಿಸಲು ಅವಕಾಶವಿದೆ.

4. ಶ್ರೀಮತಿ ನಾಗರತ್ನ ಚಂದ್ರಶೇಖರ್ – 'ಎಣ್ಣೆ ನಿಮ್ದು ಊಟ ನಮ್ದು'

ಅನಂತರ ಶ್ರೀಮತಿ ನಾಗರತ್ನ ಚಂದ್ರಶೇಖರ್‌ರವರು 'ಎಣ್ಣೆ ನಿಮ್ದು ಊಟ ನಮ್ದು' ಎನ್ನುವ ಶೀರ್ಷಿಕೆಯ ಮಂಡನೆಯನ್ನು ಪ್ರಸ್ತುತಪಡಿಸಿದರು. ಬರವಣಿಗೆಯಲ್ಲಿ ಸಿದ್ಧಹಸ್ತರಾದ ಶ್ರೀಮತಿ ನಾಗರತ್ನ ಚಂದ್ರಶೇಖರ್‌ರವರು ಅನೇಕ ಯಶಸ್ವಿ ಲೇಖನಗಳನ್ನು ಸಂಕಲನದ ರೂಪದಲ್ಲಿ ಹೊರತಂದಿದ್ದಾರೆ. ಅವರ ಲೇಖನಗಳ ಮುಖ್ಯ ಗುಣವೆಂದರೆ ಶುದ್ಧ ಹಾಸ್ಯ ಪ್ರಜ್ಞೆ. ನಗೆಯನ್ನು ಹೊಮ್ಮಿಸುವತ್ತ ಅವರ ಬರವಣಿಗೆ ಸದಾ ಕ್ರಿಯಾಶಾಲಿಯಾಗಿರುತ್ತದೆ. ಇಲ್ಲಿಯೂ ಸಹ ಅವರು ಶ್ಲೇಷೆಯನ್ನು ಚೆನ್ನಾಗಿ ಬಳಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಈ ಶ್ಲೇಷೆ ಕುತೂಹಲ ಹುಟ್ಟಿಸುವ ಘಟನೆಗಳನ್ನು ತಂದಿಡುತ್ತದೆ. ಇಲ್ಲಿಯೂ ಕಾಲಭೈರವನಿಗೆ ಮದ್ಯವನ್ನು ನೈವೇದ್ಯ ಮಾಡುವ ವಿವರ ಬಹಳ ಸ್ವಾರಸ್ಯಕರವಾಗಿ ಬಂದಿದೆ. ಇದು ಕುವೆಂಪು ಅವರ ಜನಪ್ರಿಯ ವಾಲ್ಮೀಕಿ ರಾಮಾಯಣದಲ್ಲಿ ಸೀತೆ ಅರಣ್ಯಕ್ಕೆ ಹೋಗುವ ಮುನ್ನ ಗಂಗಾ ನದಿಯನ್ನು ದಾಟುವಾಗ ನಾವು ಕ್ಷೇಮವಾಗಿ ಬಂದರೆ ನಿನಗೆ ಅನೇಕ ಪೀಪಾಯಿಗಳಲ್ಲಿ ಸುರೆಯನ್ನು ಅರ್ಪಿಸುತ್ತೇನೆ ಎಂದು ಹರಕೆ ಹೊತ್ತ ಅಥವಾ ವಾಗ್ದಾನ ನೀಡಿದ ಪ್ರಸಂಗ ನೆನಪಾಗುತ್ತದೆ. ಶ್ರೀಮತಿ ನಾಗರತ್ನ ಅವರಿಗೆ ಅಭಿನಂದನೆಗಳು.

5. ಶ್ರೀಮತಿ ರೇಣುಕಾ ದೇಸಾಯಿ – 'ವೆಂಕಿ ಅಂತಾಳ'

ಶ್ರೀಮತಿ ರೇಣುಕಾ ದೇಸಾಯಿ 'ವೆಂಕಿ ಅಂತಾಳ' ಎನ್ನುವ ಅನುಭವ ಕಥನವನ್ನು ಪ್ರಸ್ತುತಪಡಿಸಿದರು. ಇದು ಆತ್ಮೀಯ ಸನ್ನಿವೇಶದ ವಿವರಗಳಿಂದ ಕೂಡಿದೆ. ಅಂತರಂಗದ ಪ್ರೀತಿ ಸಾರ್ವಕಾಲಿಕ ವಾದದ್ದು. ಅದಕ್ಕೆ ತೋರಿಕೆಯ ಹಂಗಿಲ್ಲ ಎನ್ನುವುದನ್ನು ಬಿಂಬಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಹಜವಾಗಿರುವ ಇಂತಹ ಮಾನವೀಯ ಪ್ರೀತಿಯ ದರ್ಶನ ಇಲ್ಲಿ ದೊರೆಯುತ್ತದೆ. ಈ ಹಿಂದೆ ಸುನಂದ ಬೆಳಗಾವ್ಕರ್ ಅವರು ರಚಿಸಿದ ಕಜ್ಜಾಯ ಎಂಬ ಪ್ರಬಂಧ ಸಂಕಲನದ ಧಾಟಿಯನ್ನು ನೆನಪಿಸುತ್ತದೆ. ಮನೆಯ ಕಷ್ಟ ಸುಖಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುತ್ತೇನೆ. ಜೀವನದ ರಸಗಳಿಗೆಗಳನ್ನೂ ಅನುಭವಿಸುವ ಆರೋಗ್ಯಕರ ಸಮಾಜದ ಚಿತ್ರಣವನ್ನು ಈ ಪ್ರಸ್ತುತಿ ಒದಗಿಸುತ್ತಿದೆ.

6. ಶ್ರೀ ವಿಠಲ ಇಜೇರಿ – 'ಜಂಬು ನಾಗಯ್ಯನ ಸೊಸೆ' (ಕಿಲಾಡಿ ಕಥೆಗಳು)

ಶ್ರೀ ವಿಠಲ ಇಜೇರಿಯವರು 'ಕಿಲಾಡಿ ಕಥೆಗಳು' ಎಂಬ ಶೀರ್ಷಿಕೆಯಲ್ಲಿ ಜಾನಪದೀಯ ಅಂಶಗಳಿರುವ ಕಥೆಯೊಂದನ್ನು ಪ್ರಸ್ತುತಿಪಡಿಸಿದರು. ಅವರ ವ್ಯಾಪಕ ಓದು, ಅಪಾರವಾದ ಲೋಕ ಅನುಭವ ಇವೆಲ್ಲ ಅವರ ಬರವಣಿಗೆಯಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಸ್ತುತ 'ಜಂಬು ನಾಗಯ್ಯನ ಸೊಸೆ' ಆ ಊರಿನ ಅರಸನನ್ನೇ ಸೋಲಿಸುವ ಪ್ರಸಂಗದ ಕಥೆಯಾಗಿದೆ. ನಮ್ಮ ಮಹಿಳೆಯರು ಯಾವ ಕಾಲದಿಂದಲೂ ಲೋಕ ಅನುಭವ, ಸಹಜವಾದ ಜಾಣ್ಮೆ, ಹಾಗೂ ಕುಟುಂಬದ ಹಿತವನ್ನು ಕಾಯುವ ಮನೋಭಾವವನ್ನು ಹೊಂದಿದ್ದರು ಎಂಬುದನ್ನು ಈ ಕಥೆ ಬಿಂಬಿಸುತ್ತದೆ. ವಡ್ಡಾರಾಧನೆಯಲ್ಲಿ ಬರುವ, ಒಬ್ಬ ಮಹಿಳೆ ಕಳ್ಳರೊಂದಿಗೆ ಸಿಕ್ಕಿಬಿದ್ದಾಗ ಹೇಗೆ ಜಾಣತನದಿಂದ ಅವರನ್ನೆಲ್ಲ ನಿವಾರಿಸಿಕೊಂಡು ಕ್ಷೇಮವಾಗಿ ತನ್ನ ಆಭರಣಗಳ ಸಮೇತ ಮನೆ ಸೇರುತ್ತಾಳೆ ಎಂಬ ಕಥೆಯನ್ನು ನೆನಪಿಸುತ್ತದೆ.

7. ಶ್ರೀಮತಿ ಸಿ.ಆರ್.ಕಮಲಾಕ್ಷಿ – 'ಆ ಕಿಟಕಿಯವ'

ಶ್ರೀಮತಿ ಸಿ.ಆರ್.ಕಮಲಾಕ್ಷಿಯವರು 'ಆ ಕಿಟಕಿಯವ' ಎಂಬ ಕಥೆಯನ್ನು ಪ್ರಸ್ತುತಪಡಿಸಿದರು. ಕಥೆಯ ಹರಹು ಚಿಕ್ಕದಾಗಿದ್ದು ಒಂದು ಘಟನೆಯನ್ನು ಆಧರಿಸಿ ನಡೆಯುತ್ತದೆ. ಕಥೆಯ ವಿಸ್ತಾರಕ್ಕೂ ಪಾತ್ರ ಪೋಷಣೆಗೂ ಸಾಕಷ್ಟು ಅವಕಾಶಗಳಿವೆ. ಆದರೆ ಕಥೆ ಕುತೂಹಲವನ್ನು ಮೂಡಿಸುತ್ತದೆ. ಭ್ರಮನಿರಸನವನ್ನು ಕಣ್ಮುಂದೆ ತರುತ್ತದೆ.

೮. ಶ್ರೀ ಗಣಪತಿ ಹೆಗಡೆ – ಕಾವ್ಯಸ್ಯಾತ್ಮಾ ಧ್ವನಿಃ

ಶ್ರೀ ಗಣಪತಿ ಹೆಗಡೆಯವರು ಅಭಿಜಾತ ಸಾಹಿತ್ಯದ, ಛಂದಸ್ಸು ವ್ಯಾಕರಣ ಶಾಸ್ತ್ರಗಳ ಅಧ್ಯಯನ ಮಾಡಿರುವವರು. ಅವರು ಕಾವ್ಯ ಮೀಮಾಂಸೆಯ ಬಗ್ಗೆ ಇಂದು ಪ್ರಸ್ತುತಪಡಿಸಿರುವ 'ಕಾವ್ಯಸ್ಯಾತ್ಮಾ ಧ್ವನಿಃ' ಎಂಬುದು ಉಪಯುಕ್ತ ಲೇಖನವಾಗಿದೆ. ನುಡಿಗಟ್ಟುಗಳ ನಿರ್ಮಾಣ, ಒಂದು ಪದದ ಬೇರೆ ಬೇರೆ ರೀತಿಯ ಅರ್ಥ ವಿವರಣೆ ಇವೆಲ್ಲವೂ ಇಲ್ಲಿ ಓದುಗರಿಗೆ ಹೊಸ ಅಂಶಗಳನ್ನು ತಿಳಿಸುತ್ತವೆ. ಒಂದು ಪದಕ್ಕೆ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥ ಮತ್ತು ತಾತ್ಪರ್ಯಾರ್ಥ ಎಂಬುವೆಲ್ಲ ಇರುತ್ತದೆ ಎನ್ನುವುದು ನಾವು ಪದಗಳನ್ನು ನೋಡುವ ರೀತಿಗೆ ಹೊಸ ದೃಷ್ಟಿಕೋನವನ್ನು ನೀಡುತ್ತದೆ. ಪ್ರಶ್ನೋತ್ತರದ ಮೂಲಕ ಸಂಕೀರ್ಣವಾದ ವಿಷಯಗಳನ್ನು ಪರಿಚಯಿಸುವ ಕ್ರಮ ಬಹಳ ಚೆನ್ನಾಗಿದೆ. ಸಾಹಿತ್ಯ ಶಾಸ್ತ್ರ ವಿಷಯಗಳನ್ನು ಕುರಿತಾದ ವಿಪುಲವಾದ ಬರವಣಿಗೆಯಲ್ಲಿ ಗಣಪತಿ ಹೆಗಡೆಯವರು ತೊಡಗಿಕೊಂಡಿದ್ದಾರೆ .

10. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ – 'ಜ್ಯೋತಿ'

ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ಅವರು 'ಜ್ಯೋತಿ' ಎಂಬ ಕಥೆಯನ್ನು ಪ್ರಸ್ತುತಪಡಿಸಿದ್ದಾರೆ. ತಾಯಿ ಇಲ್ಲದ ಹುಡುಗಿ ಜ್ಯೋತಿ. ಅವಳಿಗೆ ಹೇಗೋ ಒಂದು ಮದುವೆಯಾಯಿತು. ಗಂಡ ದುಶ್ಚಟಗಳ ದಾಸ. ಜ್ಯೋತಿ ಅವನ ನಡತೆಯನ್ನು ಸುಧಾರಿಸಿದಳು ಎಂಬುದು ಈ ಕಥೆಯ ಹೂರಣ. ಸರಳಗೊಳಿಸಿದ ಕಥೆ ಎಂದು ಹೇಳಬಹುದು.

11. ಶ್ರೀ ಕೆ.ಎನ್. ಭಗವಾನ್ – 'ಕೊಳದ ಮೇಲಿನ ಗಾಳಿ' (ಪುಸ್ತಕ ಪರಿಚಯ)

ಶ್ರೀ ಭಗವಾನ್ ಅವರು 'ಕೊಳದ ಮೇಲಿನ ಗಾಳಿ' ಎಂಬ ಎಂ.ಆರ್.ಕಮಲ ಅವರು ಬರೆದ ಪುಸ್ತಕದ ಪರಿಚಯವನ್ನು ತುಂಬಾ ಸೊಗಸಾಗಿ ಮಾಡಿಕೊಟ್ಟರು. ಶ್ರೀಮತಿ ಎಂ.ಆರ್.ಕಮಲ ಅವರು ಅನೇಕ ಕೃತಿಗಳನ್ನು ಹೊರತಂದಿದ್ದಾರೆ. ಅವರ ಈ ಪುಸ್ತಕ ಪು.ತಿ.ನರಸಿಂಹಾಚಾರ್ ಅವರ ಬರವಣಿಗೆಗಳನ್ನು ಅರ್ಥಮಾಡಿಕೊಳ್ಳಲು ಬಹಳ ಮಟ್ಟಿಗೆ ನೆರವಾಗುತ್ತದೆ. ಪು.ತಿ.ನ. ಅವರ ಹಲವು ಪದ್ಯಗಳು, ಲೇಖನಗಳು ಓದುಗರಿಗೆ ಸುಲಭವಾಗಿ ದಕ್ಕುವುದಿಲ್ಲ ಎನ್ನುವ ಮಾತಿದೆ. ಹಾಗೆ ಅವುಗಳನ್ನು ದಕ್ಕಿಸಿಕೊಳ್ಳಲು ಈ ಕೃತಿ ನೆರವಾಗುತ್ತದೆ ಮತ್ತು ಮುಂದೆ ಪು.ತಿ.ನ. ಅವರನ್ನು ಅಧ್ಯಯನ ಮಾಡಲು ಸ್ಫೂರ್ತಿ ನೀಡುತ್ತದೆ. ಭಗವಾನ್ ಅವರ ಈ ಪ್ರಯತ್ನ ಸಾರ್ಥಕವಾಗಿದೆ.

12. ಶ್ರೀಮತಿ ಪೂರ್ಣಿಮಾ ಭಗವಾನ್ – ಎರಡು ಕವನಗಳು

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಎರಡು ಕವನಗಳನ್ನು ಪ್ರಸ್ತುತಪಡಿಸಿದರು. ಅನೇಕ ಆಶಯಗಳು ಮೊದಲಿನ ಪದ್ಯದಲ್ಲಿ ಕಂಡುಬರುತ್ತದೆ. 'ಜೀವ ಜಂತುಗಳ ಪಾಲು ಕಸಿದವರು ಯಾರು' ಎಂಬ ಪ್ರಶ್ನೆ ಮೂಡುತ್ತದೆ. ಎರಡನೆಯ ಪದ್ಯ 'ನನ್ನೊಳಗಿನ ನಾನು' ಸುಂದರ ರಚನೆ. ನಿಯಮಬದ್ಧವಾದ ಜೀವನವನ್ನು ನಡೆಸಿದರೆ ಜೀವನ ಸುಂದರವಾಗುತ್ತದೆ ಎಂಬ ಸಂದೇಶವನ್ನು ಬಿಂಬಿಸುತ್ತದೆ.

13. ಶ್ರೀಮತಿ ಶ್ರವಣಕುಮಾರಿ – 'ಎಷ್ಟೊಂದು ಕಾಲದಿಂದ ಹಂಬಲಿಸಿದ್ದು'

ಶ್ರೀಮತಿ ಶ್ರವಣಕುಮಾರಿಯವರು 'ಎಷ್ಟೊಂದು ಕಾಲದಿಂದ ಹಂಬಲಿಸಿದ್ದು' ಎಂಬ ಒಂದು ಅನುಭವ ಕಥನವನ್ನು ಪ್ರಸ್ತುತಪಡಿಸಿದರು. ಶ್ರೀಮತಿ ಶ್ರವಣಕುಮಾರಿಯವರು ಯಶಸ್ವಿ ಕಥೆಗಾರ್ತಿ, ಈಗಾಗಲೇ ಪ್ರಕಟಣೆಗಳನ್ನು ಹೊರತಂದು ಆ ಪೈಕಿ ಹಲವು ಕೃತಿಗಳಿಗೆ ವಿವಿಧ ಪ್ರಶಸ್ತಿಗೆ ಭಾಜನರಾಗಿರುವವರು. ಅವರ ಬರವಣಿಗೆಯ ಬಗ್ಗೆ

ಒಳ್ಳೆಯ ಮಾತುಗಳನ್ನಾಡಿ ಸಲಹೆ ಸೂಚನೆಗಳನ್ನು ನೀಡಿದ ಖ್ಯಾತ ಲೇಖಕ ಶ್ರೀ ಸುಬ್ರಾಯ ಚೊಕ್ಕಾಡಿ ಅವರ ಭೇಟಿ ಮಾಡುವ ಪ್ರಯತ್ನ, ಅದರಲ್ಲಿ ಅವರು ಕಂಡ ಯಶಸ್ಸು ಇವೆಲ್ಲವನ್ನೂ ಈ ಪ್ರಸ್ತುತಿಯಲ್ಲಿ ಹಂಚಿಕೊಂಡಿದ್ದಾರೆ. ಹಿರಿಯ ಸಾಹಿತಿಗಳ ಬಗ್ಗೆ ಅವರಿಗಿರುವ ಅಭಿಮಾನ, ಅವರನ್ನು ನೋಡಿ ಮಾತನಾಡಿ ಮಾತನಾಡಿಸುವ ದಟ್ಟವಾದ ಹಂಬಲ, ಅದು ಈಡೇರಿದಾಗ ಅನುಭವಿಸಿದ ಸಾರ್ಥಕ ಕ್ಷಣಗಳು ಎಲ್ಲವನ್ನು ವಿವರವಾಗಿ ತೆರೆದಿಟ್ಟಿದ್ದಾರೆ. ಇಂತಹ ಅನುಭವ ಕಥನ ಎಲ್ಲರಿಗೂ ಸಂತೋಷ ನೀಡುತ್ತದೆ.

14. ಶ್ರೀ ಬಿ.ಆರ್.ವಿಜಯಕುಮಾರ್ – 'ಆಂತರ್ಯ'

ಶ್ರೀ ಬಿ.ಆರ್.ವಿಜಯಕುಮಾರ್ ಅವರು 'ಆಂತರ್ಯ' ಎಂಬ ಕವನವನ್ನು ಪ್ರಸ್ತುತಿಪಡಿಸಿದರು. ಕಾವ್ಯ ರಚನೆಯ ಗುಟ್ಟನ್ನು ಬಿಚ್ಚಿಡುವ ಕವಿತೆ. ಕೇಳಿದಾಗ ಸ್ವಚ್ಛಂದ ಛಂದದಲ್ಲಿದೆ ಎನಿಸಿದರೂ ಅವರು ರಚಿಸಿರುವ ಕವಿತೆ ಷಟ್ಪದಿಯ ರೂಪದಲ್ಲಿದೆ. ಸೃಜನಶೀಲ ವಿದ್ವಾಂಸರಿಗೆ ಮಾತ್ರ ಇಂತಹ ರಚನೆಗಳು ಸಾಧ್ಯವಾಗುತ್ತವೆ. ಈ ವೇದಿಕೆಯಲ್ಲಿ ಇಂತಹ ಹಲವರು ಇದ್ದಾರೆ ಎನ್ನುವುದೇ ಒಂದು ಹೆಮ್ಮೆಯ ವಿಷಯ.

15. ಶ್ರೀಮತಿ ಮಾಧುರಿಕೃಷ್ಣ – 'ವಿಳಂಬ ವಿವರ್ಣತೆ' (ಪ್ರಯತ್ನ ಹಾಗೂ ವೈಫಲ್ಯ ಮಾಲಿಕೆ)

ಶ್ರೀಮತಿ ಮಾಧುರಿಕೃಷ್ಣ ಅವರು 'ಟ್ರಯಲ್ ಅಂಡ್ ಎರರ್ಸ್/ ಪ್ರಯತ್ನ ಹಾಗೂ ವೈಫಲ್ಯ' ಎಂಬ ಶೀರ್ಷಿಕೆಯಲ್ಲಿ ಒಂದು ಪ್ರಸ್ತುತಿಯನ್ನು ಮಾಡಿದ್ದಾರೆ. ಮಾಲಿನಲ್ಲಿ ಕಂಡ ಹುಡುಗಿಯನ್ನು ಹರಸಿದ ಯುವಕನ ಪ್ರಯತ್ನ ವಿಫಲವಾದ ಘಟನೆ ಇಲ್ಲಿ ಚಿತ್ತರವಾಗಿದೆ. ಇದು ಕಥೆಯೋ ಅನುಭವ ಕಥನವೋ ಎಂದು ತೀರ್ಮಾನಿಸುವುದು ಸುಲಭವಲ್ಲ. ಎಲ್ಲೋ ಕಥೆಯನ್ನು ಮುಗಿಸುವ ಅವಸರವಿದೆಯೇನೋ ಎನಿಸುತ್ತದೆ. ಭಾಷೆ ಸೊಗಸಾಗಿದೆ.

16. ಶ್ರೀಮತಿ ಮಾಲತಿ ಶ್ರೀನಿವಾಸನ್ – "ಸುಳಿಯೊಳು ಸಿಲುಕಿದೆ ಅಂಬಿಗ"

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು "ಸುಳಿಯೊಳು ಸಿಲುಕಿದೆ ಅಂಬಿಗ" ಎಂಬ ಕಥೆಯ ಮುಂದುವರಿದ ಹಾಗೂ ಎರಡನೆಯ ಭಾಗವನ್ನು ಪ್ರಸ್ತುತಿಪಡಿಸಿದರು. ತಾಯಿಯ ಕನಸನ್ನು ಮಗಳು ನನಸಾಗಿಸಿದ ಕಥಾಹಂದರ ಇದರದ್ದು. ಸುಮಾರು 50 ವರ್ಷಗಳ ಹಿಂದಿನ ಕೂಡು ಕುಟುಂಬಗಳ ಮಿತಿಯನ್ನು ಕಥೆ ಕಂಡರಿಸುತ್ತದೆ. ತನ್ನ ಅನುಭವವನ್ನೇ ಆಧರಿಸಿ ಕುಟುಂಬದ ಎಲ್ಲರ ವಿಷಯದಲ್ಲಿಯೂ ತೀರ್ಮಾನ ತೆಗೆದುಕೊಳ್ಳುವ ದೊಡ್ಡಪ್ಪ, ಅವರ ಮಾತನ್ನು ತೆಗೆದುಹಾಕಲಾರದ ವಧು ಅನಿವಾರ್ಯವಾಗಿ ಇಷ್ಟವಿಲ್ಲದ ಮದುವೆಗೆ ಒಪ್ಪಬೇಕಾಗುತ್ತದೆ. ಅನಿವಾರ್ಯ ಹೊಂದಾಣಿಕೆಯಲ್ಲಿ ಜೀವನ ಸವೆಸಿದ ಮೇಲೆ ಅವಳ ಮಗಳು ತನ್ನ ಇಷ್ಟದಂತೆ ಒಬ್ಬ ಶ್ರೇಷ್ಠ ಗಾಯಕಿಯಾಗಿ ಹೊರಹೊಮ್ಮಿದ್ದನ್ನು ಕಥೆ ಚಿತ್ರಿಸುತ್ತದೆ. ಈ ಕಥೆಯಲ್ಲಿ ಯಾವ ರೀತಿಯ ಪ್ರತಿಭಟನೆಯೂ ಇಲ್ಲ ಎನ್ನುವುದು ಲೇಖಕಿಯ ಪೀಳಿಗೆಯ ಚಿಂತನ ರೀತಿಯನ್ನು ಸೂಚಿಸುತ್ತದೆ ಎನಿಸುತ್ತದೆ

17. ಡಾ. ಸತ್ಯವತಿ ಮೂರ್ತಿ– 'ಮತ್ತೆ ಬಂದಳು ಗೌರಿ'

ಡಾಕ್ಟರ್ ಸತ್ಯವತಿ ಮೂರ್ತಿಯವರು 'ಮತ್ತೆ ಬಂದಳು ಗೌರಿ' ಎನ್ನುವ ಪದ್ಯವನ್ನು ಪ್ರಸ್ತುತಪಡಿಸಿದರು. ನಮ್ಮ ಹಬ್ಬಗಳ ಬಗ್ಗೆ ಒಂದು ಚಿಕಿತ್ಸಕ ನೋಟ ಇಲ್ಲಿದೆ. ಕೇವಲ ಅಡುಗೆ, ಊಟ, ಸಂಭ್ರಮಗಳಿಗೆ ಹಬ್ಬಗಳು ಸೀಮಿತ ವಾಗಿವೆಯೇ ಎಂಬ ಪ್ರಶ್ನೆಯನ್ನು ಪದ್ಯ ಎತ್ತುತ್ತದೆ. ಹಬ್ಬ ಹಬ್ಬಗಳ ಹಿಂದಿನ ಅರ್ಥ, ಆಚರಣೆಗೆ ಅಗತ್ಯವಾದ ಶ್ರದ್ಧೆ,

ಭಕ್ತಿಯ ಸಮರ್ಪಣ ಭಾವ ಇವೆಲ್ಲ ಮಾಯವಾಗಿವೆಯೇ ಎಂಬ ಪ್ರಶ್ನೆಯೂ ಇಲ್ಲದೆ. ಹಬ್ಬದ ವಿವರಗಳನ್ನು ನೀಡುತ್ತಲೇ ಇಂತಹ ಅವಲೋಕನವನ್ನು ಮಾಡುವ ಪದ್ಯ ಮೆಚ್ಚುಗೆಗೆ ಅರ್ಹವಾಗಿದೆ.

18. ಶ್ರೀಮತಿ ರಾಧಿಕಾ ಗುಜ್ಜರ್ – "ದ್ವಾದಶಿಯ ಚಕೋಲ್ಯ"

ಶ್ರೀಮತಿ ರಾಧಿಕಾ ಗುಜ್ಜರವರು "ದ್ವಾದಶಿಯ ಚಕೋಲ್ಯ" ಎಂಬ ಕಥೆಯನ್ನು ಪ್ರಸ್ತುತಪಡಿಸಿದರು. ಈ ಕಥೆಯಲ್ಲಿ ತುಂಬು ಜೀವನ ಉತ್ಸಾಹ ಕಂಡುಬರುತ್ತದೆ. ಇದು ಮೆಚ್ಚಿಕೊಳ್ಳಬೇಕಾದ ಅಂಶ. ಅಜ್ಜಿಯ ನೆನಪು ಆತ್ಮೀಯ ವಾತಾವರಣದ ವಿವರಗಳನ್ನು ತೆರೆದಿಡುತ್ತದೆ. ಕಷ್ಟಗಳನ್ನು ಹೇಳಕೊಳ್ಳದ ಮಹಿಳೆ ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಇದು ಬಹುಶಃ ಅನೇಕ ಮಹಿಳೆಯರ ಸಹಜ ಸ್ವಭಾವ ಎನ್ನುವ ಹಾಗೆ ಇಲ್ಲಿ ಚಿತ್ರಿತವಾಗಿದೆ, ಲವಲವಿಕೆಯ ಬರವಣಿಗೆ ಈ ಲೇಖನದ ಹೆಚ್ಚುಗಾರಿಕೆ. ಜೊತೆಗೆ ಚಕೋಲ್ಯ ಎಂಬ ತಿನಿಸಿನ ತಯಾರಿಕೆ ವಿಧಾನವನ್ನು ಲೇಖಕಿ ನೀಡಿದ್ದಾರೆ.

19. ಶ್ರೀ ವೆಂಕಟೇಶ ಕಾಮತ್ – 'ತುಣುಕುಗಳು'

ಶ್ರೀ ವೆಂಕಟೇಶ ಕಾಮತ್ ಅವರು 'ತುಣುಕುಗಳು' ಎಂಬ ಶೀರ್ಷಿಕೆಯಲ್ಲಿ ಮೂರು ನೆನಪುಗಳನ್ನು ತೆರೆದಿಟ್ಟಿದ್ದಾರೆ. ನೆನಪುಗಳನ್ನು ಹಂಚಿಕೊಳ್ಳುವುದು ಒಳ್ಳೆಯದು.. ಮೊದಲ ನೆನಪು ಚೆನ್ನಾಗಿದೆ. . ಮೂರನೆಯ ತುಣುಕು ಒಳ್ಳೆಯ ನೆನಪಾಗಿ ಉಳಿದಿದೆ.

ಈ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ವಹಿಸಲು ನನಗೆ ಅವಕಾಶವನ್ನು ಕೊಟ್ಟ ಸಂಘಟಕರಿಗೆ ಹೃತ್ಪೂರ್ವಕ ಧನ್ಯವಾದಗಳು. ಎಲ್ಲ ಲೇಖಕರಿಗೆ ಅಭಿನಂದನೆಗಳು, ತಾಳ್ಮೆಯಿಂದ ನನ್ನ ಮಾತುಗಳನ್ನು ಕೇಳಿದ ಎಲ್ಲರಿಗೂ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 223 ನಡೆದ ದಿನಾಂಕ: 09 ಮಾರ್ಚ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 14 ಏಪ್ರಿಲ್ 2024 – ಭಾನುವಾರ